ಸಂಪುಟ: 05 ಸಂಚಿಕೆ: 222 ಪುಟಗಳು: 08 ಸೋಮವಾರ 27 ಅಕ್ಟೋಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ನಿಮ್ಮನ್ನು ಶ್ರೇಷ್ಠ ವ್ಯಕ್ತಿಯನ್ನಾಗಿ ಮಾಡುವುದಕ್ಕೆ ಯಾವ ವಿದ್ಯಾಲಯಗಳು ಇಲ್ಲ. ನಿಮ್ಮ ನಡೆ, ನುಡಿ, ಕೆಲಸ, ವ್ಯವಹಾರ ಮತ್ತು ಆಚರಣೆ ನಿಮ್ಮನ್ನು ಶ್ರೇಷ್ಠ ವ್ಯಕ್ತಿಯನ್ನಾಗಿ ಮಾಡುತ್ತವೆ.

# ಯಾರು ಉತ್ತರಾಧಿಕಾರಿ ..? ಕೈಯೊಳಗೆ ಉರಿ



• ಉದಯವಾಹಿನಿ ಬೆಂಗಳೂರು

ಸರ್ಕಾರ ಎರಡೂವರೆ ವರ್ಷದ ಹೊಸ್ತಿಲಿನಲ್ಲಿರುವಾಗ ಸಂಪುಟ ಪುನಾರಚನೆ ವಿಚಾರ ಪುಷ್ಟಿ ಪಡೆದುಕೊಳ್ಳುತ್ತಿದೆ. ಬಿಹಾರ ಫಲಿತಾಂಶ ಬಳಿಕ ಪುನಾರಚನೆ ಖಚಿತ ಎಂದು ಖುದ್ದು ಸಿಎಂ ಸಿದ್ದರಾಮಯ್ಯ ಸುಳಿವು ನೀಡಿದ್ದಾರೆ. ಆದರೆ ಪುನಾರಚನೆ ಕಸರತ್ತಿಗೆ ಪವರ್ ಶೇರ್ ಪಾಲಿಟಿಕ್ಸ್ ಮೂಲಕ ತಡೆ ಹಾಕುವ ಪ್ರಯತ್ನಗಳೂ ಸದ್ದಿಲ್ಲದೇ ನಡೆಯುತ್ತಿದೆ. ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ನಡುವೆ ಸಂಪುಟ ಪುನಾರಚನೆ ಜಪ ಶುರುವಾಗಿದೆ. ನವೆಂಬರ್ -ಡಿಸೆಂಬರ್‌ನಲ್ಲಿ ನಡೆಯಲಿದೆ ಎನ್ನಲಾದ ಕುರ್ಚಿ ಕಚ್ಚಾಟಕ್ಕೆ ಸಿಎಂ ಸಿದ್ದರಾಮಯ್ಯ ಪುನಾರಚನೆ ದಾಳ ಮೂಲಕ ಸೆಡ್ಡು ಹೊಡೆದಿದ್ದಾರೆ. ಮಾತಾಡಿದ ಸಿಎಂ ಸಿದ್ದರಾಮಯ್ಯ, ಬಿಹಾರ ಫಲಿತಾಂಶ ಬಳಿಕ ಸಂಪುಟ ಪುನಾರಚನೆ ಖಚಿತ ಎಂಬ ಸಂದೇಶ ನೀಡಿದ್ದಾರೆ.

ಮೂರ್ನಾಲ್ಕು ತಿಂಗಳ ಮೊದಲೇ ಹೈಕಮಾಂಡ್ ಪುನಾರಚನೆಗೆ ಸೂಚಿಸಿತ್ತು. ಎರಡೂವರೆ ವರ್ಷ ಆಗಲಿ ಎಂದು ನಾನೇ ಹೇಳಿದ್ದೆ ಎಂದು ಸಿಎಂ ಹೇಳಿದ್ದು, ಈ ವರ್ಷಾಂತ್ಯಕ್ಕೆ ಪುನಾರಚನೆ ಪಕ್ಕಾ ಎಂಬ ಸುಳಿವು ಕೊಟ್ಟಿದ್ದಾರೆ. ಇನ್ನು ಈಗಾಗಲೇ ಕೆಲ ಹಿರಿಯರಿಂದ ತ್ಯಾಗದ ಮಾತು ಕೇಳಿಬರುತ್ತಿದೆ. ಬದಲಾಗುವ ಪರಿಸ್ಥಿತಿ ಎದುರಿಸಲು ಮಾನಸಿಕವಾಗಿ ಕೆಲ ಹಿರಿಯರು ತಯಾರಾಗುತ್ತಿದ್ದಾರೆ.

1 ಯತೀಂದ್ರ ಸಿದ್ದರಾಮಯ್ಯ ಮಾತನಾಡಿದ್ದು ಅಹಿಂದ ಸಂಘಟನೆ ನಾಯಕತ್ವದ ಬಗ್ಗೆ: ಸತೀಶ್ ಜಾರಕಿಹೊಳಿ

2 ಸಚಿವ ಸಂಪುಟ ಪುನಾರಚನೆ ಚರ್ಚೆ ಬಗ್ಗೆ ಈ ಮುಂಚಯೇ ತೀರ್ಮಾನಿಸಲಾಗಿತ್ತು ಈಗ ಅಂತಿಮ ಹಂತಕ್ಕೆ ಬಂದಿರಬಹುದು


3 ಯತೀಂದ್ರ ಹೇಳಿಕೆ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಟೀಕೆ ಹೆಚ್ಚಳ

ಪುನಾರಚನೆಯಾದರೆ, 12ಕ್ಕೂ ಹೆಚ್ಚು ಸೀನಿಯರ್‌ಗಳಿಗೆ ಗೇಟ್‌ಪಾಸ್ ಕೊಡುವ ಸಾಧ್ಯತೆಯಿದೆ. ಇದಕ್ಕೆ ಪೂರಕವಾಗಿ ಹಿರಿಯ ಸಚಿವ ಕೃಷ್ಣಬೈರೇಗೌಡ ಕೂಡಾ ಪುನಾರಚನೆ ಖಚಿತ ಅಂದಿದ್ದಾರೆ. ಸರ್ಕಾರ ರಚನೆ ವೇಳೆಯೇ ಎರಡೂವರೆ ವರ್ಷದ ಬಳಿಕ ಹೊರಗಿರುವ ಶಾಸಕರಿಗೆ ಅವಕಾಶ ಮಾಡಿಕೊಡುವ ಬಗ್ಗೆ ಹೈಕಮಾಂಡ್ ತಿಳಿಸಿತ್ತು ಅಂದಿದ್ದಾರೆ. ಹೈಕಮಾಂಡ್ ಹೇಳಿದರೆ ತ್ಯಾಗಕ್ಕೂ ಸಿದ್ಧ ಅಂದಿದ್ದಾರೆ.

ಈ ಮಧ್ಯೆ ತುಮಕೂರಲ್ಲಿ ಮಾತಾಡಿದ ಮಾಜಿ ಸಚಿವ ಕೆಎನ್ ರಾಜಣ್ಣ ಸ್ಫೋಟಕ ಹೇಳಿಕೆ ಕೊಟ್ಟಿದ್ದಾರೆ. ಸಿಎಂ ಬದಲಾವಣೆ ವಿಷ್ಯ ಸಂಪುಟ ಪುನಾರಚನೆ ಮೇಲೆ ನಿಂತಿದೆ. ಪುನಾರಚನೆ ಅಧಿಕಾರ ಯಾರಿಗೆ ಸಿಗುತ್ತೋ ಅವರೇ ಸಿಎಂ ಆಗಲಿದ್ದಾರೆ. ಸಿದ್ದರಾಮಯ್ಯನವರಿಗೆ ಹೈಕಮಾಂಡ್ ಸಂಪುಟ ಪುನಾರಚನೆ ಅಧಿಕಾರ ಕೊಟ್ಟರೆ, ಅವರೇ 5 ವರ್ಷ ಸಿಎಂ. ಇಲ್ಲದಿದ್ದರೆ ರಾಜಕೀಯ ಸ್ಥಿತ್ಯಂತರ ಗ್ಯಾರಂಟಿ ಎಂದು ರಾಜಣ್ಣ ಬಾಂಬ್ ಸಿಡಿಸಿದ್ದಾರೆ. ಆದರೆ ಸಂಪುಟ ಕಸರತ್ತು ಅಷ್ಟು ಸುಲಭವಿಲ್ಲ. ಎರಡೂವರೆ ವರ್ಷದ ಬಳಿಕ ಕುರ್ಚಿ ಬದಲಾವಣೆಗೆ ಡಿಕೆಶಿ ವೇಯ್ಟ್ ಅಂಡ್ ವಾಚ್ ಮಾಡ್ತಿದ್ದು, ಹೈಕಮಾಂಡ್ ನಾಮ ಜಪದ ದಾಳ ಪ್ರಯೋಗಿಸುತ್ತಿದ್ದಾರೆ.

ಆದರೆ ಪುನಾರಚನೆ ಮೂಲಕ ಪವರ್ ಶೇರ್‌ಗೆ ಬ್ರೇಕ್ ಹಾಕೋದು ಸಿಎಂ ಪ್ಲ್ಯಾನ್. ಬಿಹಾರ ಫಲಿತಾಂಶ ಬಳಿಕ ದೆಹಲಿ ಭೇಟಿಗೆ ಸಿಎಂ ಮುಂದಾಗಿದ್ದಾರೆ. ಆದ್ರೆ ಹೈಕಮಾಂಡ್ ಸೂತ್ರ ಏನು ಅನ್ನೋದು ಸದ್ಯಕ್ಕೆ ಬಿಗ್ ಸೀಕ್ರೆಟ್. ರೀಶಫಲ್ ವರ್ಸಸ್ ಪವರ್ ಶೇರ್ ವ್ಯಾಜ್ಯ ಹೈಕಮಾಂಡ್ ಮೆಟ್ಟಿಲೇರಲಿದೆ. ಬಿಹಾರ ರಿಸಲ್ಟ್ ಬಳಿಕ ದೆಹಲಿ ದಂಗಲ್ ಜೋರಾಗೋದು ಫಿಕ್ಸ್.

**ನೂರು ಕಾಂಗ್ರೆಸ್ ಕಚೇರಿಗಳಿಗೆ ಶಂಕುಸ್ಥಾಪನೆ:** ನೂರು ಕಾಂಗ್ರೆಸ್ ಕಚೇರಿಗಳ ಶಂಕುಸ್ಥಾಪನೆಗೆ ರಾಹುಲ್ ಗಾಂಧಿಯವರನ್ನು ಆಹ್ವಾನಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿ ಹಾಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ನೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಈ ಕೆಲಸ ಕೈಗೆತ್ತಿಕೊಂಡಿದ್ದೇವೆ. ಕಾಂಗ್ರೆಸ್ ಕಚೇರಿ ಪಕ್ಷದ ಕಾರ್ಯಕರ್ತರಿಗೆ ದೇವಾಲಯವಿದ್ದಂತೆ. ಕಾರ್ಯಕರ್ತರ ಅನುಕೂಲಕ್ಕಾಗಿ ರಾಜ್ಯದಾದ್ಯಂತ ನೂರು ಕಾಂಗ್ರೆಸ್ ಕಚೇರಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ರಾಹುಲ್ ಗಾಂಧಿಯವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈಗಾಗಲೇ ಅನೇಕ ಕಡೆ ಕಚೇರಿ ನಿರ್ಮಾಣ ಕೆಲಸ ಪ್ರಾರಂಭವಾಗಿದೆ. ಬಿಹಾರ ಚುನಾವಣೆ ನಂತರ ದಿನಾಂಕ ನಿಗದಿಯಾಗಬಹುದು ಎಂದು ಹೇಳಿದರು.



**ಡಿಕೆಶಿಯಿಂದ ಹೈಕಮಾಂಡ್ ದಾಳ**

**ಅಧಿಕಾರ ಸಿಕ್ಕವರೇ ಸಿಎಂ**

**ದಿಢೀರ್ ದೆಹಲಿಗೆ ಡಿಸಿಎಂ**

## ಸಂಪುಟ ಪುನಾರಚನೆ ಬಗ್ಗೆ ಮುಂಚೆಯೇ ನಿರ್ಧಾರವಾಗಿತ್ತು

ಸಂಪುಟ ಪುನಾರಚನೆ ಆದಾಗ ಹಳಬರು ಹೋಗಿ, ಹೊಸಬರು ಬರುತ್ತಾರೆ. ಸರ್ಕಾರ ಅಧಿಕಾರಕ್ಕೆ ಬಂದ 30 ತಿಂಗಳ ನಂತರ ಪುನಾರಚನೆ ಮಾಡಲಾಗುತ್ತದೆ ಎಂದು ಮೊದಲೇ ಚರ್ಚೆಯಾಗಿತ್ತು. ಈಗ ಆ ಚರ್ಚೆ ಅಂತಿಮ ಹಂತಕ್ಕೆ ಬಂದಿರಬೇಕು. ಯಾರನ್ನು ಸಚಿವ ಸ್ಥಾನದಿಂದ ಕೈಬಿಡುತ್ತಾರೆ ಎಂಬುದು ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ ಸಚಿವ ಸತೀಶ್ ಜಾರಕಿಹೊಳಿ ಎಂದರು. ಸಂಪುಟದಲ್ಲಿ 34 ಜನರಿಗೆ ಮಾತ್ರ ಸಚಿವ ಸ್ಥಾನ ನೀಡಲು ಅವಕಾಶ ಇದೆ. ಅನೇಕ ಹಿರಿಯರು ಸಚಿವ ಸ್ಥಾನದ ಆಕಾಂಕ್ಷಿಗಳು. ಯಾರು ಸಚಿವರಾಗುತ್ತಾರೆ ಎಂದು ಹೇಳುವುದು ಕಷ್ಟ. ಪಕ್ಷದ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ನವೆಂಬರ್ ಕ್ರಾಂತಿ ಬಗ್ಗೆ ಸತೀಶ್ ಜಾರಕಿಹೊಳಿ ಹೇಳಿದರು.

### ಹೊಸ ಬಾಂಬ್ ಸಿಡಿಸಿದ ಕೆ.ಎನ್ ರಾಜಣ್ಣ

ಪವರ್ ಶೇರಿಂಗ್ ವಿಚಾರದ ಬಗ್ಗೆ ಮಾಜಿ ಸಚಿವ ಕೆಎನ್? ರಾಜಣ್ಣ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್‌ನಲ್ಲಿ ಸಿಎಂ ಬದಲಾವಣೆ ವಿಚಾರ ಸಂಪುಟ ಪುನಾರಚನೆ ಮೇಲೆ ನಿಂತಿದೆ ಎಂದಿದ್ದಾರೆ. ಸಂಪುಟ ಪುನಾರಚನೆ ಅಧಿಕಾರ ಯಾರಿಗೆ ಸಿಗುತ್ತೋ ಅವರೇ ಸಿಎಂ ಆಗಲಿದ್ದಾರೆ ಎಂದು ರಾಜಣ್ಣ ಹೇಳಿದ್ದು, ಭಾರೀ ಕುತೂಹಲಕ್ಕೆ ಕಾರಣವಾಗಿದೆ. 'ಹೈಕಮಾಂಡ್ ನಿರ್ಧಾರದ ಮೇಲೆ ಎಲ್ಲಾ ನಿಂತಿದೆ ಎಂದ ರಾಜಣ್ಣ, ಸಿದ್ದರಾಮಯ್ಯನವರಿಗೆ ಸಂಪುಟ ಪುನಾರಚನೆ ಅಧಿಕಾರ ಕೊಟ್ಟರೆ, 5 ವರ್ಷ ಕೂಡ ಅವರೇ ಸಿಎಂ ಆಗಿ ಮುಂದುವರೆಯುತ್ತಾರೆ ಎಂದರ್ಥ ಎಂದಿದ್ದಾರೆ. ಇಲ್ಲವಾದಲ್ಲಿ ರಾಜಕೀಯ ಸ್ಥಿತ್ಯಂತರ ನಡೆಯೋದು ಗ್ಯಾರಂಟಿ ಎಂದು ರಾಜಣ್ಣ ಭವಿಷ್ಯ ನುಡಿದ್ದಾರೆ.

**ಪುನಾರಚನೆ ಸುಳಿವು ಕೊಟ್ಟ ಸಿಎಂ**

**ನೋಟಿಸ್ ನೀಡದಿದ್ದಕ್ಕೆ ಕಿಡಿ**

ಡಿಕೆ ಶಿವಕುಮಾರ್ ಅವರು ಮುಂದಿನ ಸಿಎಂ ಆಗಲಿ ಎಂದು ಶಾಸಕ ಇಕ್ಬಾಲ್ ಹುಸೇನ್ ಮತ್ತು ಎಚ್‌ಡಿ ರಂಗನಾಥ್ ರೆಡ್ಡಿ ಅವರು ಹೇಳಿದ್ದರು. ಆ ಬೆನ್ನಲ್ಲೇ ಅವರಿಗೆ ನೋಟಿಸ್ ನೀಡಲಾಗಿತ್ತು. ಆದರೆ ಯತೀಂದ್ರರಿಗೆ ಯಾಕೆ ನೋಟಿಸ್ ಕೊಡುತ್ತಿಲ್ಲ ಎಂದು ಪ್ರಶ್ನಿಸಿದ್ದರು.

**ನವೆಂಬರ್ ಕ್ರಾಂತಿ ಚರ್ಚೆ**

## ಸಂಪುಟ ವಿಸ್ತರಣೆಗೆ ಸಿಎಂಗೆ ಹೈಕಮಾಂಡ್ ಸೂಚನೆ

ಎರಡೂವರೆ ವರ್ಷಕ್ಕೆ ಸಂಪುಟ ವಿಸ್ತರಣೆ ಮಾಡುವಂತೆ ಹೈಕಮಾಂಡ್ ಸೂಚನೆ ನೀಡಿರುವುದಾಗಿ ಕಿತ್ತೂರು ಉತ್ಸವದಲ್ಲಿ ಈ ವಿಷಯವನ್ನು ನನಗೆ ತಿಳಿಸಿದರು' ಎಂದು ಶಾಸಕ ಎನ್.ಎಚ್.ಕೋನರೆಡ್ಡಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ನಾನೂ ಸಚಿವ ಸ್ಥಾನದ ಆಕಾಂಕ್ಷಿ ಎಂದು ಪದೇಪದೇ ಹೇಳುವುದು ಸರಿಯಲ್ಲ. ಶಾಸಕರ ಕೆಲಸದ ವಿವರ ಪಡೆದು ತೀರ್ಮಾನ ಕೈಗೊಳ್ಳುವುದಾಗಿ ಹೈಕಮಾಂಡ್ ಹೇಳಿದೆ. ಸಿ.ಎಂ ಬದಲಾವಣೆ, ಸಂಪುಟ ವಿಸ್ತರಣೆ ವಿಚಾರ ಕುರಿತು ಶಾಸಕರು ಏನು ಮಾತನಾಡಬಾರದು ಎಂದು ಹೈಕಮಾಂಡ್ ಸೂಚನೆ ನೀಡಿದೆ. ಆ ಸೂಚನೆಗೆ ಬದ್ಧನಾಗಿರುತ್ತೇನೆ' ಎಂದು ಪ್ರತಿಕ್ರಿಯಿಸಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಇಲಾಖೆಯಲ್ಲಿ ಬಹಳಷ್ಟು ಸುಧಾರಣೆ ತಂದಿದ್ದಾರೆ. ಈ ಹಿಂದೆ ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಾಗಿದ್ದಾಗಲೂ ಅವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರೊಬ್ಬ ಸಮರ್ಥ ನಾಯಕ. ಅಂಥ ಸಚಿವರನ್ನು ಉಳಿಸಿಕೊಂಡು ಉಳಿದವರನ್ನು ಬದಲಾವಣೆ ಮಾಡುವುದು, ಬಿಡುವುದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ವಿವೇಚನೆಗೆ ಬಿಟ್ಟದ್ದು ಎಂದು ಉತ್ತರಿಸಿದರು.

## ಜನವರಿಯಲ್ಲಿ ನನಗೆ ಶುಕ್ರದೆಸೆ ಬರುವುದು ಪಕ್ಕಾ : ಲಕ್ಷ್ಮಣ ಸವದಿ

• ಉದಯವಾಹಿನಿ ಚಿಕ್ಕೋಡಿ

ಜನವರಿಯಲ್ಲಿ ನನಗೆ ಶುಕ್ರದೆಸೆ ಬರುವುದು ಪಕ್ಕಾ ಎನ್ನುವ ಮೂಲಕ ಸಂಪುಟ ಪುನಾರಚನೆಯಲ್ಲಿ ಸಚಿವನಾಗುವ ಇಂಗಿತವನ್ನ ಅಥಣಿ ಕೈ ಶಾಸಕ ಲಕ್ಷ್ಮಣ ಸವದಿ ವ್ಯಕ್ತಪಡಿಸಿದ್ದಾರೆ.

ಅಥಣಿ ಪಟ್ಟಣದಲ್ಲಿ ಮಾಧ್ಯಮಗಳಿಗೆ ಹೇಳಿಕೆ ನೀಡಿದ ಅವರು, ಸಂಪುಟ ಪುನರ್ ರಚನೆ ಆಗುವುದು ಮೊದಲೇ ಗೊತ್ತಿತ್ತು. ಬೆಳಗಾವಿಯಲ್ಲಿ ಸಿಎಂ ಸಹ ಹೇಳಿದ್ದಾರೆ. ನನಗೆ ಸಚಿವನಾಗುವ ಸಂದರ್ಭ ಬರಲಿ. ಆ ಸಂದರ್ಭದಲ್ಲಿ ನಾನು ಪ್ರತಿಕ್ರಿಯೆ ನೀಡುತ್ತೇನೆ ಎಂದರು. ನಾವು ಯಾವುದೇ ಅಧಿಕಾರವನ್ನ ಕೇಳಿ ಪಡೆದವನಲ್ಲ. ಭಗವಂತನ ಆಶೀರ್ವಾದ ಹಾಗೂ ಹೈಕಮಾಂಡ್ ಇಚ್ಛೆ ಇದ್ರೆ ಸಚಿವ ಸ್ಥಾನ ನನಗೆ ತಾನಾಗಿಯೇ ಬರುತ್ತದೆ. ಹೈಕಮಾಂಡ್ ಕೊಟ್ಟ ಜವಾಬ್ದಾರಿಯನ್ನ ನಾವು ನಿಭಾಯಿಸಲು ಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಕರ್ನೂಲ್ ದುರಂತದ ಬಳಿಕ ಎಚ್ಚೆತ್ತ ಸಾರಿಗೆ ಇಲಾಖೆ

• ಉದಯವಾಹಿನಿ ಬೆಂಗಳೂರು

ಕರ್ನೂಲ್ ಬಸ್ ದುರಂತದ ಬೆನ್ನಲ್ಲೇ ರಾಜ್ಯ ಸಾರಿಗೆ ಇಲಾಖೆ ಎಚ್ಚೆತ್ತುಕೊಂಡಿದೆ. ಈ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ 4 ಸಾರಿಗೆ ನಿಗಮಗಳ ಎಂಡಿಗಳಿಗೆ ಬಸ್‌ಗಳಲ್ಲಿ ಕೆಲ ನಿಯಮಗಳನ್ನ ಕಡ್ಡಾಯಗೊಳಿಸಲು ಸೂಚಿಸಿದ್ದಾರೆ. ಪ್ರಮುಖವಾಗಿ ಬಸ್‌ಗಳಲ್ಲಿ ಬೆಂಕಿ ಸ್ಪರ್ಶಕ್ಕೆ ಸರಳವಾಗಿ ಉರಿಯುವ ವಸ್ತುಗಳ ಸಾಗಣಿಕೆಗೆ ಬ್ರೇಕ್ ಹಾಕಬೇಕು.

ಬಸ್‌ಗಳಲ್ಲಿ ಯಾವುದೇ ರೀತಿಯ ಸ್ಫೋಟಕ ವಸ್ತುಗಳನ್ನ ತೆಗೆದುಕೊಂಡು ಹೋಗಬಾರದು. ಎಲ್ಲಾ ಎಸಿ ಬಸ್‌ಗಳಲ್ಲಿ ಸುತ್ತಿಗೆ ಕಡ್ಡಾಯಗೊಳಿಸಿದ್ದು, ಇದರಿಂದ ತುರ್ತು ಸಂದರ್ಭಗಳಲ್ಲಿ ಕಿಟಕಿಗಳನ್ನು ಒಡೆಯಲು ಬಳಸಲು ಸಹಾಯವಾಗಲಿದೆ. ಅಲ್ಲದೇ ಲಗೇಜ್ ಸಾಗಿಸುವ ಜಾಗದಲ್ಲಿ ಯಾವುದೇ ವ್ಯಕ್ತಿ ಮಲಗಲು ಅವಕಾಶ ನೀಡಬಾರದು. ಬಸ್ಸುಗಳ ನವೀಕರಣ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸೂಚನೆ ನೀಡಿದ್ದಾರೆ.

ಜೊತೆಗೆ ಬಸ್ಸುಗಳಲ್ಲಿನ ಸುರಕ್ಷತಾ ಆಡಿಟ್ ಪರಿಶೀಲನೆಗೆ ತಂಡಗಳನ್ನು ರಚಿಸಿ, ಬಸ್‌ಗಳಲ್ಲಿ ಯಾವುದೇ ನ್ಯೂನ್ಯತೆ ಕಂಡು ಬಂದರೂ ಕಠಿಣ ಕ್ರಮಕ್ಕೆ ಆದೇಶಕ್ಕೆ ಸೂಚಿಸಿದ್ದಾರೆ.

## ಕುಮಾರಸ್ವಾಮಿ ಖಾಲಿ ಟ್ರಂಕ್: ಡಿಕೆಶಿ

• ಉದಯವಾಹಿನಿ ಬೆಂಗಳೂರು

ನಗರದಲ್ಲಿ ಬಿ ಖಾತಾ ಆಸ್ತಿಗಳನ್ನು ಎ ಖಾತಾಗೆ ಪರಿವರ್ತನೆ ಮಾಡುತ್ತಿರುವ ಬಗ್ಗೆ ಇಲ್ಲಸಲ್ಲದ ಟೀಕೆ ಮಾಡುತ್ತಿರುವ ಕುಮಾರಸ್ವಾಮಿ ಖಾಲಿ ಟ್ರಂಕ್ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ವಾಗ್ದಾಳಿ ನಡೆಸಿದರು. ಕಬ್ಬನ್ ಪಾರ್ಕ್‌ನಲ್ಲಿ ಇಂದು ಬೆಳಗ್ಗೆ ಬೆಂಗಳೂರು ನಡಿಗೆ ಕಾರ್ಯಕ್ರಮದ ವೇಳೆ ಡಿಕೆಶಿ ಸಾರ್ವಜನಿಕರೊಂದಿಗೆ ಮಾತನಾಡಿದರು. ಈ ವೇಳೆ ನಾಗರಿಕರೊಬ್ಬರು, ಸರ್ಕಾರ ಆಸ್ತಿಗಳನ್ನು ಎ ಖಾತಾ ಆಗಿ ಪರಿವರ್ತನೆ ಮಾಡುತ್ತಿರುವುದು ಒಳ್ಳೆಯ ಕೆಲಸ. ಈ ಪರಿವರ್ತನೆಗಾಗಿ ಅನೇಕರು, ಹಲವು ವರ್ಷಗಳಿಂದ ಕಾಯುತ್ತಿದ್ದರು ಎಂದು ಸರ್ಕಾರದ ತೀರ್ಮಾನವನ್ನ ಸ್ವಾಗತಿಸಿ, ಮುಕ್ತವಾಗಿ ಪ್ರಶಂಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಸಿಎಂ, ಎ ಖಾತಾ ನಿಮ್ಮ ಆಸ್ತಿ ದಾಖಲೆ. ಸಾರ್ವಜನಿಕರ ಆಸ್ತಿ ದಾಖಲೆಗಳನ್ನ ಸರಿಪಡಿಸಿ, ಅವುಗಳನ್ನು ಜನರಿಗೆ ನೀಡುವುದು ನಮ್ಮ ಸರ್ಕಾರದ 6ನೇ ಗ್ಯಾರಂಟಿ. ಇದಕ್ಕಾಗಿ ನಾವು ಕೇವಲ 5% ಮಾತ್ರ ಅಭಿವೃದ್ಧಿ ಶುಲ್ಕ ಪಾವತಿ ಮಾಡುವಂತೆ ಕೇಳಿದ್ದೇವೆ. ನಿಮ್ಮಂತಹ ಪ್ರಜ್ಞಾವಂತ ನಾಗರೀಕರು ಇದನ್ನು ಸ್ವಾಗತಿಸಿರುವುದಕ್ಕೆ ಧನ್ಯವಾದ ಎಂದು ನಮಿಸಿದರು.

## ಆರ್‌ಎಸ್‌ಎಸ್ ಸಂಘಟನೆ ಕಾನೂನಿಗಿಂತ ದೊಡ್ಡದಲ್ಲ : ಪ್ರಿಯಾಂಕ್ ಖರ್ಗೆ

• ಉದಯವಾಹಿನಿ ಬೆಂಗಳೂರು

ಸರ್ಕಾರಿ ಶಾಲೆಗಳು, ಕಾಲೇಜುಗಳು ಮತ್ತು ಸರ್ಕಾರಿ ಸ್ವಾಮ್ಯದ ದೇವಾಲಯಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳನ್ನು ನಿಷೇಧಿಸಬೇಕೆಂದು ಪುನರುಚ್ಚರಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಸಂಘಟನೆಯು ಕಾನೂನು ಮತ್ತು ಸಂವಿಧಾನಕ್ಕಿಂತ ದೊಡ್ಡದಲ್ಲ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಕಾನೂನು ಮತ್ತು ಸಂವಿಧಾನಕ್ಕಿಂತ ದೊಡ್ಡದಲ್ಲ. ಈ ಪರಿಸ್ಥಿತಿ ಎಷ್ಟು ಕಾಲ ಮುಂದುವರಿಯುತ್ತದೆ ದೇಶದ ಪ್ರತಿಯೊಬ್ಬ ನಾಗರಿಕ ಮತ್ತು ಸಂಘಟನೆಯನ್ನು ಅವರ ಕಾರ್ಯಗಳಿಗೆ ಹೊಣೆಗಾರರನ್ನಾಗಿ ಮಾಡಬೇಕು' ಎಂದು ಹೇಳಿದರು. ಸರ್ಕಾರಿ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿಷೇಧಿಸುವಂತೆ ಸಚಿವರು ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದರು.

## ಸಚಿವ ಸ್ಥಾನ ತ್ಯಾಗಕ್ಕೆ ರೆಡಿ: ಕೃಷ್ಣ ಬೈರೇಗೌಡ


• ಉದಯವಾಹಿನಿ ಬೆಂಗಳೂರು

ಸಚಿವ ಸ್ಥಾನಕ್ಕಾಗಿ ಲಾಬಿ, ಒತ್ತಡ, ಪಟ್ಟು ಹಿಡಿಯುವವರ ನಡುವೆ ಕರ್ನಾಟಕ ಸರ್ಕಾರದ ಸಚಿವ ಸಂಪುಟದಲ್ಲೇ ಅತ್ಯಂತ ಕ್ರಿಯಾಶೀಲ ಸಚಿವ ಎಂದು ಹೆಸರು ಪಡೆದಿರುವ ಕೃಷ್ಣ ಬೈರೇಗೌಡ ಅವರು ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ ಎಂದು ಹೇಳಿದ್ದಾರೆ. ಅದಕ್ಕೆ ಕಾರಣಗಳನ್ನೂ ನೀಡಿ ಪಾಸಿಟಿವ್ ಮಾತುಗಳನ್ನಾಡಿದ್ದಾರೆ.

ಬೆಂಗಳೂರಿನ ಬ್ಯಾಟರಾಯನಪುರದಲ್ಲಿ 'ವೋಟ್ ಚೋರಿ' ಅಭಿಯಾನದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುವ ವೇಳೆ ತ್ಯಾಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎರಡೂವರೆ ವರ್ಷದ ಬಳಿಕ ಹಾಲಿ ಸಚಿವರನ್ನು ಪಕ್ಷದ ಕೆಲಸಕ್ಕೆ ನಿಯೋಜಿಸಿ, ಉಳಿದರ್ಧ ಅಧಿಕಾರಾವಧಿಗೆ ಹೊಸಬರಿಗೆ ಅವಕಾಶ ನೀಡಲಾಗುತ್ತದೆ ಎಂಬ ಮಾತುಗಳಿಗೆ ಕೃಷ್ಣ ಬೈರೇಗೌಡರ ಈ ಮಾತು ಪುಷ್ಠಿ ನೀಡಿದೆ. ಇದು ನಾಯಕತ್ವ ಬದಲಾವಣೆ ಜತೆಗೆ ಸಂಪುಟ ಪುನಾರಚನೆ ಸಾಧ್ಯತೆ ಕುರಿತಾದ ಚರ್ಚೆಯನ್ನೂ ಮುನ್ನೆಲೆಗೆ ತಂದಿದೆ.

ಬೇರೆಯವರಿಗೂ ಅವಕಾಶ ಸಿಗಬೇಕು ಎಂಬುದು ಸಚಿವ ಸಂಪುಟ ರಚನೆ ಸಂದರ್ಭದಲ್ಲೇ ಚರ್ಚೆಯಾದೆ. ಬೇರೆಯವರಿಗೆ ಅವಕಾಶಕ್ಕಾಗಿ ಸಚಿವ ಸ್ಥಾನ ತ್ಯಾಗ ಮಾಡಲು ನಾನು ಸಿದ್ಧನಿದ್ದೇನೆ. ಅವಕಾಶದ ವಿಚಾರದಲ್ಲಿ ನಾನು ಸಂತೃಪ್ತ. ಪಕ್ಷ ನನಗೆ ಎಲ್ಲವನ್ನೂ ನೀಡಿದೆ, ಅರ್ಹತೆಗೂ ಮೀರಿ ಅವಕಾಶ ಸಿಕ್ಕಿದೆ. ಕ್ಷೇತ್ರ ಮರುವಿಂಗಡಣೆ ಬಳಿಕ ಹೊಸ ಕ್ಷೇತ್ರದ ಅವಕಾಶ ನೀಡುವುದರಿಂದ ಇಲ್ಲಿಯವರೆಗೂ ಎಲ್ಲಾ ಅವಕಾಶಗಳನ್ನು ಪಕ್ಷ ಕೊಟ್ಟಿದೆ.

ಮೂರು ಬಾರಿ ಸಚಿವ ಸ್ಥಾನ ದೊರಕಿದ್ದು, ಹೈಕಮಾಂಡ್ ಸೂಚಿಸಿದರೆ ಸಚಿವ ಸ್ಥಾನ ಬಿಟ್ಟುಕೊಡಲು ನಾನು ರೆಡಿ. ಸಚಿವನಾಗಿರುವ ಕಾರಣಕ್ಕೆ ಕ್ಷೇತ್ರದ ಜನರಿಗೆ ಪೂರ್ತಿ ಸಮಯ ಕೊಟ್ಟು ಅವರ ಕೆಲಸ ಮಾಡಲು ಆಗುತ್ತಿಲ್ಲ. ಸಾಕಷ್ಟು ಕೆಲಸಗಳನ್ನು ಮಾಡಬೇಕಿದೆ. ಅವಕಾಶ ವಿಷಯದಲ್ಲಿ ನನಗೆ ಹೊಟ್ಟೆ ತುಂಬಿದೆ. ಸಂಪುಟ ಪುನಾರಚನೆಗೂ ನಾಯಕತ್ವ ಬದಲಾವಣೆಗೂ ಸಂಬಂಧವಿಲ್ಲ. ನಾಯಕತ್ವ ಬದಲಾವಣೆ ವಿಚಾರದಲ್ಲಿ ಹೈಕಮಾಂಡ್ ನಾಯಕರು ತೀರ್ಮಾನ ಮಾಡಲಿದ್ದಾರೆ,'' ಎಂದು ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.



- ಕೃಷ್ಣ ಬೈರೇಗೌಡ ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ ಎಂಬ ಹೇಳಿಕೆ ರಾಜಕೀಯ ವಲಯದಲ್ಲಿ ಭಾರೀ ಚರ್ಚೆ.
- ತ್ಯಾಗ ಯಾಕೆ ಎಂದು ಹಲವು ಕಾರಣಗಳನ್ನು ನೀಡಿರುವ ಸಚಿವರು.
- ಕರ್ನಾಟಕ ಸರ್ಕಾರದ ಸಚಿವ ಸಂಪುಟದಲ್ಲೇ ಅತ್ಯಂತ ಕ್ರಿಯಾಶೀಲ ಸಚಿವ ಎನಿಸಿಕೊಂಡಿರುವ ಕೃಷ್ಣ ಬೈರೇಗೌಡ.

# ಕರ್ನಾಟಕ ಸೇರಿ ದೇಶದ ವಿವಿಧೆಡೆ ಬೆಳೆಯುವ ಕಾಫಿಯನ್ನು ಕೊಂಡಾಡಿದ ಮೋದಿ


### ಈಶಾನ್ಯ ಭಾರತದಲ್ಲೂ ಕಾಫಿ ಬೆಳೆಯಲಾಗುತ್ತಿದ್ದು, ಭಾರತದ ವಿವಿಧ ಬಗೆಯ ಕಾಫಿಗೆ ಇರುವ ಗುರುತನ್ನು ಬಲಪಡಿಸುತ್ತಿದೆ

**ನವದೆಹಲಿ:** ಕರ್ನಾಟಕ ಸೇರಿದಂತೆ ದೇಶದ ವಿವಿಧೆಡೆ ಬೆಳೆಯುವ ಕಾಫಿ ಜಗತ್ಪ್ರಸಿದ್ಧಿ ಪಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಮಾಸಿಕ ಮನ್ ಕಿ ಬಾತ್ 127ನೇ ಸಂಚಿಕೆಯಲ್ಲಿ ಮಾತನಾಡಿದ ಅವರು, ಕರ್ನಾಟಕ, ಕೇರಳ, ತಮಿಳುನಾಡು ಸೇರಿದಂತೆ ದೇಶದ ವಿವಿಧೆಡೆ ಬೆಳೆಯುತ್ತಿರುವ ಕಾಫಿ, ಜಾಗತಿಕವಾಗಿ ಪ್ರಸಿದ್ಧಿ ಪಡೆಯುತ್ತಿದೆ. ಇತ್ತೀಚೆಗೆ, ಈಶಾನ್ಯ ಭಾರತದಲ್ಲೂ ಕಾಫಿ ಬೆಳೆಯಲಾಗುತ್ತಿದ್ದು, ಭಾರತದ ವಿವಿಧ ಬಗೆಯ ಕಾಫಿಗೆ ಇರುವ ಗುರುತನ್ನು ಬಲಪಡಿಸುತ್ತಿದೆ ಎಂದಿದ್ದಾರೆ.

'ಭಾರತೀಯ ಕಾಫಿ ಪ್ರಪಂಚದಾದ್ಯಂತ ಬಹಳ ಜನಪ್ರಿಯವಾಗುತ್ತಿದೆ. ಕರ್ನಾಟಕದ ಚಿಕ್ಕಮಗಳೂರು, ಕೊಡಗು ಮತ್ತು ಹಾಸನ. ತಮಿಳುನಾಡಿನ, ಪಳನಿ, ಶೇವರಾಯ್, ನೀಲಗಿರಿ ಅಣ್ಣಾಮಲೈ ಪ್ರದೇಶಗಳಾಗಿರಬಹುದು, ಕರ್ನಾಟಕ-ತಮಿಳುನಾಡು ಗಡಿಯಲ್ಲಿರುವ ನೀಲಿಗಿರಿ ಪ್ರದೇಶವಾಗಿರಬಹುದು, ಅಥವಾ ಕೇರಳದ ವಯನಾಡ್, ತಿರುವಾಂಕೂರು, ಮಲಬಾರ್ ಪ್ರದೇಶಗಳಾಗಿರಬಹುದು.

ದೇಶದ ವಿವಿಧೆಡೆ ಬೆಳೆಯುವ ಕಾಫಿಯ ವೈವಿಧ್ಯತೆ ನಿಜಕ್ಕೂ ಗಮನಾರ್ಹವಾಗಿದೆ' ಎಂದು ಅವರು ಹೇಳಿದರು. ಕೊರಾಪುಟ್ (ಒಡಿಶಾ) ಕಾಫಿ ಕೂಡ ಜನಪ್ರಿಯತೆಯನ್ನು ಗಳಿಸುತ್ತಿದೆ ಎಂದು ಮೋದಿ ಹೇಳಿದರು.

**ಮನ್ ಕೀ ಬಾತ್‌ನಲ್ಲಿ ಮೋದಿಯ ಕನ್ನಡ ಧ್ವನಿ**



ಕೆಲವರು, ಕಾಫಿ ಕೃಷಿಯ ಮೇಲಿನ ತಮ್ಮ ಉತ್ಸಾಹವನ್ನು ಮುಂದುವರಿಸಲು ಲಾಭದಾಯಕ ಕಾರ್ಪೊರೇಟ್ ಉದ್ಯೋಗಗಳನ್ನು ತೊರೆದಿದ್ದಾರೆ ಎಂದೂ ಅವರು ಶ್ಲಾಘಿಸಿದರು. 'ಕೆಲಸ ಬಿಟ್ಟು ಕಾಫಿ ಬೆಳೆಯಲು ಮುಂದಾದವರು ಯಶಸ್ಸು ಗಳಿಸಿದ್ದಾರೆ. ಹಲವು ಮಹಿಳೆಯರ ಜೀವನ ಸಹ ಇದರಿಂದ ಹಸನಾಗಿದೆ' ಎಂದಿದ್ದಾರೆ.

ವಿಶಿಷ್ಟ ವಾತಾವರಣಕ್ಕೆ ಹೆಸರುವಾಸಿಯಾಗಿರುವ ಕೊರಾಪುಟ್ ಪ್ರದೇಶದಲ್ಲಿ ಅತ್ಯುತ್ತಮ ದರ್ಜೆಯ ಅರೇಬಿಕಾ ಕಾಫಿ ಬೆಳೆಯಲಾಗುತ್ತದೆ. ಇಲ್ಲಿ 5,000 ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆಯಲಾಗುತ್ತಿದೆ ಎಂದಿದ್ದರೆ. ದೇಶದ ಒಟ್ಟು ಕಾಫಿ ಉತ್ಪನ್ನದ ಪೈಕಿ ಶೇ 70ರಷ್ಟನ್ನು ಕರ್ನಾಟಕದಲ್ಲೇ ಬೆಳೆಯಲಾಗುತ್ತಿದೆ. ನಂತರದ ಸ್ಥಾನದಲ್ಲಿ ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಒಡಿಶಾಗಳಿವೆ. ಈ ವರ್ಷದ ಏಪ್ರಿಲ್-ಸೆಪ್ಟೆಂಬರ್ ಹಣಕಾಸು ವರ್ಷದಲ್ಲಿ ದೇಶದ ಕಾಫಿ ರಫ್ತು ಶೇ 12ರಷ್ಟು ಹೆಚ್ಚಾಗಿದೆ.

**ಮನ್ ಕೀ ಬಾತ್‌ನಲ್ಲಿ ಮೋದಿಯ ಕನ್ನಡ ಧ್ವನಿ:** ಪ್ರಧಾನಿ ಮೋದಿ ಅವರ 127ನೇ ಮನ್ ಕೀ ಬಾತ್ ರೇಡಿಯೋ ಕಾರ್ಯಕ್ರಮ ಬಹಳ ವಿಶೇಷ ಎನಿಸಿದೆ. ಪ್ರಧಾನಿಗಳು ಈ ಕಾರ್ಯಕ್ರಮದಲ್ಲಿ ಹಿಂದಿಯಲ್ಲೇ ಮಾತನಾಡುವುದು. ಈ ಬಾರಿಯೂ ಹಿಂದಿಯಲ್ಲೇ ಮಾತನಾಡಿದ್ದಾರೆ. ಆದರೆ, ಬೇರೆ ಬೇರೆ ಭಾಷೆಗಳಲ್ಲಿ ಧ್ವನಿ ಡಬ್ ಮಾಡಿ ಪ್ರಸಾರ ಮಾಡಲಾಗಿದೆ. ಎಐನಿಂದ ಧ್ವನಿ ಜನರೇಟ್ ಮಾಡಲಾಗಿದೆ. ನರೇಂದ್ರ ಮೋದಿ ಅವರ ಧ್ವನಿಯನ್ನೇ ಬಹುತೇಕ ಹೋಲುವಂತೆ ಎಐನಿಂದ ಬೇರೆ ಬೇರೆ ಭಾಷೆಗಳಲ್ಲಿ ಧ್ವನಿ ಸೃಷ್ಟಿಸಲಾಗಿದೆ. ಕನ್ನಡ, ತಮಿಳು, ಒಡಿಯಾ ಮೊದಲಾದ ಹಲವು ಭಾರತೀಯ ಭಾಷೆಗಳಲ್ಲಿ ಎಐ ಸೃಷ್ಟಿತ ಧ್ವನಿ ಕೊಡಲಾಗಿದೆ. ಕನ್ನಡದ ಆಡಿಯೋ ಕೇಳಿದಾಗ ಥೇಟ್ ನರೇಂದ್ರ ಮೋದಿ ಅವರೇ ಮಾತನಾಡಿದಂತೆ ಭಾಸವಾಗುತ್ತದೆ. ಅಷ್ಟರಮಟ್ಟಿಗೆ ಎಐ ನಿಖರತೆ ಕಾಯ್ದುಕೊಂಡಿದೆ.

**ವಂದೇ ಮಾತರಂನ 150ನೇ ವರ್ಷಾಚರಣೆ:** ನವೆಂಬರ್ 7ರಂದು ನಡೆಯಲಿರುವ ಭಾರತದ ರಾಷ್ಟ್ರೀಯ ಗೀತೆ ವಂದೇ ಮಾತರಂನ 150ನೇ ವರ್ಷಾಚರಣೆಯಲ್ಲಿ ನಾಗರಿಕರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಈ ಗೀತೆಯನ್ನು ಮೊದಲು 1896ರಲ್ಲಿ ರವೀಂದ್ರನಾಥ ಟ್ಯಾಗೋರ್ ಹಾಡಿದ್ದರು. ದೇಶಭಕ್ತಿ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅದರ ಪಾತ್ರವನ್ನು ಎತ್ತಿ ತೋರಿಸಿದರು ಎಂದು ನೆನೆದಿದ್ದಾರೆ. ವಂದೇ ಮಾತರಂ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಅಪರಿಮಿತ ಭಾವನೆ ಮತ್ತು ಹೆಮ್ಮೆಯನ್ನು ಹೊತ್ತಿಸುತ್ತದೆ ಎಂದಿದ್ದಾರೆ.

## ನಕ್ಸಲ್ ಮುಕ್ತ ಭಾರತ ಸನ್ನಿಹಿತ: ಮೋದಿ

ಆಪರೇಷನ್ ಸಿಂಧೂರ್ ಪ್ರತಿಯೊಬ್ಬ ಭಾರತೀಯನಲ್ಲಿ ಹೆಮ್ಮೆ ಮೂಡಿಸಿದೆ ಎಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಮಾವೋವಾದಿ ಭಯೋತ್ಪಾದನೆಗೆ ಕೊನೆ ಹಾಡುವ ಕಾಲ ಸನ್ನಿಹಿತವಾಗಿದೆ ಎಂದು ಹೇಳಿದ್ದಾರೆ. ಮಾವೋವಾದಿ ಬಾಧಿತ ಪ್ರದೇಶಗಳಲ್ಲಿ ಕತ್ತಲು ತುಂಬಿತ್ತು. ಈ ಬಾರಿಯ ದೀಪಾವಳಿ ಅಂತಹ ಪ್ರದೇಶಗಳಲ್ಲಿ ಬೆಳಕಿನ ದೀಪ ಬೆಳಗಿಸಲಾಗಿದೆ. ಇದರಿಂದ ಈ ಪ್ರದೇಶಗಳಲ್ಲಿ ಸಂತೋಷ ತುಂಬಿದೆ, ಕೆಲವೇ ದಿನಗಳಲ್ಲಿ ದೇಶ ಮಾವೋವಾದಿ, ನಕ್ಸಲ್ ಮುಕ್ತ ಭಾರತವಾಗಲಿದೆ ಎಂದಿದ್ದಾರೆ. ಆಕಾಶವಾಣಿಯ ಮನ್ ಕಿ ಬಾತ್ ಸರಣಿಯ 127ನೇ ಸಂಚಿಕೆಯಲ್ಲಿ ದೇಶವಾಸಿಗಳನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಜನರು ತಮ್ಮ ಮಕ್ಕಳ ಭವಿಷ್ಯವನ್ನು ಅಪಾಯಕ್ಕೆ ಸಿಲುಕಿಸಿದ ಮಾವೋವಾದಿ ಭಯೋತ್ಪಾದನೆಯ ಸಂಪೂರ್ಣ ನಿರ್ಮೂಲನೆ ಬಯಸಿದ್ದಾರೆ. ಅಂತಹ ಕಾಲ ಸಮೀಪಿಸಿದೆ ಎಂದಿದ್ದಾರೆ. ಕೆಲವು ದಿನಗಳ ಹಿಂದೆ ದೀಪಾವಳಿಯನ್ನು ಆಚರಿಸಿದ್ದೆವು, ಮತ್ತು ಈಗ ಹೆಚ್ಚಿನ ಸಂಖ್ಯೆಯ ಜನರು ಛತ್ ಪೂಜೆಯಲ್ಲಿ ನಿರತರಾಗಿದ್ದಾರೆ. ಛತ್‌ನ ಮಹಾಪರ್ವ ಸಂಸ್ಕೃತಿ, ಪ್ರಕೃತಿ ಮತ್ತು ಸಮಾಜದ ನಡುವಿನ ಆಳವಾದ ಏಕತೆಯ ಪ್ರತಿಬಿಂಬವಾಗಿದೆ ಎಂದಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,562/Gram(24ct) ₹11,515/Gram(22ct) | ಬೆಳ್ಳಿ: ₹157.00/Gram


# ಉಸ್ತುವಾರಿ ಸಮಿತಿ ರಚನೆ ಮಾಡಿ; ಎಚ್‌ಡಿಕೆ ಆದೇಶ

## 10 ಮಂದಿ ಉಸ್ತುವಾರಿಗಳ ನೇಮಿಸಿದ ಜೆಡಿಎಸ್; ಯಾರಿಗೆಲ್ಲಾ ಸ್ಥಾನ?, ಇತ್ತೀಚೆಗೆ ನಡೆದ ಪಕ್ಷದ ಶಾಸಕರ, ಕೋರ್ ಕಮಿಟಿ ಸಭೆ

• ಉದಯವಾಹಿನಿ ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನೂತನ 5 ಪಾಲಿಕೆಗಳ ಚುನಾವಣೆಗಳ ವ್ಯಾಪ್ತಿಯಲ್ಲಿ ಪಕ್ಷದ ಬಲವರ್ಧನೆ ಹಾಗೂ ಸಂಘಟನೆ ದೃಷ್ಟಿಯಿಂದ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್‌ಡಿ ಕುಮಾರಸ್ವಾಮಿ ಅವರು ಉಸ್ತುವಾರಿ ಸಮಿತಿ ರಚನೆ ಮಾಡಿದ್ದಾರೆ.

ಇತ್ತೀಚೆಗೆ ನಡೆದ ಪಕ್ಷದ ಶಾಸಕರ ಮತ್ತು ಕೋರ್ ಕಮಿಟಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಬೆಂಗಳೂರು ಕೇಂದ್ರ, ಪಶ್ಚಿಮ, ದಕ್ಷಿಣ, ಪೂರ್ವ ಮತ್ತು ಉತ್ತರ ನಗರ ಪಾಲಿಕೆಗಳ ಉಸ್ತುವಾರಿಗಳನ್ನ ನೇಮಿಸಲಾಗಿದೆ.


ಉದಯವಾಹಿನಿ ಚಿತ್ರ

**ಉಸ್ತುವಾರಿ ಸಮಿತಿಯ ಜವಾಬ್ದಾರಿಗಳು:**
ಹೊಸದಾಗಿ ರಚಿತವಾಗಿರುವ ನಗರ ಪಾಲಿಕೆಗಳಲ್ಲಿ ವಾರ್ಡ್ ವಾರು ಪಕ್ಷದ ಸಂಘಟನೆ ಮತ್ತು ಬಲವರ್ಧನೆಗೆ ಮುಖಂಡರು, ಮಾಜಿ ನಗರ ಪಾಲಿಕೆ ಸದಸ್ಯರುಗಳು, ಹಿಂದಿನ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳನ್ನು ಒಳಗೊಂಡ ಉಸ್ತುವಾರಿ ಸಮಿತಿಗಳನ್ನು ರಚಿಸಿ, ಈ ಸಮಿತಿಗಳ ಕಾರ್ಯಗಳನ್ನು ಕಾಲಾನುಕಾಲಕ್ಕೆ ವಿಮರ್ಶಿಸುವುದು.

ಪಾಲಿಕೆವಾರು ಪಕ್ಷದ ಸದಸ್ಯತ್ವ ನೊಂದಣಿ ಅಭಿಯಾನ ಕಾರ್ಯಕ್ರಮ ರೂಪಿಸಿ, ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರ ಸಭೆಗಳನ್ನು ವಾರ್ಡ್‌ವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಆಯೋಜಿಸುವುದು.

ಪಾಲಿಕೆಗಳಲ್ಲಿ ವಾರ್ಡ್ ವಾರು ಕಾರ್ಯಕರ್ತರ ಹಾಗೂ ಪ್ರಮುಖರ ಮುಖಂಡತ್ವವನ್ನು ಮುಂಬರುವ ನಗರ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಲಿಚ್ಛಿಸುವ ಆಕಾಂಕ್ಷಿಗಳ ಸಾಮರ್ಥ್ಯವನ್ನು ಆಧರಿಸಿ, ವಾರ್ಡ್‌ರು ಪಕ್ಷದ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಪಕ್ಷದ ರಾಜ್ಯ ಕಚೇರಿಗೆ ಸಲ್ಲಿಸುವುದು.

### ಸಮಿತಿಯಲ್ಲಿ ಯಾರಿಗೆಲ್ಲಾ ಸ್ಥಾನ?

- ಅರಕಲಗೂಡು ಶಾಸಕ ಎ. ಮಂಜು
- ತುರುವೇಕೆರೆ ಶಾಸಕ ಎಂ.ಟಿ. ಕೃಷ್ಣಪ್ಪ
- ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ
- ಟಿ.ಎನ್. ಜವರಾಯಿಗೌಡ
- ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ
- ಮಾಜಿ ಉಪ ಸ್ಪೀಕರ್ ಎಂ. ಕೃಷ್ಣಾರೆಡ್ಡಿ
- ಕ್ಷೇತ್ರದ ಮಾಜಿ ಶಾಸಕರಾದ ಸುರೇಶ್ ಗೌಡ, ಎ. ಮಂಜುನಾಥ್
- ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ
- ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಎ. ತಿಪ್ಪೇಸ್ವಾಮಿ

### ಮೈತ್ರಿಕೂಟದ ಪಕ್ಷಗಳೊಂದಿಗೆ ಸಮನ್ವಯಕ್ಕೆ ಕಾರ್ಯತಂತ್ರ

ಮುಂಬರುವ ನಗರ ಪಾಲಿಕೆ ಚುನಾವಣೆಯಲ್ಲಿ ಎನ್.ಡಿ.ಎ. ಮೈತ್ರಿಕೂಟದ ಪಕ್ಷಗಳೊಂದಿಗೆ ಸಮನ್ವಯ ಮತ್ತು ಚುನಾವಣಾ ಹೊಂದಾಣಿಕೆ ಬಗ್ಗೆ ಸಮಿತಿಯು ರೂಪುರೇಷೆಗಳನ್ನು ರೂಪಿಸಿ ಕಾರ್ಯತಂತ್ರ ರೂಪಿಸಬೇಕು ಎಂದು ರಾಜ್ಯಾಧ್ಯಕ್ಷರು ಉಸ್ತುವಾರಿ ಸಮಿತಿ ಸದಸ್ಯರಿಗೆ ಸೂಚಿಸಿದ್ದಾರೆ.

---

# ಪರಪ್ಪನ ಅಗ್ರಹಾರ ಕಾರಾಗೃಹ: ಒಳ ಉಡುಪಿನಲ್ಲಿ ಮೊಬೈಲ್ ಕಳ್ಳಸಾಗಣೆಗೆ ಯತ್ನ

• ಉದಯವಾಹಿನಿ ಬೆಂಗಳೂರು

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಒಳ ಉಡುಪಿನಲ್ಲಿಟ್ಟುಕೊಂಡು ಮೊಬೈಲ್ ಕಳ್ಳಸಾಗಣೆ ಮಾಡುತತಿದ್ದ ಜೈಲಿನ ವೀಕ್ಷಕರನ್ನು ಪೊಲೀಸರು ಬಂಧನ ಕ್ಕೊಳಪಡಿಸಿದ್ದಾರೆ. ಬಂಧಿತ ಜೈಲು ಸಿಬ್ಬಂದಿಯನ್ನು ಅಮರ್ ಪ್ರಾಂಜೆ (29) ಎಂದು ಗುರ್ತಿಸಲಾಗಿದೆ.

ಅಮರ್ ಅಕ್ಟೋಬರ್ 23ರಂದು ಕರ್ತವ್ಯಕ್ಕೆ ಆಗಮಿಸಿದ್ದಾನೆ. ಈ ವೇಳೆ ಪ್ರವೇಶದ್ವಾರದಲ್ಲಿದ್ದ ಕೆಎಸ್‌ಐಎಸ್‌ಎಫ್ ಸಿಬ್ಬಂದಿ ತಪಾಸಣೆಗೆ ಒಳಪಡಿಸಲು ಮುಂದಾಗಿದ್ದಾರೆ.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಆತ ವಾಪಸ್ ಹೋಗಲು ಮುಂದಾಗಿದ್ದಾನೆ. ಇದರಿಂದ ಅನುಮಾನಗೊಂಡ ಸಿಬ್ಬಂದಿ ಅವನನ್ನು ಹಿಡಿದು ತಪಾಸಣೆ ನಡೆಸಿದಾಗ ಒಳುಡುಪಿನಲ್ಲಿ ಒಂದು ಸ್ಮಾರ್ಟ್‌ಫೋನ್, ಇಯರ್ ಫೋನ್ ಪತ್ತೆಯಾಗಿದೆ. ತಕ್ಷಣ ಜೈಲಿನ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಅಮರ್ ಪ್ರಾಂಜೆಯನ್ನ ಬಂಧಿಸಿದ್ದಾರೆ. ಈ ಸಂಬಂಧ ಜೈಲು ಅಧೀಕ್ಷಕ ಹೆಚ್.ಎ ಪರಮೇಶ್ ನೀಡಿದ ದೂರಿನ ಮೇರೆಗೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವ್ಯಕ್ತಿಯ ವಿರುದ್ಧ ಕರ್ನಾಟಕ ಕಾರಾಗೃಹ ಕಾಯ್ದೆಯ ಸೆಕ್ಷನ್ 42 ಮತ್ತು ಭಾರತೀಯ ನ್ಯಾಯ ಸಂಹಿತಾ ಬಿಎನ್‌ಎಸ್ ಸೆಕ್ಷನ್ 323ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

---

# ನೀರಿನ ಬಿಲ್ 3 ಪಟ್ಟು ಹೆಚ್ಚಳ: ದುಬಾರಿ ಬಿಲ್ ನೋಡಿ ಹೌಹಾರಿದ ಗ್ರಾಹಕರು!

• ಉದಯವಾಹಿನಿ ಬೆಂಗಳೂರು

ಜಲಮಂಡಳಿಯ ದುಬಾರಿ ವಾಟರ್ ಬಿಲ್ ನೋಡಿ ಜನ ಶಾಕ್ ಆಗಿದ್ದಾರೆ. ಎರಡ್ಮೂರು ಪಟ್ಟು ಹೆಚ್ಚು ಬಿಲ್ ಬಂದಿದ್ದಕ್ಕೆ, ನಾವು ಬಿಲ್ ಕಟ್ಟೋದಿಲ್ಲ ಅಂತ ಪಟ್ಟು ಹಿಡಿದಿದ್ದಾರೆ. ಬೆಂಗಳೂರು ಜಲಮಂಡಳಿಯ ವಾಟರ್ ಬಿಲ್ ನೋಡಿ ಗ್ರಾಹಕರು ಶಾಕ್ ಆಗಿದ್ದಾರೆ. ಬಸವನಗುಡಿ ವಿಧಾನಸಭಾ ಕ್ಷೇತ್ರದ ಶ್ರೀನಗರದ 11ನೇ ಮುಖ್ಯರಸ್ತೆಯ ನಿವಾಸಿಗಳಿಗೆ ಎರಡ್ಮೂರು ಪಟ್ಟು ವಾಟರ್ ಬಿಲ್ ಬಂದಿದೆ. ಏಕಾಏಕಿ ಹೆಚ್ಚುವರಿ ಬಿಲ್ ಬರೋಕೆ ಕಾರಣ ಏನು ಅಂತ ಜಲಮಂಡಳಿ ಅಧಿಕಾರಿಗಳು ಕೂಡ ಹೇಳ್ತಿಲ್ಲ. ನಾವು ಯಾವ್ದೇ ಕಾರಣಕ್ಕೆ ಬಿಲ್ ಕಟ್ಟಲ್ಲ ಅಂತ ಪಟ್ಟು ಹಿಡಿದಿದ್ದಾರೆ. ಇನ್ನು ಶ್ರೀನಗರದ 11ನೇ ಕ್ರಾಸ್‌ನ ಹಲವು ಮನೆಗಳಿಗೆ ವಾಟರ್ ಬಿಲ್ ಕೊಟ್ಟಿಲ್ಲ. ಜಲಮಂಡಳಿಯ ಸಿಬ್ಬಂದಿಗಳನ್ನೂ ಸರ್ವೆ ಕಾರ್ಯಕ್ಕೆ ಬಳಸಿಕೊಂಡಿದ್ದರಿಂದ ಬಿಲ್ ನೀಡಿಲ್ಲ. ಎರಡು ತಿಂಗಳ ಬಿಲ್ ಕಟ್ಟುವಂತೆ ಅಧಿಕಾರಿಗಳು ಜನರಿಗೆ ಏಕಾಏಕಿ ವಾಟ್ಸಪ್‌ಗೆ ಮೆಸೆಜ್ ಕಳಿಸಿದ್ದಾರೆ. ಈ ವೇಳೆ ಎರಡ್ಮೂರು ಪಟ್ಟು ಬಿಲ್ ಹೆಚ್ಚಳ ಆಗಿದ್ದು ಗೊತ್ತಾಗಿದೆ. ಎರಡು ತಿಂಗಳ ಹಿಂದೆ ಆರು ನೂರು, ಏಳು ನೂರು ಬರ್ತಿದ್ದ ಬಿಲ್, ಈ ತಿಂಗಳು 2 ಸಾವಿರಿಂದ ನಾಲ್ಕು ಸಾವಿರ ಬಿಲ್ ಬಂದಿದೆ. ಬಿಲ್ ನೀಡಲು ಜಲಮಂಡಳಿ ದಿನಾಂಕವನ್ನ ನಿಗದಿ ಮಾಡಲಾಗಿರುತ್ತೆ. ಆ ದಿನಾಂಕ ಮುಗಿದ ಬಳಿಕ ಸಿಬ್ಬಂದಿ ಬಿಲ್ ಕೊಡ್ತಿದ್ದಾರೆ.

---

# ಚಾಮುಂಡಿ ತಾಯಿಯ ಕ್ಷಮೆ ಕೇಳು: ಪ್ರತಾಪ್ ಸಿಂಹಗೆ ಪ್ರದೀಪ್ ಈಶ್ವರ್ ಆಗ್ರಹ

• ಉದಯವಾಹಿನಿ ಬೆಂಗಳೂರು

ಮೈಸೂರಿನ ಮಾಜಿ ಸಂಸದ ಪ್ರತಾಪ್ ಸಿಂಹ ನನ್ನ ತಾಯಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಅವರು ಕ್ಷಮೆ ಕೇಳಬೇಕು ಎಂದು ಶಾಸಕ ಪ್ರದೀಪ್ ಈಶ್ವರ್ ಆಗ್ರಹಿಸಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಮೈಸೂರು ಮಾಜಿ ಎಂಪಿ ನನ್ನ ತಾಯಿಗೆ ಅವಮಾನ ಮಾಡಿದ್ದಾರೆ. ನನ್ನ ತಾಯಿ ಸ್ವರ್ಗದಲ್ಲಿ ಇದ್ದಾರೆ. ನೀನು ಅಲ್ಲಿಗೆ ಹೋಗಿ ಕ್ಷಮೆ ಕೇಳಬೇಡ. ಅಲ್ಲಿಯೇ ನಿಮ್ಮ ಮನೆಯಿಂದ ಹೊರ ಬಂದರೆ ಚಾಮುಂಡಿ ತಾಯಿ ದೇವಸ್ಥಾನ ಇದೆ. ಅಲ್ಲಿಗೆ ಹೋಗಿ ಕ್ಷಮೆ ಕೇಳು. ಇಲ್ಲ ಅಂದ್ರೆ, ನಿಮ್ಮ ಮನೆಯಲ್ಲಿ ಸೀತಾದೇವಿ ಫೋಟೋ ಇದ್ರೆ, ಅಲ್ಲಿಯೇ ಕ್ಷಮೆ ಕೇಳು. ನನ್ನ ತಾಯಿ ಸೀತೆಯಷ್ಟೆ ಶ್ರೇಷ್ಠಳು ಎಂದಿದ್ದಾರೆ. ಪ್ರತಾಪ್ ಸಿಂಹ ನನ್ನ ಬಗ್ಗೆ ಏನೇನೋ ಮಾತನಾಡ್ತಾರೆ. ಅಪ್ಪಂದು ಬಗ್ಗೆ ಮಾತನಾಡ್ತಾರೆ. ನೀನು ತ್ರಿಪುರ ಸುಂದರನಾ ಗುರು. ಕತ್ತಲಲ್ಲಿ ಅವನು ಕಾಣಿಸಲ್ಲ ಅಂದ. ನಾನು ಅದಕ್ಕೆ ಏನೂ ಹೇಳಿಲ್ಲ. ನಿಮಗೆ ನನ್ನನ್ನು ಹುಡುಕವಷ್ಟು ಬರನಾ ಅಂದೆ. ಚಾಟ್ ಜಿಪಿಟಿಯಲ್ಲಿ ಹಾಕು ಬೇಕಾದ್ರೆ. ನೀನು ನನ್ನ ತಾಯಿ ಬಳಿ ಕ್ಷಮೆ ಕೇಳು ಅವರು ಕ್ಷಮಿಸಿಸುತ್ತಾರೆ ಎಂದು ಟಾಂಗ್ ಕೊಟ್ಟಿದ್ದಾರೆ.

---

# ಕಂದಕಕ್ಕೆ ಉರುಳಿದ ಕಂಟೈನರ್ ಲಾರಿ ಇಬ್ಬರು ದುರ್ಮರಣ, ನಾಲ್ವರು ಗಂಭೀರ

• ಉದಯವಾಹಿನಿ ಬೆಂಗಳೂರು

ಕಂಟೈನರ್ ಲಾರಿಯೊಂದು ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ್ದು, ನಾಲ್ವರು ಗಂಭೀರ ಗಾಯಗೊಂಡಿರುವ ಘಟನೆ ಬೆಂಗಳೂರು ಹೊರವಲಯದ ಆನೇಕಲ್ ತಾಲ್ಲೂಕಿನ ಉರಗನದೊಡ್ಡಿ ಬಳಿ ನಡೆದಿದೆ. ಬೆಳಗ್ಗೆ 11 ಗಂಟೆಯ ಸುಮಾರಿಗೆ ಅವಘಡ ಸಂಭವಿಸಿದೆ.

ರಸ್ತೆಯ ಕೇಬಲ್ ಡ್ರಿಲ್ಲಿಂಗ್ ಮಿಷನ್ ತುಂಬಿದ್ದ ಕಂಟೈನರ್ ಇಳಿಜಾರಿನ ತಿರುವಿನಲ್ಲಿ ಅತಿವೇಗವಾಗಿ ಬಂದ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿದೆ. ಘಟನೆಯ ಪರಿಣಾಮ ಇಬ್ಬರು ಕಾರ್ಮಿಕರು ಕಂಟೈನರ್ ಕೆಳಗೆ ಸಿಲುಕಿ ಮೃತಪಟ್ಟಿದ್ದಾರೆ. ಉಳಿದ ನಾಲ್ವರಿಗೆ ಗಂಭೀರ ಗಾಯಗಳಾಗಿದ್ದು, ಓರ್ವನ ಸ್ಥಿತಿ ಚಿಂತಾಜನಕವಾಗಿದೆ. ಸದ್ಯ ಗಾಯಾಳುಗಳಿಗೆ ಜಿಗಣಿಯ ವಿಜಯಶ್ರೀ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಪೊಲೀಸರು ಎರಡು ಕ್ರೇನ್ ನೆರವಿನಿಂದ ಮೃತದೇಹಗಳನ್ನು ಹೊರತೆಗೆದಿದ್ದಾರೆ. ಮೃತರನ್ನು ಜಾರ್ಖಂಡ್ ಮೂಲದ ಶ್ರೀಮಾನ್ (25), ಆಂಧ್ರಪ್ರದೇಶ ಮೂಲದ ಶ್ರೀನಿವಾಸ್ (26) ಎಂದು ಗುರುತಿಸಲಾಗಿದೆ. ಮೃತ ಶ್ರೀನಿವಾಸ್ ಕಂಟೈನರ್ ಚಾಲಕನಾಗಿದ್ದು, ಶ್ರೀಮಾನ್ ಕೇಬಲ್ ಡ್ರಿಲ್ಲಿಂಗ್ ಮಿಷನ್ ಆಪರೇಟರ್ ಆಗಿದ್ದ. ಘಟನಾ ಸ್ಥಳಕ್ಕೆ ಡಿವೈಎಸ್ಪಿ ಮೋಹನ್ ಕುಮಾರ್, ಜಿಗಣಿ ಇನ್ಸ್‌ಪೆಕ್ಟರ್ ಮಂಜುನಾಥ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಲ್ಲದೇ ಬೆಂಗಳೂರು ಗ್ರಾಮಾಂತರ ಎಎಸ್‌ಪಿ ವೆಂಕಟೇಶ್ ಪ್ರಸನ್ನ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ

---

# ಚುನಾವಣಾ ಆಯೋಗ ಬಿಜೆಪಿ ಅಂಗಸಂಸ್ಥೆಯಂತೆ ಕೆಲಸ ಮಾಡುತ್ತಿದೆ: ಸಚಿವ ಕೃಷ್ಣ ಬೈರೇಗೌಡ

• ಉದಯವಾಹಿನಿ ಬೆಂಗಳೂರು

ಚುನಾವಣಾ ಆಯೋಗ ಬಿಜೆಪಿಯ ಅಂಗಸಂಸ್ಥೆಯಂತೆ ಕೆಲಸ ಮಾಡುತ್ತಿದ್ದು, ಬಿಜೆಪಿ ಮತ್ತು ಭಾರತ ಚುನಾವಣಾ ಆಯೋಗವು ದೇಶದ ಚುನಾವಣಾ ವ್ಯವಸ್ಥೆಯನ್ನು ನಾಶಮಾಡಲು ಪ್ರಯತ್ನಿಸುತ್ತಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಆರೋಪಿಸಿದ್ದಾರೆ.


ಉದಯವಾಹಿನಿ ಚಿತ್ರ

ಮತ ಕಳ್ಳತನದ ವಿರುದ್ಧ ಸಹಕಾರನಗರದಲ್ಲಿರುವ ತಮ್ಮ ಗೃಹ ಕಚೇರಿಯಿಂದ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಕೃಷ್ಣ ಬೈರೇಗೌಡ ಸುದ್ದಿಗಾರರೊಂದಿಗೆ ಮಾತನಾಡಿದರು.

ಚುನಾವಣಾ ಆಯೋಗ ಬಿಜೆಪಿಯ ಅಂಗಸಂಸ್ಥೆಯಂತೆ ಕೆಲಸ ಮಾಡುತ್ತಿದೆ. ಪರಿಣಾಮ ಇಡೀ ದೇಶದ ಚುನಾವಣಾ ಪ್ರಕ್ರಿಯೆಯೇ ಬುಡಮೇಲಾಗಿದೆ. ಚುನಾವಣಾ ವ್ಯವಸ್ಥೆಯಲ್ಲೇ ಅಕ್ರಮ ಎಸಗಿಬಿಟ್ಟರೆ ಬಿಜೆಪಿಯ ಗೆಲುವು ಸುಲಭ. ಹೀಗಾಗಿ ಚುನಾವಣಾ ಆಯೋಗ ಮತ್ತು ಬಿಜೆಪಿ ಜಂಟಿಯಾಗಿಯೇ ಈ ಅಕ್ರಮದಲ್ಲಿ ಶಾಮೀಲಾಗಿದೆ' ಎಂದು ಕಿಡಿಕಾರಿದರು.

**ಮಹದೇವಪುರದಲ್ಲಿ 35 ಸಾವಿರ ಅಕ್ರಮ ಮತಗಳನ್ನು ಪಟ್ಟಿಗೆ ಸೇರಿಸಿದ್ದಾರೆ ಎಂಬುದನ್ನು ಸಾಕ್ಷಿ ಸಮೇತ ನಿರೂಪಿಸಲಾಗಿದೆ. ಆಳಂದ ಕ್ಷೇತ್ರದಲ್ಲಿ 6 ಸಾವಿರ ನೈಜ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈ ಅಕ್ರಮದ ಮಾಹಿತಿ ಸೂಕ್ತ ಸಮಯಕ್ಕೆ ಶಾಸಕ ಬಿ.ಆರ್.ಪಾಟೀಲ ಗಮನಕ್ಕೆ ಬಂದ ಕಾರಣಕ್ಕೆ ಇದನ್ನು ತಡೆಯಲಾಯಿತು. ಇಲ್ಲದಿದ್ದರೆ ಅಷ್ಟೂ ಹೆಸರುಗಳನ್ನು ಪಟ್ಟಿಯಿಂದ ತೆಗೆಯಲಾಗುತ್ತಿತ್ತು. ಇದು ಚುನಾವಣೆಯೊಂದರ ಫಲಿತಾಂಶದ ಮೇಲೂ ಪರಿಣಾಮ ಬೀರುತ್ತಿತ್ತು ಎಂದು ಹೇಳಿದರು.**

---

# ಖಾಸಗಿ-ಸರ್ಕಾರಿ ಬಸ್‌ಗಳಲ್ಲಿ ಸುರಕ್ಷತಾ ಆಡಿಟ್ ನಡೆಸಲು ಮುಂದು..!

• ಉದಯವಾಹಿನಿ ಬೆಂಗಳೂರು

ಕರ್ನೂಲ್ ಬಸ್ ದುರಂತ ಘಟನೆ ಬಳಿಕ ರಾಜ್ಯ ಸರ್ಕಾರ ಕೂಡ ಎಚ್ಚೆತ್ತುಕೊಂಡಿದ್ದು, ರಾಜ್ಯದ ಎಲ್ಲಾ ಖಾಸಗಿ ಹಾಗೂ ಸರ್ಕಾರಿ ಬಸ್ ಗಳಲ್ಲಿ ಸುರಕ್ಷತಾ ಆಡಿಟ್ ನಡೆಸಲು ಮುಂದಾಗಿದೆ.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿಯವರು ಮಾತನಾಡಿ, ರಾಜ್ಯದ ಎಲ್ಲಾ ಖಾಸಗಿ ಬಸ್‌ಗಳು ಮತ್ತು ಸರ್ಕಾರಿ ಬಸ್‌ಗಳಲ್ಲಿ ತುರ್ತು ನಿರ್ಗಮನಗಳು ಮತ್ತು ಸುರಕ್ಷತಾ ಸಾಧನಗಳಿವೆಯೇ ಎಂದು ಖಚಿತಪಡಿಸಿಕೊಳ್ಳಲು ತಪಾಸಣೆ ನಡೆಸುವಂತೆ ಅಧಿಕಾರಿಗಳಿಗೆ ಆದೇಶ ನೀಡಿರುವುದಾಗಿ ತಿಳಿಸಿದ್ದಾರೆ.

ಅಧಿಕಾರಿಗಳೊಂದಿಗೆ ಈಗಾಗಲೇ ಚರ್ಚೆ ನಡೆಸುತ್ತಿವೆ.

**ಕರ್ನೂಲ್ ಬಸ್ ದುರಂತ ಬಳಿಕ ಎಚ್ಚೆತ್ತ ಸರ್ಕಾರ**

ಬಸ್‌ಗಳ ನಿರ್ವಾಹಕರು ಬಸ್‌ಗಳ ತುರ್ತು ಬಾಗಿಲು ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.



ಲಗೇಜ್ ವಿಭಾಗಗಳಲ್ಲಿ ಯಾವುದೇ ಸುಡುವ ಅಥವಾ ಸ್ಫೋಟಕ ವಸ್ತುಗಳನ್ನು ಸಾಗಿಸದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಎಲ್ಲಾ ಎಸಿ ಬಸ್‌ಗಳಲ್ಲಿ ಕಿಟಕಿಗಳನ್ನು ಒಡೆಯಲು ಸುತ್ತಿಗೆಗಳು ಇರಬೇಕು. ನಾನು ಈ ಹಿಂದೆ ಸಾರಿಗೆ ಸಚಿವನಾಗಿದ್ದಾಗಲೂ 2013ರ ಬಸ್ ಬೆಂಕಿ ದುರಂತದ ನಂತರ ತುರ್ತು ನಿರ್ಗಮನಗಳನ್ನು ಕಡ್ಡಾಯಗೊಳಿಸಿದ್ದೆ ಎಂದು ತಿಳಿಸಿದ್ದಾರೆ.

ಬಸ್ಸುಗಳ ಫಿಟ್‌ನೆಸ್ ನವೀಕರಣದ ಸಮಯದಲ್ಲಿ, ತುರ್ತು ನಿರ್ಗಮನಗಳು ಮತ್ತು ಸುತ್ತಿಗೆಗಳನ್ನು ಪರಿಶೀಲಿಸಲಾಗುತ್ತದೆ.

ವಾಹನವು ಎಂಟು ವರ್ಷಗಳನ್ನು ಪೂರ್ಣಗೊಳಿಸುವವರೆಗೆ, ಪ್ರತಿ ಎರಡು ವರ್ಷಗಳಿಗೊಮ್ಮೆ ತಪಾಸಣೆ ಮಾಡಲಾಗುತ್ತದೆ. ಹೆಚ್ಚಿನ ಪ್ರಯಾಣಿಕ ವಾಹನಗಳು ಮಾನ್ಯ ಫಿಟ್‌ನೆಸ್ ಪ್ರಮಾಣಪತ್ರಗಳನ್ನು ಹೊಂದಿವೆ ಎಂಬುದನ್ನು ನಾವು ಪರಿಶೀಲಿಸುತ್ತಲೇ ಇರುತ್ತೇನೆಂದು ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

**ಮತ್ತೊಬ್ಬ ಅಧಿಕಾರಿ ಮಾತನಾಡಿ, ವಾಣಿಜ್ಯ ಸರಕುಗಳನ್ನು ಸಾಗಿಸಲು ಕಠಿಣ ನಿಯಮ ಜಾರಿ ಮಾಡುವ ಅಗತ್ಯವಿದೆ. ಏಕೆಂದರೆ, ಪ್ರಸ್ತುತ ನಿಯಮ ಉಲ್ಲಂಘನೆಗಳಿಗೆ ಕೇವಲ 5,000 ರೂ. ದಂಡ ಮಾತ್ರ ವಿಧಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.**

---

# ಮತಗಳ್ಳತನಕ್ಕೆಂದೇ ಆಳಂದ ಕ್ಷೇತ್ರದಲ್ಲಿ ಕಾಲ್ ಸೆಂಟರ್ ತೆರೆಯಲಾಗಿತ್ತು..!

• ಉದಯವಾಹಿನಿ ಬೆಂಗಳೂರು

ಕಲಬುರಗಿ ಜಿಲ್ಲೆಯ ಆಳಂದ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಗಳ್ಳತನ ಆರೋಪ ಕುರಿತ ತನಿಖೆ ವೇಗ ಪಡೆದುಕೊಂಡಿದೆ.

ಪ್ರಕರಣದ ಆರೋಪಿಗಳೆಂದು ಗುರ್ತಿಸಲಾಗಿರುವ ಅಕ್ರಮ್, ಅಶ್ಫಾಕ್, ನದೀಮ್ ಮತ್ತು ಮುಷ್ತಾಕ್ ಮತಗಳ್ಳತನಕ್ಕೆಂದೇ ಕಾಲ್ ಸೆಂಟರ್ ಸ್ಥಾಪಿಸಿದ್ದು, ಈ ಸೆಂಟರ್ ನಲ್ಲಿ ಐದು ಕಂಪ್ಯೂಟರ್ ಇರಿಸಿಕೊಂಡು 6,018 ಫಾರ್ಮ್ 7 ಅರ್ಜಿಗಳನ್ನು ಸ್ವೀಕರಿಸಿದ್ದರು ಎಂದು ಮೂಲಗಳು ತಿಳಿಸಿವೆ. ಈ ನಾಲ್ವರು ಆರೋಪಿಗಳು ಒಬ್ಬರು ಆನ್‌ಲೈನ್ ರಾಜಕೀಯ ಸರ್ವೇಯರ್/ಮ್ಯಾನಿಪ್ಯುಲೇಟರ್, ಒಬ್ಬ ಡೇಟಾ ಆಪರೇಟರ್, ಇತರ ಇಬ್ಬರು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವಲ್ಲಿ ಪರಿಣತರಾಗಿದ್ದರು ಎಂದು ಮೂಲಗಳು ತಿಳಿಸಿವೆ.


ಉದಯವಾಹಿನಿ ಚಿತ್ರ

ಆರೋಪಿಗಳು 6,018 ಅರ್ಜಿಗಳಿಗೆ ಲಾಗಿನ್ ಐಡಿಗಳನ್ನು ರಚಿಸಲು ದುರ್ಬಲ ವರ್ಗಗಳ 75 ಮಂದಿ ಮೊಬೈಲ್ ಫೋನ್ ಸಂಖ್ಯೆಗಳನ್ನು ಬಳಸಿದ್ದಾರೆಂದು ಎಸ್‌ಐಟಿ ಮೂಲಗಳು ಮಾಹಿತಿ ನೀಡಿದೆ.

ಒಟಿಪಿ ಮೂಲಕ ಲಾಗಿನ್ ಐಡಿ ರಚಿಸಲಾಗಿದೆ. ಆರೋಪಿಗಳು 75 ಮೊಬೈಲ್ ಫೋನ್ ಸಂಖ್ಯೆಗಳನ್ನು ಹೇಗೆ ಪಡೆದರು ಮೊಬೈಲ್ ಸಂಖ್ಯೆಗಳನ್ನು ಹ್ಯಾಕ್ ಮಾಡಿದ್ದರೇ ಎಂಬುದರ ಕುರಿತು ವಿಚಾರಣೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಈಗಾಗಲೇ ಅಕ್ರಮ್, ನದೀಮ್ ಹಾಗೂ ಮುಷ್ತಾಕ್ ನನ್ನು ವಿಚಾರಣೆ ನಡೆಸಿದ್ದು, ಮತ್ತೋರ್ವ ಆರೋಪಿ ಪತ್ತೆಗೆ ದುಬೈಗೆ ತೆರಳಲು ಸಿದ್ಧತೆ ನಡೆಸಿದೆ ಎಂದು ತಿಳಿದುಬಂದಿದೆ.

2023ರಲ್ಲಿ ಪ್ರಕರಣ ಸಂಬಂಧ ಕಲಬುರಗಿ ಪೊಲೀಸರು ಅಶ್ಫಾಕ್ ನನ್ನು ವಿಚಾರಣೆ ನಡೆಸಿದ್ದು, ವಿಚಾರಣೆ ಬಳಿಕ ಆರೋಪಿ ದುಬೈಗೆ ಹಾರಿದ್ದ ಎನ್ನಲಾಗಿದೆ. ಈ ವಂಚನೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳು ಪ್ರಮುಖ ಪಾತ್ರ ವಹಿಸಿದ್ದಾರೆ. ಅರ್ಜಿಗಳ ಸಲ್ಲಿಕೆಗೆ ಡೇಟಾ ಆಪರೇಟರ್ ಅನ್ನು ಬಳಸಲಾಗಿದೆ. ನಂತರ ಈತ ನಾಲ್ವರ ಸಹಾಯ ಪಡೆದುಕೊಂಡಿದ್ದಾನೆ.

ಈ ನಾಲ್ವರು ನಿರುದ್ಯೋಗಿಗಳಾಗಿದ್ದು, 25–30 ವರ್ಷ ವಯಸ್ಸಿನವರಾಗಿದ್ದಾರೆ. ನಾಲ್ವರು ಆರೋಪಿಗಳಿಗೆ ಪ್ರತೀ ಅರ್ಜಿಗೆ ರೂ.80 ಪಾವತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

---

# ಹೂಡಿಕೆದಾರರ ಸ್ನೇಹಿ? ಕರ್ನಾಟಕದಲ್ಲಿ ಅನೇಕ ಅಡೆತಡೆ ಎದುರಿಸುತ್ತಿರುವ ಉದ್ಯಮಿಗಳು!

• ಉದಯವಾಹಿನಿ ಬೆಂಗಳೂರು

ಹೂಡಿಕೆದಾರರ ಆದ್ಯತೆಯ ತಾಣವಾಗಿರುವ ಕರ್ನಾಟಕದಲ್ಲಿ ಹಲವು ಸವಾಲುಗಳು ಅಡ್ಡಿಯಾಗುತ್ತಲೇ ಇವೆ ಎಂದು ಪ್ರಮುಖ ಕೈಗಾರಿಕೋದ್ಯಮಿಯೊಬ್ಬರು ಹೇಳಿದ್ದಾರೆ. ಕರ್ನಾಟಕವು ತನ್ನ ನುರಿತ ಕೆಲಸಗಾರರು, ಬಲವಾದ ತಂತ್ರಜ್ಞಾನ ಮತ್ತು ಕಾರ್ಯತಂತ್ರದ ಸ್ಥಳಕ್ಕಾಗಿ ಸಾಮಾನ್ಯವಾಗಿ ಪ್ರಶಂಸಿಸಲ್ಪಡುತ್ತಿರುವಾಗ, ನೈಜ ಪರಿಸ್ಥಿತಿಯು ಕಾಗದದ ಮೇಲೆ ಕಾಣುವುದಕ್ಕಿಂತ ಕಡಿಮೆ ಸ್ನೇಹಪರವಾಗಿವೆ ಎಂದು ಉದ್ಯಮಿ ಹೇಳಿದರು.

ಮಾಜಿ ಎಫ್‌ಕೆಸಿಸಿಐ ಅಧ್ಯಕ್ಷ, ಕೈಗಾರಿಕೋದ್ಯಮಿ ಡಿ ಮುರಳೀಧರ್ ಹೇಳುವಂತೆ ಭೂಮಿಯ ಲಭ್ಯತೆ ಬೆಲೆಯು ಹೊಸ ಹೂಡಿಕೆದಾರರು ಎದುರಿಸುತ್ತಿರುವ ದೊಡ್ಡ ಅಡ್ಡಿಯಾಗಿದೆ. ಕೈಗೆಟುಕುವ ದರದಲ್ಲಿ ಕೈಗಾರಿಕಾ ಭೂಮಿ ಸಿಗುತ್ತಿಲ್ಲ ಮತ್ತು ಸ್ವಾಧೀನ ಪ್ರಕ್ರಿಯೆಯು ಜಟಿಲವಾಗಿದೆ. ವಿದ್ಯುತ್ ಪೂರೈಕೆ ಸಮಸ್ಯೆಗಳು ಕೈಗಾರಿಕಾ ಕಾರ್ಯಾಚರಣೆ ಮತ್ತು ಹೂಡಿಕೆದಾರರ ವಿಶ್ವಾಸದ ಮೇಲೆ ಪರಿಣಾಮ ಬೀರುತ್ತವೆ ಎಂದು ಅವರು ಹೇಳಿದರು.

ಗ್ರಾಮ ಪಂಚಾಯತಿ ತೆರಿಗೆಗಳು ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಹೊರೆಯಾಗಿವೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಒಟ್ಟಾರೆ ವೆಚ್ಚವು ತೀವ್ರವಾಗಿ ಏರಿದೆ. ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಪ್ರದೇಶವು ಕಡಿಮೆ ಸ್ಪರ್ಧಾತ್ಮಕವಾಗಿದೆ. ಅಧಿಕಾರಿಗಳು ನಿರ್ಲಕ್ಷ್ಯ ವರ್ತನೆ ಪ್ರಮುಖ ಸಮಸ್ಯೆಯಾಗಿದೆ ಎಂದರು. ಸುಧಾರಣೆಯ ಸರ್ಕಾರದ ಭರವಸೆಗಳ ಹೊರತಾಗಿಯೂ, ಹೊಸ ಉದ್ಯಮಗಳು ಕಾರ್ಯವಿಧಾನದ ವಿಳಂಬ, ಸ್ಪಷ್ಟತೆಯ ಕೊರತೆ ಮತ್ತು ವಿವೇಚನಾಯುಕ್ತ ನಿರ್ಧಾರ ಕೈಗೊಳ್ಳುವಲ್ಲಿ ವಿಫಲತೆ ಎದುರಿಸುತ್ತಿವೆ. ಹೊಸ ಹೂಡಿಕೆಯ ನೆಲದ ವಾಸ್ತವತೆಗಳು ಭರವಸೆ ನೀಡಿದ್ದಕ್ಕಿಂತ ಬಹಳ ಭಿನ್ನವಾಗಿವೆ. ಕೆಂಪು ಪಟ್ಟಿ ಮತ್ತು ವಿಳಂಬಗಳು ಭ್ರಷ್ಟಾಚಾರಕ್ಕೆ ಮತ್ತೊಂದು ಪದವಾಗಿದೆ. ಡಿಜಿಟಲ್ ವ್ಯವಸ್ಥೆಗಳು ಸಮರ್ಥವಾಗಿಲ್ಲ. ಏಕ ಗವಾಕ್ಷಿ ವ್ಯವಸ್ಥೆ ಪ್ರಾಯೋಗಿಕವಾಗಿ ನಿಷ್ಪರಿಣಾಮಕಾರಿಯಾಗಿದೆ.

ಹೂಡಿಕೆದಾರರು ಅನುಮೋದನೆಗಾಗಿ ಅನೇಕ ಇಲಾಖೆಗಳಿಗೆ ಅಲೆದಾಡುವಂತಾಗಿದೆ ಎಂದು ಅವರು ಹೇಳಿದರು.

---

# ಈರುಳ್ಳಿ ಮೂಟೆಯಲ್ಲಿ ಶ್ರೀಗಂಧ ತುಂಡುಗಳ ಕಳ್ಳಸಾಗಣೆ

• ಉದಯವಾಹಿನಿ ಬೆಂಗಳೂರು

ಪುಷ್ಪ ಸಿನಿಮಾದಲ್ಲಿ ರಕ್ತಚಂದನ ಸ್ಮಗ್ಲಿಂಗ್ ಹೇಗೆಲ್ಲಾ ಮಾಡ್ತಾರೆ ಅಂತಾ ನೋಡಿರುತ್ತೀರಿ. ಇದನ್ನೇ ಪ್ರೇರಣೆಯಾಗಿ ತೆಗೆದುಕೊಂಡು ಖತರ್ನಾಕ್ ಶ್ರೀಗಂಧ ಕಳ್ಳರು ಈರುಳ್ಳಿ ಮೂಟೆಯಲ್ಲಿ ಶ್ರೀಗಂಧ ಸಾಗಿಸಿ ಲಾಕ್ ಆಗಿದ್ದಾರೆ.

ಈರುಳ್ಳಿ ಮೂಟೆಗಳನ್ನ ಸಾಗಿಸುತ್ತಿದ್ದ ವ್ಯಾನ್ ಪರಿಶೀಲನೆ ನಡೆಸಿದ ಪೊಲೀಸರೇ ಒಂದು ಕ್ಷಣ ದಂಗಾಗಿ ಹೋಗಿದ್ದಾರೆ. ಯಾಕಂದ್ರೆ ಖತರ್ನಾಕ್ ಕಳ್ಳರು ಈರುಳ್ಳಿ ಮೂಟೆಯಲ್ಲಿ ಶ್ರೀಗಂಧ ಸಾಗಿಸುತ್ತಿದ್ದರು. ಪುಷ್ಪಾ ಸಿನಿಮಾ ಸ್ಟೈಲ್ ರೀತಿಯಲ್ಲೇ ಶ್ರೀಗಂಧದ ಮರದ ತುಂಡುಗಳನ್ನ ಚೀಲದ ಅಡಿಯಲ್ಲಿ ಹಾಕಿ ಮೇಲೆ ಈರುಳ್ಳಿ ತುಂಬಿ ಸಾಗಿಸಲಾಗುತ್ತಿತ್ತು. ಆಂಧ್ರಪ್ರದೇಶದ ಕರ್ನೂಲ್‌ನಿಂದ ಬೆಂಗಳೂರಿಗೆ ಶ್ರೀಗಂಧವನ್ನ ತಂದು ಇನ್ನೇನು ಡೆಸ್ಟಿನೇಷನ್‌ಗೆ ರೀಚ್ ಆಗಬೇಕು ಅನ್ನುವಷ್ಟರಲ್ಲಿ ನಾಕಾಬಂದಿ ಹಾಕಿ ತಪಾಸಣೆ ಮಾಡುತ್ತಿದ್ದ ಸಿದ್ದಾಪುರ ಪೊಲೀಸರಿಗೆ ಶ್ರೀಗಂಧದ ಮರಗಳ ಸಮೇತ ನಾಲ್ವರು ಲಾಕ್ ಆಗಿದ್ದಾರೆ.


ಉದಯವಾಹಿನಿ ಚಿತ್ರ

**18 ಮೂಟೆಗಳಲ್ಲಿ 750 ಕೆಜಿ ಶ್ರೀಗಂಧ ವಶಕ್ಕೆ**

ಸಿರಾಜ್ ಎಂಬಾತ ತನ್ನ ಗ್ಯಾಂಗ್‌ನೊಂದಿಗೆ ಆಂಧ್ರದ ಕರ್ನೂಲ್ ಕಾಡುಗಳಲ್ಲಿ ಶ್ರೀಗಂಧ ಕಡಿದು ಈರುಳ್ಳಿ ಮಾರಾಟಗಾರರ ವೇಷದಲ್ಲಿ ಬೆಂಗಳೂರಿಗೆ ತಂದು ಇಲ್ಲಿಂದ ಚೀನಾಗೆ ಸಪ್ಲೈ ಮಾಡುತ್ತಿದ್ದ.

ಸಿದ್ದಾಪುರ ಪೊಲೀಸರು ನಾಕಾಬಂದಿ ಹಾಕಿ ಪರಿಶೀಲನೆ ನಡೆಸಿದಾಗ ಈರುಳ್ಳಿ ಮೂಟೆಗಳಲ್ಲಿ 18 ಶ್ರೀಗಂಧದ ಮರದ ತುಂಡುಗಳ ಬ್ಯಾಗ್ ಜಪ್ತಿಯಾಗಿದೆ.

ಆಂಧ್ರದ ಸಿರಾಜ್ ತನ್ನ ಗ್ಯಾಂಗ್ ಸದಸ್ಯರೊಂದಿಗೆ ಶ್ರೀಗಂಧ ಕಡಿದು, ಅಕ್ರಮವಾಗಿ ಖರಿದಿ ಮಾಡಿ ಬೆಂಗಳೂರಿನ ಡೀಲರ್‌ಗೆ ತಲುಪಿಸಿ ಬಳಿಕ ಚೀನಾಗೆ ತಲುಪಿಸುತ್ತಿದ್ದರು.

ಈ ಸಂಬಂಧ ಶೇಖ್ ಶಾರೂಕ್, ಶೇಖ್ ಅಬ್ದುಲ್, ಪರಮೇಶ್, ರಾಮ್ ಭೂಪಾಲ್ ಎಂಬ ನಾಲ್ವರು ಶ್ರೀಗಂಧ ಸ್ಮಗ್ಲರ್ಸ್‌ಗಳನ್ನು ಬಂಧಿಸಲಾಗಿದೆ. ಶ್ರೀಗಂಧ ಅಕ್ರಮ ಸಾಗಾಟದ ಜಾಲದ ಹಿಂದೆ ಬಿದ್ದಿರುವ ಪೊಲೀಸರು ತಲೆಮರೆಸಿಕೊಂಡಿರುವ ಬೆಂಗಳೂರಿನ ಡೀಲರ್‌ಗಾಗಿ ಹುಡುಕಾಟ ನಡೆಸುತ್ತಿದ್ದಾರೆ

---

# ಟನೆಲ್ ರಸ್ತೆ ಬಗ್ಗೆ ಮಾತಾಡಲು ತೇಜಸ್ವಿ ಸೂರ್ಯಗೆ ಸಮಯ ಕೊಟ್ಟಿದ್ದೇನೆ: ಡಿಕೆಶಿ

## ಹೈಕೋರ್ಟ್ ಸ್ಥಳಾಂತರ ಮತ್ತು ಕಾಂಗ್ರೆಸ್ ಕಚೇರಿಗಳ ನಿರ್ಮಾಣದ ಬಗ್ಗೆಯೂ ಅವರು ಮಾಹಿತಿ ನೀಡಿದರು

• ಉದಯವಾಹಿನಿ ಬೆಂಗಳೂರು

ಟನೆಲ್ ರಸ್ತೆಯಿಂದ ಲಾಲ್‌ಭಾಗ್ ಪರಿಸರಕ್ಕೆ ಹಾನಿ ವಿಚಾರವಾಗಿ ಮಾತನಾಡಿದ ಡಿಕೆ ಶಿವಕುಮಾರ್, ಸಂಸದ ತೇಜಸ್ವಿ ಸೂರ್ಯ ಈ ಬಗ್ಗೆ ಚರ್ಚಿಸಲು ಸಮಯ ಕೇಳಿದ್ದು, ಟೈಂ ಕೊಟ್ಟಿದ್ದೇನೆ, ಮಾತಾಡುತ್ತೇವೆ ಎಂದರು.

ಕಬ್ಬನ್ ಪಾರ್ಕ್‌ನಲ್ಲಿ ನಡೆದ ಬೆಂಗಳೂರು ನಡಿಗೆ ಕಾರ್ಯಕ್ರಮದ ವೇಳೆ ಶಿವಕುಮಾರ್ ಅವರು ಸಾರ್ವಜನಿಕರ ಜೊತೆ ಮಾತನಾಡಿದ ಬಳಿಕ, ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಬೆಂಗಳೂರು ಟನೆಲ್ ರಸ್ತೆ ಬಗ್ಗೆ ಮಾತನಾಡಿ, ಟನಲ್ ರಸ್ತೆ ಬಹುತೇಕ ಜನ ಸ್ವಾಗತ ಮಾಡಿದ್ದಾರೆ. ಟನಲ್ ರಸ್ತೆಯನ್ನು ಸ್ಟಾಪ್ ಮಾಡಬೇಡಿ ಅಂದಿದ್ದಾರೆ. ತೇಜಸ್ವಿಸೂರ್ಯ ಒಬ್ಬರೇ ವಿರೋಧ ಮಾಡಿದ್ದಾರೆ. ತೇಜಸ್ವಿಸೂರ್ಯ ನನ್ನ ಜೊತೆ ಮಾತಾಡಬೇಕು ಅಂದಿದ್ದಾರೆ. ಸೋ ನಾನು ಟೈಮ್ ಕೊಟ್ಟಿದ್ದೀನಿ ಸುರಂಗ ರಸ್ತೆ ಬೇಡವೇ ಬೇಡ ಅಂದ್ರೆ ಹೇಗೆ ಪರ್ಯಾಯ ವ್ಯವಸ್ಥೆ ಎಂದು ಹೇಳಬೇಕು.


ಉದಯವಾಹಿನಿ ಚಿತ್ರ



ತೇಜಸ್ವಿಗೆ ಟೈಮ್ ಕೊಟ್ಟಿದ್ದೀನಿ ಮಾತಾಡುತ್ತೇವೆ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

**ಎ ಖಾತಾ ಪರಿವರ್ತನೆ ಜನ ಸ್ವಾಗತಿಸಿದ್ದಾರೆ:**
ಬೆಂಗಳೂರಿನ ಬಿ ಖಾತಾ ಆಸ್ತಿಗಳನ್ನು ಎ ಖಾತಾಗೆ ಪರಿವರ್ತನೆ ಮಾಡುತ್ತಿರುವ ಬಗ್ಗೆ ಇಲ್ಲಸಲ್ಲದ ಟೀಕೆ ಮಾಡುತ್ತಿರುವ ಕುಮಾರಸ್ವಾಮಿ ಖಾಲಿ ಟ್ರಂಕ್ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ವಾಗ್ದಾಳಿ ನಡೆಸಿದರು.

### ಹೈಕೋರ್ಟ್ ಸ್ಥಳಾಂತರದ ಬಗ್ಗೆ ಹೇಳಿದ್ದೇನು?

ಹೈಕೋರ್ಟ್‌ಗೆ ಸದ್ಯ ಜಾಗ ಸಾಲುತ್ತಿಲ್ಲ ಅನ್ನುವುದು ವಕೀಲರ ಅಭಿಪ್ರಾಯ. ಈ ಬಗ್ಗೆ ಜಾಗ ಗುರುತಿಸುವ ಕೆಲಸ ಆಗ್ತಿದೆ. ಅವರಿಗೆ ಹೋಗಿ ಬರೋದಕ್ಕೆ ಅನುಕೂಲ ಆಗಬೇಕು. ಗುರುತಿಸುವ ಜಾಗ ಲಾಯರ್‌ಗಳಿಗೆ ಹತ್ತಿರ ಆಗಬೇಕು. ಕೆಲವು ಲಾಯರ್ ನಿನ್ನೆ ಈ ವಿಚಾರಕ್ಕೆ ನನ್ನ ಭೇಟಿ ಮಾಡಿದ್ದಾರೆ. ರೇಸ್ ಕೋರ್ಸ್ ವಿಚಾರವಾಗಿ ಮಾತನಾಡಿದ್ದಾರೆ. ಅಲ್ಲಿ ಜಾಗದ ಬಗ್ಗೆ ವಿವರಿಸಿದ್ದಾರೆ ಎಂದರು.

ಈ ವೇಳೆ ನಾಗರಿಕರೊಬ್ಬರು, ಸರ್ಕಾರ ಎಲ್ಲಾ ಆಸ್ತಿಗಳನ್ನು ಎ ಖಾತಾ ಆಗಿ ಪರಿವರ್ತನೆ ಮಾಡುತ್ತಿರುವುದು ಒಳ್ಳೆಯ ಕೆಲಸ.

ಈ ಪರಿವರ್ತನೆಗಾಗಿ ಅನೇಕರು, ಹಲವು ವರ್ಷಗಳಿಂದ ಕಾಯುತ್ತಿದ್ದರು ಎಂದು ಸರ್ಕಾರದ ತೀರ್ಮಾನವನ್ನು ಸ್ವಾಗತಿಸಿ, ಮುಕ್ತವಾಗಿ ಪ್ರಶಂಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಸಿಎಂ, ಎ ಖಾತಾ ನಿಮ್ಮ ಆಸ್ತಿ ದಾಖಲೆ. ಸಾರ್ವಜನಿಕರ ಆಸ್ತಿ ದಾಖಲೆಗಳನ್ನು ಸರಿಪಡಿಸಿ, ಅವುಗಳನ್ನು ಜನರಿಗೆ ನೀಡುವುದು ನಮ್ಮ ಸರ್ಕಾರದ ಆರನೇ ಗ್ಯಾರಂಟಿ. ಇದಕ್ಕಾಗಿ ನಾವು ಕೇವಲ 5% ಮಾತ್ರ ಅಭಿವೃದ್ಧಿ ಶುಲ್ಕ ಪಾವತಿ ಮಾಡುವಂತೆ ಕೇಳಿದ್ದೇವೆ. ನಿಮ್ಮಂತಹ ಪ್ರಜ್ಞಾವಂತ ನಾಗರೀಕರು ಇದನ್ನು ಸ್ವಾಗತಿಸಿರುವುದಕ್ಕೆ ಧನ್ಯವಾದ ಎಂದು ನಮಿಸಿದರು.

ಎ ಖಾತಾ ಬಿ ಖಾತಾ ಬಗ್ಗೆ ಟೀಕೆ ಅಷ್ಟೇ. ಬಿಜೆಪಿ ಸರ್ಕಾರ ಬಿ ಖಾತಾ ಮಾಡಿ, ಸಾಕಷ್ಟು ಅನಾನುಕೂಲ ಆಗಿದೆ. ಜನಕ್ಕೆ ಸಾಲ ಸಿಕ್ತಾ ಇಲ್ಲ. ಈಗ ಬಿಲ್ಡಿಂಗ್ ಒಡೆದು ಹಾಕಲು ಆಗುತ್ತಾ? ಜನರ ಆಸ್ತಿ ಗಟ್ಟಿ ಮಾಡುವ ಕೆಲಸ ಮಾಡ್ತಾ ಇದ್ದೇವೆ. ನಾವು ಲೂಟಿ ಮಾಡಿದ್ರೆ ನಮ್ಮ ಜೇಬಲ್ಲಿ ಇರುವುದು ಇಟ್ಟುಕೊಂಡು ಹೋಗಲಿ ಎಂದು ಕುಮಾರಸ್ವಾಮಿಗೆ ತಿರುಗೇಟು ಕೊಟ್ಟರು.

**ಕಾಂಗ್ರೆಸ್‌ಗೆ 100 ಕಚೇರಿ**

ಡಿಕೆಶಿ, ಕಾಂಗ್ರೆಸ್ ಕಚೇರಿ ಅನ್ನುವುದು ದೇವಸ್ಥಾನ ಇದ್ದ ಹಾಗೆ. ನಾವು ಜನ ಮೀಟ್ ಮಾಡಲು ಒಂದು ಕಚೇರಿ ಮಾಡಲು ಹೇಳಿದ್ದೇನೆ. 100 ಕಚೇರಿ ಮಾಡಲು ಹೇಳಿದ್ದೇನೆ . ಮಲ್ಲಿಕಾರ್ಜುನ ಖರ್ಗೆ ಬರ್ತಾರೆ ಫೌಂಡೇಶನ್ ಹಾಕ್ತಾರೆ ಎಂದರು.

### ಸಚಿವ ಸಂಪುಟದ ವಿಸ್ತರಣೆ

ಸಚಿವ ಸಂಪುಟ ವಿಸ್ತರಣೆ ವಿಚಾರ ಸಿಎಂ ಮಾತಾಡ್ತಾರೆ ಎಂದರು. ಸದ್ಯ ನಾನು ದೆಹಲಿಗೆ ಹೋಗುವುದಿಲ್ಲ. ಜಸ್ಟ್ ಒನ್ ಅವರ್ ಮೀಟಿಂಗ್ ಇತ್ತು ನಾನು ಹೋಗ್ತಿಲ್ಲ, ಇನ್ನೂ ಡಿಸೈಡ್ ಆಗಿಲ್ಲ. ನೋ ಹೈಕಮಾಂಡ್, ನೋ ಮೀಟಿಂಗ್. ಎಲೆಕ್ಷನ್ ಇದೆ, ಅವರು ಎಲೆಕ್ಷನ್‌ನಲ್ಲಿ ಬ್ಯುಸಿ ಇದ್ದಾರೆ. ನಾವು ಬೆಂಗಳೂರು ವಿಚಾರವಾಗಿ ಬ್ಯುಸಿ ಇದ್ದೇವೆ ಎಂದರು. ನಗರದಲ್ಲಿ ವೈಯಕ್ತಿಕ ಕೆಲಸಕ್ಕೆ ಫ್ಲೆಕ್ಸ್, ಬ್ಯಾನರ್ ಹಾಕಿದ್ರೆ ಕೇಸ್ ಹಾಕ್ತೀವಿ ಎಂದ ಅವರು, ಉದ್ಯಮಿಗಳ ಜೊತೆ ಅವರ ಬೆಂಗಳೂರು ಅಭಿವೃದ್ಧಿ ಕುರಿತ ಅಭಿಪ್ರಾಯಕ್ಕೆ ಮೀಟ್ ಮಾಡ್ತಿದ್ದೀನಿ. ಡಿನ್ನರ್ ಮೀಟಿಂಗ್ ಮಾಡಿದ್ದೀನಿ. ಹಲವು ವಿಚಾರಗಳ ಬಗ್ಗೆ ಸೊಲ್ಯೂಷನ್ ಕೊಟ್ಟಿದ್ದಾರೆ. ಸರ್ಕಾರ ಒಂದು ನಿರ್ಧಾರ ತಗೊಳ್ಳುವಾಗ ದೂರದೃಷ್ಟಿ ಇರುತ್ತೆ ಎಂದು ಸ್ಪಷ್ಟಪಡಿಸಿದರು.

ಅಂತರಾಳದಿಂದ... EDITORIAL

# ದುರ್ಬಳಕೆಯಾಗುತ್ತಿರುವ ಮತಾಂತರ ಕಾಯ್ದೆ ರದ್ದಾಗಲಿ

ಇತ್ತೀಚೆಗೆ ಉತ್ತರ ಪ್ರದೇಶ ಧಾರ್ಮಿಕ ಮತಾಂತರ ಕಾಯ್ದೆಯಡಿಯಲ್ಲಿ ದಾಖಲಾಗಿದ್ದ ಹಲವು ಎಫ್‌ಐಆರ್‌ಗಳನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿತ್ತು. ಈ ಕ್ರಿಮಿನಲ್ ಕಾನೂನು ಅಮಾಯಕ ನಾಗರಿಕರಿಗೆ ಕಿರುಕುಳ ನೀಡುವ ಸಾಧನವಾಗಿ ಬಳಕೆಯಾಗ ಬಾರದು ಎಂದು ಈ ಸಂದರ್ಭದಲ್ಲಿ ನ್ಯಾಯಮೂರ್ತಿಗಳು ಅಭಿಪ್ರಾಯ ಪಟ್ಟಿದ್ದಾರೆ ಕಾನೂನು ಪ್ರಕ್ರಿಯೆಯ ದೌರ್ಬಲ್ಯಗಳು, ತನಿಖಾ ಲೋಪಗಳು, ವಿಶ್ವಾಸಾರ್ಹ ಸಾಕ್ಷಾಧಾರಗಳ ಕೊರತೆಯಿಂದ ಈ ಎಫ್‌ಐಆರ್‌ಗಳು ಅಸ್ತಿತ್ವವನ್ನು ಕಳೆದುಕೊಂಡಿವೆ. ಅಂತಹ ವಿಚಾರಣೆ ಮುಂದುವರಿಸುವುದು ನ್ಯಾಯದ ಅಣಕ ಎಂದು ಸುಪ್ರೀಂಕೋರ್ಟ್ ಈ ಸಂದರ್ಭದಲ್ಲಿ ಹೇಳಿತು. ವಿಪರ್ಯಾಸವೆಂದರೆ, ದೇಶಾದ್ಯಂತ ಇಂತಹ ದುರುದ್ದೇಶಪೂರಿತ ಎಫ್‌ಐಆರ್‌ಗಳಿಂದಾಗಿ ನೂರಾರು ಅಮಾಯಕರು ಮಾಡದ ತಪ್ಪಿಗೆ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಬಹುತೇಕ ಆರೋಪಗಳು ರಾಜಕೀಯ ಪ್ರೇರಿತವಾಗಿದ್ದು ಅವುಗಳು ನ್ಯಾಯಾಲಯದಲ್ಲಿ ನಿಲ್ಲುವುದೇ ಇಲ್ಲ.

ರಾಜಕೀಯ ದುರುದ್ದೇಶಗಳನ್ನು ಸಾಧಿಸಿಕೊಳ್ಳಲು ಕೋಮು ವಿದ್ವೇಷಗಳನ್ನು ಸೃಷ್ಟಿಸುವುದಕ್ಕಾಗಿಯೇ ಇಂತಹ ಎಫ್‌ಐಆರ್‌ಗಳು ದಾಖಲಾಗುತ್ತವೆ. ಈ ದೇಶದಲ್ಲಿ ಗೋಹತ್ಯೆ ನಿಷೇಧ ಅಥವಾ ಜಾನುವಾರು ಮಾರಾಟ ನಿಷೇಧ ಮತ್ತು ಧಾರ್ಮಿಕ ಮತಾಂತರ ಕಾಯ್ದೆಗಳನ್ನು ಜಾರಿಗೊಳಿಸಿರುವುದೇ ರಾಜಕೀಯ ದುರುದ್ದೇಶಗಳಿಗಾಗಿ, ಜಾನುವಾರು ಮಾರಾಟ ನಿಷೇಧ ಕಾಯ್ದೆ ಅಥವಾ ಗೋಹತ್ಯೆ ನಿಷೇಧದಿಂದ ಗೋವುಗಳ ಸಂಖ್ಯೆ ಹೆಚ್ಚಳವಾಗದೆ ಇಳಿಕೆಯಾಗುತ್ತಿದೆ. ಈ ಕಾಯ್ದೆಯಿಂದ ಅತಿ ಹೆಚ್ಚು ಬಾಧಿತರಾಗಿರುವುದು ಗ್ರಾಮೀಣ ಪ್ರದೇಶದ ರೈತರು. ಈ ಕಾಯ್ದೆಯಿಂದಾಗಿ ರೈತರು ತಾವು ಸಾಕಿ ಬೆಳೆಸಿದ ಗೋವುಗಳನ್ನು ಯಾರಿಗೆ, ಯಾವಾಗ, ಯಾವ ದರಕ್ಕೆ ಮಾರಬೇಕು ಎನ್ನುವ ಹಕ್ಕಿನಿಂದ ವಂಚಿತರಾದರು. ಇಂದು ಗ್ರಾಮೀಣ ಹೈನೋದ್ಯಮದ ಮೇಲೆ ಭಾರೀ ದುಷ್ಪರಿಣಾಮವನ್ನು ಬೀರಿದೆ ಮಾತ್ರವಲ್ಲ ಗೋಸಾಕಣೆಯೊಂದಿಗೆ ಸಂಬಂಧವಿಲ್ಲದವರು ಇದರ ಲಾಭವನ್ನು ತಮ್ಮದಾಗಿಸಿಕೊಳ್ಳತೊಡಗಿದ್ದಾರೆ. ಗೋರಕ್ಷಕರ ವೇಷದಲ್ಲಿ ರೌಡಿಶೀಟರ್‌ಗಳು ರೈತರ ಜಾನುವಾರು ಮಾರಾಟಕ್ಕೆ ತಡೆಗೋಡೆಯಾದರು.


**ಕ್ರಿಮಿನಲ್ ಕಾನೂನು ಅಮಾಯಕ ವ್ಯಕ್ತಿಗಳ ಕಿರುಕುಳಕ್ಕೆ ಉಪಯೋಗವಾಗಬಾರದು. ನಂಬಲಾಗದ ಸಾಕ್ಷಾಧಾರಗಳ ಆಧಾರದ ಮೇಲೆ ಮೊಕದ್ದಮೆ ಹೂಡುವುದು ಕಾನೂನಿನ ದುರುಪಯೋಗವಾಗಿದೆ. ಒಂದೇ ಘಟನೆಯ ಬಗ್ಗೆ ಪದೇ ಪದೇ ಎಫ್‌ಐಆರ್‌ಗಳನ್ನು ಮಾಡುವುದು ತನಿಖಾ ಪ್ರಕ್ರಿಯೆಯ ನೈತಿಕತೆಯನ್ನು ಹಾಳು ಮಾಡುತ್ತದೆ. ಆರೋಪಿಗಳಿಗೆ ಅನಗತ್ಯ ಕಿರುಕುಳಗಳನ್ನು ನೀಡುವ ದುರುದ್ದೇಶವನ್ನು ಇದು ಹೊಂದಿದೆ ಎಂದು ಕಳವಳ ವ್ಯಕ್ತಪಡಿಸಿತು. ಸುಮಾರು ಅರು ಎಫ್‌ಐಆರ್‌ಗಳನ್ನು ಈ ಸಂದರ್ಭದಲ್ಲಿ ಅದು ರದ್ದುಗೊಳಿಸಿದೆ.**

ಕಾನೂನಿನ ಅನುಮತಿಗಿಂತಲೂ ಈ ನಕಲಿ ಗೋರಕ್ಷಕರ ಅನುಮತಿ ರೈತರಿಗೆ ಅತ್ಯಗತ್ಯವಾಯಿತು. ಈ ನಕಲಿ ಗೋರಕ್ಷಕರ ಜೊತೆಗೆ ಕಾನೂನು ಕೂಡ ಜಾನುವಾರು ವ್ಯಾಪಾರಿಗಳು ರೈತರ ಪಾಲಿಗೆ ಕುಣಿಕೆಯಾಯಿತು. ಅನುಪಯುಕ್ತ ಗೋವುಗಳು ರೈತರ ಪಾಲಿಗೆ ಭಾರವಾಗಿದ್ದು ಅದನ್ನು ಹಟ್ಟಿಯಲ್ಲಿಟ್ಟುಕೊಳ್ಳಲೂ ಆಗದೆ, ಮಾರಾಟ ಮಾಡಲೂ ಆಗದೆ ಅತಂತ್ರ ಸ್ಥಿತಿಯಲ್ಲಿದ್ದಾರೆ. ಹೈನೋದ್ಯಮ ನಷ್ಟದಲ್ಲಿದೆ. ಒಬ್ಬ ಯಾವ ಧರ್ಮವನ್ನು ಆಚರಿಸಬೇಕು, ಆಚರಿಸಬಾರದು ಎನ್ನುವುದು ಆತನ ಮೂಲಭೂತ ಹಕ್ಕಿನ ಭಾಗವಾಗಿದೆ. ನಂಬಿಕೆಯ ಪ್ರಶ್ನೆ ಇದಾಗಿರುವುದರಿಂದ, ಅದನ್ನು ಇನ್ನೊಬ್ಬ ನಿಯಂತ್ರಿಸುವುದು ಸಂವಿಧಾನದ ಉಲ್ಲಂಘನೆ. ಹಿಂದಿನ ಕಾಲದಂತೆ ಕತ್ತಿ ಹಿಡಿದೋ, ದೊಣ್ಣೆ ಹಿಡಿದೋ ಬಲವಂತವಾಗಿ ಮತಾಂತರಿಸುವ ವಾತಾವರಣ ಈಗ ಇಲ್ಲ.

ಇದೇ ಸಂದರ್ಭದಲ್ಲಿ ಆಮಿಷ ಒಡ್ಡಿ ಮತಾಂತರ ಮಾಡಲಾಗುತ್ತಿದೆ ಎನ್ನುವ ಆರೋಪಗಳಿವೆ. ಇಷ್ಟಕ್ಕೂ ಯಾವುದು ಅಮಿಷಾ ಯಾವುದು ಅಮಿಷ ಅಲ್ಲ ಆಮಿಷ ಯಾವ ರೂಪದ್ದು ಎನ್ನುವುದನ್ನು ನಿರ್ಧರಿಸುವುದೂ ಸುಲಭವಿಲ್ಲ. ಹಾಗೆಯೇ ವಿವಿಧ ರಾಜ್ಯಗಳ ರಾಜಕೀಯ ಧೋರಣೆಗಳಿಗೆ ತಕ್ಕಂತೆ ಈ ಮತಾಂತರ ಕಾಯ್ದೆಗಳಲ್ಲಿ ಬದಲಾವಣೆಗಳಿವೆ. ಮುಖ್ಯವಾಗಿ ಈ ದೂರನ್ನು ಯಾರು ನೀಡಬೇಕು? ಸಂತ್ರಸ್ತನ ಜೊತೆಗೆ ಯಾವುದೇ ಕೌಟುಂಬಿಕ ಸಂಬಂಧಗಳನ್ನು ಹೊಂದಿಲ್ಲದ ಮೂರನೇ ವ್ಯಕ್ತಿ ನೀಡಿದ ದೂರನ್ನು ಪರಿಗಣಿಸುವುದು ಎಷ್ಟು ಸರಿ? ಇದು ದುರುಪಯೋಗವಾಗುವ ಸಾಧ್ಯತೆಗಳಿಲ್ಲವೆ ಎನ್ನುವ ಪ್ರಶ್ನೆಗಳು ಈಗಾಗಲೇ ಬಹಳಷ್ಟು ಚರ್ಚೆಗೆ ಒಳಗಾಗಿವೆ. ಈ ದೇಶದಲ್ಲಿ ಬಲವಂತದ ಮತಾಂತರಕ್ಕಿಂತ ದೊಡ್ಡ ಸಮಸ್ಯೆ ಜಾತಿ ಕಾರಣಕ್ಕಾಗಿ ಅನುಭವಿಸುತ್ತಿರುವ ದೌರ್ಜನ್ಯಗಳು, ತಾವು ನಂಬಿದ ಧರ್ಮದಲ್ಲಿ ನೆಮ್ಮದಿಯಿಂದ, ಸ್ವಾಭಿಮಾನದಿಂದ ಬದುಕುವ ವಾತಾವರಣ ಇಲ್ಲದೇ ಇರುವುದು ಮತಾಂತರಕ್ಕೆ ಮುಖ್ಯ ಕಾರಣವಾಗಿದೆ. ಇಂದಿಗೂ ಜಾತಿ ಶೋಷಣೆಯಿಂದ ಬಿಡುಗಡೆಗೊಳ್ಳುವ ಏಕೈಕ ಉದ್ದೇಶದಿಂದಲೇ ದೊಡ್ಡ ಸಂಖ್ಯೆಯ ದಲಿತರು ಬೌದ್ಧ ಧರ್ಮಕ್ಕೆ ಪ್ರತೀ ವರ್ಷ ಮತಾಂತರವಾಗುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಕೆಲವರು ಇತರ ಧರ್ಮಗಳನ್ನೂ ಆಯ್ಕೆ ಮಾಡಿಕೊಳ್ಳುತ್ತಾರೆ. ಮತಾಂತರವನ್ನು ತಡೆಯಬೇಕಾದರೆ ಮೊತ್ತ ಮೊದಲಾಗಿ ತಮ್ಮ ಧರ್ಮದೊಳಗಿರುವ ಜಾತಿ ವ್ಯವಸ್ಥೆಯನ್ನು ಶೋಷಣೆಯನ್ನು ನಿವಾರಿಸುವುದಕ್ಕೆ ಆಯಾ ಧರ್ಮೀಯರು ಕ್ರಮ ತೆಗೆದುಕೊಳ್ಳಬೇಕು. ಈ ದೌರ್ಜನ್ಯಗಳನ್ನು ತಡೆಯಲು ಕಾನೂನನ್ನು ಕಠಿಣಗೊಳಿಸಿದಾಕ್ಷಣ ಮತಾಂತರಗಳು ತನ್ನಷ್ಟಕ್ಕೆ ಕಡಿಮೆಯಾಗುತ್ತವೆ. ವಿಪರ್ಯಾಸವೆಂದರೆ, ಅದನ್ನು ಮಾಡುವ ಬದಲು ಮತಾಂತರವನ್ನು ತಡೆಯಲು ಸರಕಾರ ಕಠಿಣ ಕಾಯ್ದೆಯನ್ನು ಜಾರಿಗೊಳಿಸಿತು. ಈ ಮೂಲಕ ಜಾತಿ ಶೋಷಣೆಯನ್ನು ಪರೋಕ್ಷವಾಗಿ ಕಾನೂನು ಬದ್ಧಗೊಳಿಸುವ ಪ್ರಯತ್ನ ನಡೆದಿದೆ. ಎಷ್ಟೇ ದೌರ್ಜನ್ಯಗಳು, ಅಸಮಾನತೆಗಳು ಇದ್ದರೂ ನೀವು ಅದನ್ನು ಅನುಭವಿಸುತ್ತಾ ಇಲ್ಲೇ ಉಳಿಯಬೇಕು ಎಂದು ಪರೋಕ್ಷವಾಗಿ ಅದೇಶ ನೀಡಿದಂತಾಗಿದೆ. ಈ ಕಾರಣಕ್ಕಾಗಿಯೇ ಶೋಷಿತರ ಪಾಲಿಗೆ ಮತಾಂತರ ನಿಷೇಧ ಕಾಯ್ದೆ ಅತ್ಯಂತ ಅಮಾನವೀಯವಾದುದು ಮತ್ತು ಸಂವಿಧಾನ ವಿರೋಧಿಯಾದುದಾಗಿದೆ. ಒಬ್ಬ ಮತಾಂತರಗೊಳ್ಳಬೇಕಾದರೆ ಜಿಲ್ಲಾಡಳಿತದ ಪೂರ್ವಾನುಮತಿ ಪಡೆದುಕೊಳ್ಳಬೇಕು ಎನ್ನುವುದು ಮತಾಂತರಗೊಳ್ಳುವ ವ್ಯಕ್ತಿಯ ಖಾಸಗಿತನದ ಹಕ್ಕಿನ ಸ್ಪಷ್ಟ ಉಲ್ಲಂಘನೆಯಾಗಿದೆ.

# ಪುರುಷರಲ್ಲಿ ಪ್ರೋಟೀನ್ ಕೊರತೆಯಾದ್ರೆ ಯಾವೆಲ್ಲಾ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ

ಪ್ರೋಟೀನ್ ಪ್ರತಿಯೊಬ್ಬರ ಆರೋಗ್ಯಕ್ಕೆ ಮುಖ್ಯ. ಅದರಲ್ಲೂ ಪುರುಷರಲ್ಲಿ ಪ್ರೋಟೀನ್ ಕೊರತೆಯಾದರೆ ಯಾವೆಲ್ಲಾ ಸಮಸ್ಯೆಗಳು ಕಾಣಿಸಿಕೊಳ್ಳಲಾರಂಭಿಸುತ್ತದೆ ಎನ್ನುವುದನ್ನು ನಾವಿಲ್ಲಿ ತಿಳಿಯೋಣ. ನಮ್ಮ ದೇಹದಲ್ಲಿ ಪ್ರೋಟೀನ್‌ನ ಪಾತ್ರ ಪ್ರಮುಖವಾಗಿದೆ. ಸ್ನಾಯುಗಳು, ಮೂಳೆಗಳು, ಚರ್ಮ, ಕೂದಲು, ಕಿಣ್ವಗಳು, ಹಾರ್ಮೋನುಗಳ ರಚನೆಯಲ್ಲಿ ಇದು ನಿರ್ಣಾಯಕ ಪಾತ್ರ ವಹಿಸುತ್ತದೆ. ಆದ್ದರಿಂದ, ದೇಹದ ದೈನಂದಿನ ಪ್ರೋಟೀನ್ ಅಗತ್ಯಗಳನ್ನು ಪೂರೈಸುವುದು ಅತ್ಯಗತ್ಯ. ನಾವು ಸೇವಿಸುವ ಆಹಾರದಲ್ಲಿ ಪ್ರೋಟೀನ್ ಕೊರತೆಯಾದರೆ ಅದು ದೇಹದಲ್ಲಿ ಪ್ರೋಟೀನ್ ಕೊರತೆಗೆ ಕಾರಣವಾಗಬಹುದು.



**ಸ್ನಾಯು ದೌರ್ಬಲ್ಯ:** ಇದು ಪ್ರೋಟೀನ್ ಕೊರತೆಯ ಅತ್ಯಂತ ಸ್ಪಷ್ಟ ಮತ್ತು ಸಾಮಾನ್ಯ ಲಕ್ಷಣವಾಗಿದೆ. ದೇಹವು ಸಾಕಷ್ಟು ಪ್ರೋಟೀನ್ ಪಡೆಯದಿದ್ದಾಗ, ಅದು ಶಕ್ತಿಗಾಗಿ ಸ್ನಾಯು ಅಂಗಾಂಶವನ್ನು ಒಡೆಯಲು ಪ್ರಾರಂಭಿಸುತ್ತದೆ, ಈ ಪ್ರಕ್ರಿಯೆಯನ್ನು 'ಸ್ನಾಯು ಕ್ಯಾಟಬಾಲಿಸಮ್' ಎಂದು ಕರೆಯಲಾಗುತ್ತದೆ. ಮೆಟ್ಟಿಲುಗಳನ್ನು ಹತ್ತುವುದು, ವಸ್ತುಗಳನ್ನು ಎತ್ತುವುದು ಅಥವಾ ದೀರ್ಘ ದೂರ ನಡೆಯುವುದು ಮುಂತಾದ ದೈನಂದಿನ ಕೆಲಸಗಳು ಸಹ ಕಷ್ಟಕರವಾಗುತ್ತವೆ.

**ನಿರಂತರ ಹಸಿವು:** ಪ್ರೋಟೀನ್ ಹಸಿವಿನ ಹಾರ್ಮೋನ್ ಗ್ರೆಲಿನ್ ಅನ್ನು ನಿಯಂತ್ರಿಸುತ್ತದೆ, ಇದು ನಿಮ್ಮನ್ನು ಹೊಟ್ಟೆಯನ್ನು ಹೆಚ್ಚು ಸಮಯದವರೆಗೆ ತುಂಬಿರುವಂತೆ ಮಾಡುತ್ತದೆ. ಪ್ರೋಟೀನ್ ಕೊರತೆಯಿರುವಾಗ ನೀವು ಆಗಾಗ ತಿನ್ನುವ ಹಂಬಲವನ್ನು ಅನುಭವಿಸುತ್ತೀರಿ.

**ಕಾರ್ಬೋಹೈಡ್ರೇಟ್ ಸಿಹಿ ಹಂಬಲಗಳು: ದೇಹವು ಶಕ್ತಿಯ ಮೂಲಗಳನ್ನು ತ್ವರಿತವಾಗಿ ಹುಡುಕುತ್ತದೆ, ಇದು ನಿಮ್ಮನ್ನು ಸಂಸ್ಕರಿಸಿದ ಕಾರ್ಬೋಹೈಡ್ರೇಟ್‌ಗಳು, ಚಿಪ್ಸ್, ಬಿಸ್ಕತ್ತುಗಳು, ಚಾಕೊಲೇಟ್ ಮತ್ತು ಸಕ್ಕರೆ ಪಾನೀಯಗಳನ್ನು ಹಂಬಲಿಸಲು ಕಾರಣವಾಗುತ್ತದೆ. ಈ ಹಂಬಲಗಳು ನಿಮ್ಮ ಆಹಾರವನ್ನು ಮತ್ತಷ್ಟು ಅಸಮತೋಲನಗೊಳಿಸುತ್ತದೆ, ಇದು ಪ್ರೋಟೀನ್ ಕೊರತೆಯನ್ನು ಇನ್ನಷ್ಟು ಹದಗೆಡಿಸುತ್ತದೆ.**



**ಸ್ನಾಯು ಕುಗ್ಗುವಿಕೆ:** ತೋಳುಗಳು, ಎದೆ ಮತ್ತು ತೊಡೆಗಳಲ್ಲಿನ ಸ್ನಾಯುಗಳು ಸಡಿಲವಾಗಿ ಮತ್ತು ದುರ್ಬಲವಾಗಿ ಕಾಣಿಸಬಹುದು. ಜಿಮ್‌ನಲ್ಲಿ ತೂಕವನ್ನು ಎತ್ತುವ ನಿಮ್ಮ ಸಾಮರ್ಥ್ಯ ಕಡಿಮೆಯಾಗುತ್ತದೆ. ನೀವು ವ್ಯಾಯಾಮ ಮಾಡುವುದನ್ನು ಮುಂದುವರಿಸಿದರೂ, ಪ್ರೋಟೀನ್ ಕೊರತೆಯು ಸ್ನಾಯುಗಳ ದುರಸ್ತಿಗೆ ಅಡ್ಡಿಯಾಗುತ್ತದೆ, ಇದರ ಪರಿಣಾಮವಾಗಿ ವ್ಯಾಯಾಮದ ಪ್ರಯೋಜನಗಳು ನಷ್ಟವಾಗುತ್ತವೆ.

**ಕೂದಲು ಉದುರುವಿಕೆ, ಚರ್ಮ ಮತ್ತು ಉಗುರು ಸಮಸ್ಯೆಗಳು:** ಕೂದಲು, ಚರ್ಮ ಮತ್ತು ಉಗುರುಗಳಿಗೆ ಕಾರಣವಾಗಿರುವ ಕೆರಾಟಿನ್ ಮತ್ತು ಕಾಲಜನ್ ರಚನೆಗೆ ಪ್ರೋಟೀನ್ ಅತ್ಯಗತ್ಯ. ಪ್ರೋಟೀನ್ ಕೊರತೆಯು ಇದಕ್ಕೆ ಕಾರಣವಾಗಬಹುದು: ಕೂದಲು ಉದುರುವುದು, ತೆಳುವಾಗುವುದು ಮತ್ತು ಕೂದಲು ದುರ್ಬಲಗೊಳ್ಳಲು ಕಾರಣವಾಗಬಲ್ಲದು.

ಒಣ ಮತ್ತು ನಿರ್ಜೀವ ಚರ್ಮ – ಚರ್ಮವು ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಳ್ಳುತ್ತದೆ, ಶುಷ್ಕತೆ, ತುರಿಕೆ ಮತ್ತು ದದ್ದುಗಳಿಗೆ ಕಾರಣವಾಗುತ್ತದೆ.

ದುರ್ಬಲ ಉಗುರುಗಳು – ಉಗುರುಗಳು ಸುಲಭವಾಗಿ ಮುರಿಯುತ್ತವೆ ಮತ್ತು ಬಿಳಿ ಚುಕ್ಕೆಗಳು ಅಥವಾ ಗೆರೆಗಳು ಕಾಣಿಸಿಕೊಳ್ಳಬಹುದು.

**ಆಯಾಸ, ಆಲಸ್ಯ, ಕಡಿಮೆಯಾದ ಗಮನ:** ಪ್ರೋಟೀನ್ ಸ್ನಾಯುಗಳಿಗೆ ಮಾತ್ರವಲ್ಲದೆ ಮೆದುಳಿಗೆ ಸಹ ಅತ್ಯಗತ್ಯ. ಅನೇಕ ನರಪ್ರೇಕ್ಷಕಗಳು ಉದಾಹರಣೆಗೆ ಡೋಪಮೈನ್ ಮತ್ತು ಸಿರೊಟೋನಿನ್ ಪ್ರೋಟೀನ್‌ನಿಂದ ಪಡೆದ ಅಮೈನೋ ಆಮ್ಲಗಳಿಂದ ಮಾಡಲ್ಪಟ್ಟಿದೆ. ಪ್ರೋಟೀನ್ ಕೊರತೆಯ ಕಾರಣಗಳು: ದಿನವಿಡೀ ಆಲಸ್ಯ, ಉತ್ತಮ ರಾತ್ರಿಯ ನಿದ್ರೆಯ ನಂತರವೂ ದಣಿದ ಭಾವನೆ. ಕೆಲಸ ಅಥವಾ ಅಧ್ಯಯನದಲ್ಲಿ ಆಸಕ್ತಿಯ ನಷ್ಟ ಮತ್ತು ಗಮನದ ಕೊರತೆ. ನೀವು ಕಿರಿಕಿರಿ ಅಥವಾ ಖಿನ್ನತೆಗೆ ಒಳಗಾಗಬಹುದು.

# ಬೆಳಗ್ಗಿನಿಂದ ಸಂಜೆವರೆಗೆ ಲಿಪ್‌ಸ್ಟಿಕ್ ಹಾಗೇ ತುಟಿ ಮೇಲೆ ಇರಬೇಕಂದ್ರೆ ಇಲ್ಲಿದೆ ಟಿಪ್ಸ್

ಲಿಪ್‌ಸ್ಟಿಕ್ ಹಚ್ಚಿಕೊಳ್ಳೊದ್ರಿಂದ ಮುಖದ ಅಂದ ಹೆಚ್ಚುತ್ತೆ ಅನ್ನೋದ್ರಲ್ಲಿ ಎರಡು ಮಾತಿಲ್ಲ. ನಿಮ್ಮ ಲಿಪ್‌ಸ್ಟಿಕ್ ತುಟಿಯ ಮೇಲೆ ಹೆಚ್ಚುಕಾಲ ಉಳಿಯಬೇಕಾದರೆ ಇಲ್ಲಿದೆ ಕೆಲವೊಂದು ಟಿಪ್ಸ್. ನೀವೂ ಇದನ್ನು ಟ್ರೈ ಮಾಡಿ ನೋಡಿ. ಈಗಿನ ಕಾಲದಲ್ಲಂತೂ ಪ್ರತಿ ಮಹಿಳೆಯರು ಲಿಪ್‌ಸ್ಟಿಕ್ ಹಚ್ಚಿಕೊಳ್ಳುತ್ತಾರೆ. ಲಿಪ್‌ಸ್ಟಿಕ್ ಮುಖದ ಅಂದವನ್ನು ಹೆಚ್ಚಿಸುತ್ತದೆಯಾದರೂ ಅದರಲ್ಲಿರುವ ರಾಸಾಯನಿಕಗಳು ಚರ್ಮಕ್ಕೆ ಒಳ್ಳೆಯದಲ್ಲ. ಆದರೂ ಬಹಳಷ್ಟು ಮಂದಿ ಇದನ್ನು ಬಳಸುತ್ತಾರೆ. ಪ್ರತಿನಿತ್ಯ ಆಫೀಸ್‌ಗೆ ಹೋಗುವವರು ಲಿಪ್‌ಸ್ಟಿಕ್ ಬಳಸದೇ ಇರುವವರು ಬಹಳ ಕಡಿಮೆ. ನೀವು ಗಮನಿಸಿರಬಹುದು ಕೆಲವರ ಲಿಪ್‌ಸ್ಟಿಕ್ ಬೆಳಗ್ಗೆ ಹಚ್ಚಿದಾಗ ಹೇಗಿರುತ್ತೋ ಸಂಜೆವರೆಗೂ ಹಾಗೆಯೇ ಇರುತ್ತದೆ. ಇದಕ್ಕೆ ಕಾರಣವೇನು ಗೊತ್ತಾ?


### ಹಚ್ಚುವ ವಿಧಾನ

**ಲಿಕ್ವಿಡ್ ಲಿಪ್‌ಸ್ಟಿಕ್‌ಗಳು ಅಥವಾ ಸಾಂಪ್ರದಾಯಿಕ ಲಾಂಗ್ ವೇರ್ ಬುಲೆಟ್ ಲಿಪ್‌ಸ್ಟಿಕ್‌ಗಳು ಆಗಾಗ್ಗೆ ಟಚ್-ಅಪ್‌ಗಳಿಲ್ಲದೆ ಬಹಳ ಗಂಟೆಗಳ ಕಾಲ ಉಳಿಯುತ್ತದೆ. ಸರಿಯಾದ ಹಚ್ಚುವ ಕಡೆ ಗಮನಹರಿಸಬೇಕು. ತುಟಿಗಳನ್ನು ಎಫ್ಫೋಲಿಯೇಟ್ ಮಾಡುವುದು, ಲಿಪ್ ಲೈನರ್ ಅನ್ನು ಬಳಸುವುದು ಮತ್ತು ತೆಳುವಾದ ಪದರಗಳ ನಡುವೆ ಬ್ಲಾಟ್ ಮಾಡುವುದು ಲಿಪ್‌ಸ್ಟಿಕ್ ದೀರ್ಘಾವಧಿವರೆಗೆ ಉಳಿಯುವಂತೆ ಮಾಡುತ್ತದೆ.**

**ಲಿಪ್‌ಸ್ಟಿಕ್ ದೀರ್ಘಕಾಲ ಉಳಿಯುವುದು ಹೇಗೆ:** ಅನೇಕ ಮಹಿಳೆಯರು ಬೆಳಗ್ಗೆ ಹಚ್ಚಿಕೊಂಡಿರುವ ಲಿಪ್‌ಸ್ಟಿಕ್ ಸಂಜೆ ಹೊತ್ತಿಗೆ ಮಾಸಿರುತ್ತದೆ. ಆದರೆ ಇನ್ನೂ ಕೆಲವರ ಲಿಪ್‌ಸ್ಟಿಕ್ ಹಾಗೆಯೇ ಇರುತ್ತದೆ. ಹಾಗಾದ್ರೆ ಅವರು ಒಳ್ಳೆ ಬ್ರಾಂಡ್‌ನ ದುಬಾರಿ ಲಿಪ್‌ಸ್ಟಿಕ್ ಬಳಸುತ್ತಾರೇನೋ ಅನಿಸುವುದು ಸಹಜ. ಆದರೆ ಅದೆಲ್ಲವೂ ನಾವು ಆಯ್ಕೆ ಮಾಡಿಕೊಳ್ಳುವ ಲಿಪ್‌ಸ್ಟಿಕ್ ಹಾಗೂ ಅದನ್ನು ಯಾವ ರೀತಿ ಹಚ್ಚುತ್ತೇವೆ, ಮೈಂಟೈನ್ ಮಾಡುತ್ತೇವೆ ಎನ್ನುವುದರ ಮೇಲೆ ನಿಂತಿದೆ.

**ಫಾರ್ಮುಲಾ ಪ್ರಕಾರಕ್ಕೆ ಆದ್ಯತೆ ನೀಡಿ:** ಲಿಪ್‌ಸ್ಟಿಕ್‌ನ ದೀರ್ಘಾಯುಷ್ಯದ ದೊಡ್ಡ ಸೂಚಕವೆಂದರೆ ಅದರ ಸೂತ್ರೀಕರಣ. ಲಿಕ್ವಿಡ್ ಲಿಪ್‌ಸ್ಟಿಕ್‌ಗಳು ದೀರ್ಘಕಾಲ ಬಾಳಿಕೆ ಬರುವವು, ಸಾಮಾನ್ಯವಾಗಿ ದೀರ್ಘಕಾಲದವರೆಗೆ ಅಂಟಿಕೊಳ್ಳುವ ಮ್ಯಾಟ್ ಫಿನಿಶ್‌ಗೆ ಒಣಗಬಹುದು.

ಆದರೆ ಬುಲೆಟ್ ಅಥವಾ ಸ್ಟಿಕ್‌ಗಳು ನಿಮಗೆ ಮ್ಯಾಟ್ ಫಿನಿಶ್ ನೀಡುತ್ತದೆ ಆದರೆ ಕಡಿಮೆ ಉಳಿಯುವ ಶಕ್ತಿಯನ್ನು ನೀಡುತ್ತದೆ.



**ಟ್ರಾನ್ಸ್‌ಫರ್ ಪ್ರೂಫ್ ಪರಿಶೀಲಿಸಿ:** ನಿಜವಾಗಿಯೂ ದೀರ್ಘಕಾಲ ಬಾಳಿಕೆ ಬರುವ ಲಿಪ್‌ಸ್ಟಿಕ್ ಸ್ಪ್ರೆಡ್ ಆಗೋದಿಲ್ಲ. ಅವುಗಳನ್ನು ಆ ರೀತಿ ತಯಾರಿಸಲಾಗಿರುತ್ತದೆ. ಅವು ನೀವು ಕಪ್‌ನಲ್ಲಿ ಕಾಫಿ ಕುಡಿದರೂ ಕಪ್‌ಗೆ ಅಂಟಿಕೊಳ್ಳೋದಿಲ್ಲ. ಯಾವುದೇ ಬಟ್ಟೆಗೂ ಅಂಟಿಕೊಳ್ಳೋದಿಲ್ಲ. ನಿಮ್ಮ ತುಟಿಯಲ್ಲಿ ಹಾಗೆಯೇ ಉಳಿದುಕೊಳ್ಳುತ್ತದೆ.

**ಅದರಲ್ಲಿರುವ ಪದಾರ್ಥಗಳನ್ನು ನೋಡಿ:** ಹೆಚ್ಚಿನ ವರ್ಣದ್ರವ್ಯದ ಪ್ರತಿಫಲವನ್ನು ಹೊಂದಿರುವ ಲಿಪ್‌ಸ್ಟಿಕ್‌ಗಳು ತುಟಿಗಳಿಗೆ ಉತ್ತಮವಾಗಿ ಅಂಟಿಕೊಳ್ಳುತ್ತವೆ ಮತ್ತು ಪದೇ ಪದೇ ಹಚ್ಚಬೇಕೆಂದೇನಿಲ್ಲ. ಅಲ್ಲದೆ ಉತ್ತಮ ಸ್ಯಾಚುರೇಟೆಡ್ ಬಣ್ಣವನ್ನು ನೀಡುತ್ತವೆ. ಸಾಂಪ್ರದಾಯಿಕವಾಗಿ ದೀರ್ಘಕಾಲ ಬಾಳಿಕೆ ಬರುವ ಲಿಪ್‌ಸ್ಟಿಕ್‌ಗಳು ಒಣಗುತ್ತಿರಬಹುದು. ಆಧುನಿಕ ಸೂತ್ರೀಕರಣಗಳು ದೀರ್ಘಾಯುಷ್ಯದ ಜೊತೆಗೆ ಆರಾಮವನ್ನು ನೀಡಲು ಹೈಲುರಾನಿಕ್ ಆಮ್ಲ, ವಿಟಮಿನ್ ಇ ಯಂತಹ ಪೌಷ್ಟಿಕ ಪದಾರ್ಥಗಳನ್ನು ಒಳಗೊಂಡಿರುತ್ತವೆ.



# 10 ನಿಮಿಷದಲ್ಲಿ ಈ ಐಸ್ ಕ್ರೀಮ್ ಮಾಡಿ! 3 ಪದಾರ್ಥ ಸಾಕು

ಗ್ಯಾಸ್ ಆನ್ ಮಾಡುವ ಕೆಲಸವಿಲ್ಲ ಸೀತಾಫಲದಿಂದ ಈ ಡಿಶ್ ಮಾಡಿ, ಎಲ್ಲರೂ ಫಿದಾ ಆಗ್ತಾರೆ. ಈ ಸಿಹಿ ತಿಂಡಿ ಮಕ್ಕಳಿಂದ ಹಿಡಿದು ದೊಡ್ಡವರಿಗೂ ಇಷ್ಟ. ಹೌದು, ಸೀತಾಫಲ ಹಣ್ಣು ಕೇವಲ ರುಚಿಯಲ್ಲಿ ಮಾತ್ರವಲ್ಲದೆ, ಆರೋಗ್ಯ ಪ್ರಯೋಜನಗಳ ವಿಷಯದಲ್ಲೂ ಮುಂದಿದೆ. ವಿಟಮಿನ್‌ಗಳು, ಖನಿಜಗಳು ಮತ್ತು ಪ್ರಬಲ ಉತ್ಕರ್ಷಣ ನಿರೋಧಕಗಳಿಂದ ತುಂಬಿರುವ ಸೀತಾಫಲ, ಕೆಲವೊಮ್ಮೆ ಮಕ್ಕಳಿಗೆ ಇಷ್ಟವಾಗುವುದಿಲ್ಲ. ಇಂತಹ ಮಕ್ಕಳು ಸಹ ಇಷ್ಟಪಟ್ಟು ಸವಿಯುವಂತೆ ಸೀತಾಫಲ ಐಸ್ ಕ್ರೀಮ್ ತಯಾರಿಸಬಹುದು. ಸೀತಾಫಲದ ನೈಸರ್ಗಿಕ ಸಿಹಿ ಮತ್ತು ವಿಶಿಷ್ಟ ಪರಿಮಳ ಐಸ್ ಕ್ರೀಮ್‌ಗೆ ಹೊಸ ರುಚಿ ನೀಡುತ್ತದೆ. ಈ ವಿಧಾನದ ವಿಶೇಷತೆ ಏನೆಂದರೆ, ಇದಕ್ಕೆ ಗ್ಯಾಸ್ ಅಥವಾ ಒಲೆಯ ಬಳಕೆಯೇ ಇರುವುದಿಲ್ಲ. ಈ ಐಸ್ ಕ್ರೀಮ್ ಸುಲಭವಾಗಿ, ಆರೋಗ್ಯಕರವಾಗಿ ತಯಾರಿಸಬಹುದು. ಬನ್ನಿ, ಮನೆಯಲ್ಲೇ ಸರಳ ವಿಧಾನದ ಮೂಲಕ ಈ ಸೀತಾಫಲ ಐಸ್ ಕ್ರೀಮ್ ತಯಾರಿಸುವುದು ಹೇಗೆ ಎಂದು ತಿಳಿಯೋಣ.

### ಸೀತಾಫಲ ಐಸ್ ಕ್ರೀಮ್ ತಯಾರಿಸಲು ಬೇಕಾದ ಸಾಮಗ್ರಿಗಳು

- ಸೀತಾಫಲ ಹಣ್ಣುಗಳು
- ಸಕ್ಕರೆ ಪುಡಿ
- ಹಾಲಿನ ಕೆನೆ ಅಥವಾ ಫ್ರೆಶ್ ಕ್ರೀಮ್
- ವೆನಿಲ್ಲಾ ಎಸೆನ್ಸ್
- ಹಾಲಿನ ಪುಡಿ

**ಸೀತಾಫಲ ಐಸ್ ಕ್ರೀಮ್ ತಯಾರಿಸುವ ವಿಧಾನ**

ಮನೆಯಲ್ಲಿಯೇ ಸುಲಭವಾಗಿ ಸೀತಾಫಲ ಐಸ್‌ಕ್ರೀಮ್ ತಯಾರಿಸುವ ವಿಧಾನ ಇಲ್ಲಿದೆ. ಯಾವುದೇ ಅಡುಗೆ ಮಾಡುವ ಅಗತ್ಯವಿಲ್ಲದೆ, ಕೇವಲ ಕೆಲವೇ ಹಂತಗಳಲ್ಲಿ ರುಚಿಕರವಾದ ಐಸ್‌ಕ್ರೀಮ್ ಸಿದ್ಧಪಡಿಸಬಹುದು.

ಮೊದಲಿಗೆ, ಚೆನ್ನಾಗಿ ಹಣ್ಣಾದ ನಾಲ್ಕು ಸೀತಾಫಲಗಳನ್ನು ತೆಗೆದುಕೊಳ್ಳಿ. ಅವುಗಳನ್ನು ಅರ್ಧಕ್ಕೆ ಕತ್ತರಿಸಿ ತಿರುಳನ್ನು ಬೇರ್ಪಡಿಸಿಕೊಳ್ಳಿ. ಈ ತಿರುಳಿನಿಂದ ಬೀಜಗಳನ್ನು ಕೈಯಿಂದ ಅಥವಾ ದೊಡ್ಡ ರಂಧ್ರಗಳಿರುವ ಜರಡಿಯ ಮೂಲಕ ತೆಗೆಯಬೇಕು.

ಸುಮಾರು ಅರ್ಧ ಕಪ್ ಸೀತಾಫಲ ತಿರುಳನ್ನು ಐಸ್‌ಕ್ರೀಮ್‌ನ ಕೊನೆಯ ಪದರಕ್ಕಾಗಿ ಪ್ರತ್ಯೇಕವಾಗಿ ಇಟ್ಟುಕೊಳ್ಳಿ. ನಂತರ, ಒಂದು ಮಿಕ್ಸರ್ ಜಾರ್‌ಗೆ ಒಂದು ಕಪ್ ಸೀತಾಫಲ ತಿರುಳು, 1/3 ಕಪ್ ಸಕ್ಕರೆ ಪುಡಿ, 1/3 ಕಪ್ ಹಾಲಿನ ಪುಡಿ, ಒಂದು ಕಪ್ ಹಾಲಿನ ಕೆನೆ (ಅಥವಾ ಫ್ರೆಶ್ ಕ್ರೀಮ್) ಮತ್ತು ಒಂದು ಟೀಚಮಚ ವೆನಿಲ್ಲಾ ಎಸೆನ್ಸ್ ಸೇರಿಸಿ. ಈ ಎಲ್ಲಾ ಪದಾರ್ಥಗಳನ್ನು ನುಣ್ಣಗೆ, ನೊರೆ ಬರುವವರೆಗೆ ಚೆನ್ನಾಗಿ ಬ್ಲೆಂಡ್ ಮಾಡಬೇಕು.

– ಬ್ಲೆಂಡ್ ಮಾಡಿದ ಮಿಶ್ರಣವನ್ನು ಒಂದು ಪಾತ್ರೆ ಅಥವಾ ಡಬ್ಬದಲ್ಲಿ ಹಾಕಿ, ಮುಚ್ಚಳದಿಂದ ಮುಚ್ಚಿ. ಇದನ್ನು ಎರಡು ರಿಂದ ಮೂರು ಗಂಟೆಗಳ ಕಾಲ ಫ್ರಿಜ್‌ನ ಡಿಪ್ ಫ್ರೀಜರ್‌ನಲ್ಲಿಡಿ. ಇದು ಐಸ್‌ಕ್ರೀಮ್ ಮಿಶ್ರಣ ಗಟ್ಟಿಯಾಗಲು ಸಹಾಯ ಮಾಡುತ್ತದೆ.

ಮೂರು ಗಂಟೆಗಳ ನಂತರ, ಫ್ರಿಜ್‌ನಿಂದ ಮಿಶ್ರಣವನ್ನು ಹೊರತೆಗೆದು, ಗಟ್ಟಿಯಾದ ಈ ಪದಾರ್ಥವನ್ನು ಮತ್ತೆ ಮಿಕ್ಸರ್ ಜಾರ್‌ಗೆ ಹಾಕಿ ಚೆನ್ನಾಗಿ ಬ್ಲೆಂಡ್ ಮಾಡಿ. ಹೀಗೆ ಮಾಡುವುದರಿಂದ ಐಸ್‌ಕ್ರೀಮ್ ಹೆಚ್ಚು ಮೃದುವಾಗಿ ಮತ್ತು ಹಿಮಗಡ್ಡೆಗಳಿಲ್ಲದೆ ತಯಾರಾಗುತ್ತದೆ.

ಈ ಮಿಶ್ರಣವನ್ನು ಅಂತಿಮವಾಗಿ ಫ್ರೀಜ್ ಮಾಡಲು ಒಂದು ಟ್ರೇ ಅಥವಾ ಪಾತ್ರೆಯಲ್ಲಿ ಹಾಕಿ. ಅದಕ್ಕೆ ಹಿಂದೆ ತೆಗೆದಿರಿಸಿದ್ದ ಅರ್ಧ ಕಪ್ ಸೀತಾಫಲ ತಿರುಳನ್ನು ಸೇರಿಸಿ, ಸ್ಪೂನ್‌ನಿಂದ ನಿಧಾನವಾಗಿ ಬೆರೆಸಿ. ಮಿಶ್ರಣದ ಮೇಲೆ ಪ್ಲಾಸ್ಟಿಕ್ ಕವರ್ ಹಾಕಿ, ಮುಚ್ಚಳದಿಂದ ಮುಚ್ಚಿ ರಾತ್ರಿಯಿಡೀ ಅಥವಾ ಕನಿಷ್ಠ ಎಂಟು ಗಂಟೆಗಳ ಕಾಲ ಡಿಪ್ ಫ್ರೀಜರ್‌ನಲ್ಲಿ ಇಡಿ. ಈ ಸರಳ ವಿಧಾನದಿಂದ ತಯಾರಿಸಿದ ಪೌಷ್ಟಿಕ ಮತ್ತು ಸ್ವಾದಿಷ್ಟ ಸೀತಾಫಲ ಐಸ್ ಕ್ರೀಮ್ ಅನ್ನು ಸವಿಯಲು ಸಿದ್ಧವಾಗಿರುತ್ತದೆ. ಈ ಐಸ್‌ಕ್ರೀಮ್ ಅನ್ನು ಫ್ರೀಜರ್‌ನಲ್ಲಿ ಕನಿಷ್ಠ ಒಂದು ವಾರದವರೆಗೆ ತಾಜಾವಾಗಿ ಸಂಗ್ರಹಿಸಿಡಬಹುದು.



## ರಾಮಾಯಣ

ಮಾರೀಚನ ವಧೆ

• ಹಿಂದಿನ ಸಂಚಿಕೆಯಿಂದ

120 ನೆಯ ಅಧ್ಯಾಯ

ಈ ರೀತಿಯಲ್ಲಿ ಶ್ರೀರಾಮನು ಸೀತಾದೇವಿಯನ್ನು ರಕ್ಷಿಸಿಕೊಂಡಿರುವ ಹಾಗೆ ಲಕ್ಷ್ಮಣನಿಗೆ ಕಟ್ಟು ಮಾಡಿ ಸುವರ್ಣಮಯವಾದ ಖಡ್ಗವನ್ನು ತೆಗೆದುಕೊಂಡು ಅಕ್ಷಯಬಾಣ ತೂಣೀರಗಳನ್ನು ಧರಿಸಿ ಆ ಮೃಗವನ್ನು ಹಿಂದಟ್ಟಿ ಹೋದನು. ಆ ಮೃಗವು ಸನ್ನದ್ಧನಾಗಿ ಬರುತ್ತಿದ್ದ ಶ್ರೀರಾಮನನ್ನು ಕಂಡು ತನ್ನ ಮಾಯೆಯಿಂದ ಆತನಿಗೆ ಮರೆಯಾಗುತ್ತ ತಿರುಗಿ ಕಾಣಿಸಿಕೊಳ್ಳುತ್ತ ಓಡಿಹೋಗಲಾರಂಭಿಸಿತು. ಹೀಗೆ ತನ್ನ ತನುಕಾಂತಿಯಿಂದ ವನವನ್ನು ಬೆಳಗಿಸುತ್ತ ಮುಂದೆ ಮುಂದೆ ಓಡುತ್ತಿದ್ದ ಆ ಮೃಗವನ್ನು ಕಂಡು ಶ್ರೀರಾಮನು ಬಿಲ್ಲು ಬಾಣಗಳನ್ನು ತೆಗೆದುಕೊಂಡು ಹಿಂದಟ್ಟಿದನು. ಆ ಮೃಗವು ಆತನ ಕೈಗೆ ಸಿಕ್ಕುವಹಾಗೆ ಹತ್ತಿರದಲ್ಲಿ ಸುಳಿಯುತ್ತ, ಬೆದರಿದಂತೆ ಅಂತರಿಕ್ಷಮಾರ್ಗಕ್ಕೆ ನೆಗೆದು ಓಡಿ ಮರೆಯಾಗುತ್ತ, ಮೇಘಮಂಡಲದ ಮರೆಯಲ್ಲಿರುವ ಚಂದ್ರನಂತೆ ವನಮಧ್ಯದಲ್ಲಿ ಕಾಣಿಸುತ್ತ, ಒಂದು ವನದಿಂದ ಮತ್ತೊಂದು ವನಕ್ಕೆ ಹೋಗುತ್ತಿತ್ತು. ಶ್ರೀರಾಮನು ತನ್ನ ಆಶ್ರಮದಿಂದ ಬಹುದೂರ ನಡೆದು ಕಂಗೆಟ್ಟು ಒಂದು ಮರದ ನೆಳಲಲ್ಲಿ ಮೃದುವಾದ ಎಳೆಯ ಹುಲ್ಲಿನ ಮೇಲೆ ಕುಳಿತುಕೊಂಡು ಬಳಲಿಕೆಯನ್ನು ತೀರಿಸಿಕೊಂಡನು.

ಪುನಃ ಆ ಮೃಗವು ಆತನ ಸಮೀಪಕ್ಕೆ ಬಂದು ಆತನು ತನ್ನನ್ನು ಹಿಡಿಯಬೇಕೆಂದು ಯತ್ನಮಾಡುವುದನ್ನು ಕಂಡು ಬೆದರಿದ ಹಾಗೆ ಓಡಿಹೋಗಿ ಕ್ಷಣಮಾತ್ರದಲ್ಲಿ ಮರೆಯಾಗಿ ತಿರುಗಿ ಆ ವನಮಧ್ಯದಲ್ಲಿ ಕಾಣಿಸಿಕೊಂಡಿತು.

ಆಗ ಶ್ರೀರಾಮನು ಅದು ಮಾಯಾಮೃಗವೆಂದೂ ಅದನ್ನು ಕೊಲ್ಲದೆ ಬಿಡಬಾರದೆಂದೂ ನಿಶ್ಚಯಿಸಿ ಸೂರ್ಯಪ್ರಭೆಯಂತೆ ಪ್ರಜ್ವಲಿಸುವ ಬಾಣವನ್ನು ಬತ್ತಳಿಕೆಯಿಂದ ತೆಗೆದು ತನ್ನ ಘನವಾದ ಬಿಲ್ಲಿನಲ್ಲಿ ಹೂಡಿದನು: ಕೃಷ್ಣ ಸರ್ಪದಂತೆ ಭೋಂಕರಿಸುತ್ತ ಪ್ರಜ್ವಲಿಸುವ ಯಜ್ಞಪುರುಷನಂತೆ ಕಿಡಿಯನ್ನು ಗುಳುತ್ತಲಿದ್ದ ಆ ಬಾಣವನ್ನು ಮೃಗದ ಮೇಲೆ ಎಸೆದನು.

ಆ ಬಾಣವು ಸಿಡಿಲಂತೆ ಆ ಮೃಗದ ಎದೆಯಲ್ಲಿ ತಾಕಿ ಉಚ್ಚಳಿಸಿ ಬೀಳಲು ಮೃಗಸ್ಥರೂಪವನ್ನು ತಾಳಿದ ಮಾರೀಚನು ಗಾಯಪಡೆದು ಒಂದು ತಾಳೆಯ ಮರದ ಮೇಲಕ್ಕೆ ಹಾರಿ ಬಿದ್ದನು.

ಅವನು ಮಹಾಭಯಂಕರವಾಗಿ ಬೊಬ್ಬಿಡುತ್ತ ಪ್ರಾಣ ಹೋಗುವ ಸಮಯದಲ್ಲಿ ರಾವಣನ ಬೋಧನೆಯನ್ನು ಸ್ಮರಿಸಿಕೊಂಡು ಶ್ರೀರಾಮನ ಧ್ವನಿಗೆ ಸಮಾನವಾದ ಧ್ವನಿಯಿಂದ ಹಾ ಸೀತೆ ಹಾ ಲಕ್ಷ್ಮಣಾ ಎಂದು ಕೂಗಿದನು. ಆನಂತರ ಮ ಗಸ್ವರೂಪವನ್ನು ಬಿಟ್ಟು ರಾಕ್ಷಸರೂಪ ವುಳ್ಳವನಾಗಿ ಸರ್ವಾಭರಣಭೂಷಿತನಾಗಿ ಅತಿಭಯಂಕರವಾದ ಭೂಮಿಯ ಮೇಲೆ ಬಿದ್ದನು.

ಕೋರೆದಾಡೆಗಳುಳ್ಳವನಾಗಿ ಆಮೇಲೆ ಶ್ರೀರಾಮನು ತನ್ನ ದಾಣದಿಂದ ಗಾಯವಡೆದು ಶರೀರವೆಲ್ಲವೂ ರಕ್ತದಿಂದ ನೆನೆದು ಭೂಮಿಯಮೇಲೆ ಹೊರಳುತ್ತಿದ್ದ ಆ ರಾಕ್ಷಸನನ್ನು ಕಂಡನು.

**ಮುಂದುವರಿಯುವುದು...**

# ತೂಕ ಇಳಿಸಿಕೊಳ್ಳಲು ಬಯಸಿದರೆ ವೈಟ್ ರೈಸ್ ಬಿಟ್ಟುಬಿಡಿ

ಬಿಳಿ ಅಕ್ಕಿಯಿಂದ ಮಾಡಿದ ಅನ್ನ ಊಟ ಮಾಡುವುದರಿಂದ ದೇಹದ ತೂಕ ಹೆಚ್ಚಾಗುತ್ತದೆ ಎನ್ನುತ್ತಾರೆ ತಜ್ಞರು. ಹೀಗಾಗಿ ಸಮತೋಲನ ತೂಕ ಕಾಯ್ದುಕೊಳ್ಳಲು ಬಯಸುವವರು ಬಿಳಿ ಅಕ್ಕಿಯಿಂದ ಮಾಡಿದ ಅನ್ನದ ಬದಲು, ಕೆಂಪಕ್ಕಿ, ಕಪ್ಪು ಅಕ್ಕಿಯ ಅನ್ನ ಊಟ ಮಾಡುವುದರ ಮೂಲಕ ದೇಹದ ತೂಕ ಇಳಿಸಿಕೊಳ್ಳಬಹುದಂತೆ ತೂಕ ಹೆಚ್ಚಿಸಿಕೊಂಡವರು, ಹೇಗಾದರೂ ಮಾಡಿ ದೇಹದ ತೂಕ ಇಳಿಸಿಕೊಳ್ಳಬೇಕು ಎನ್ನುವ ಒಂದೇ ಹಠಕ್ಕೆ ಬಿದ್ದು, ದಿನಾ ಬೆಳಗ್ಗೆ ಬೇಗನೇ ಎದ್ದು ವಾಕಿಂಗ್ ಜಾಗಿಂಗ್ ಮಾಡುವುದು, ವ್ಯಾಯಾಮ ಯೋಗಾಭ್ಯಾಸಗಳನ್ನು ಮಾಡುವುದು, ಊಟವನ್ನು ತ್ಯಜಿಸುವುದು ಅಥವಾ ಒಂದೇ ಹೊತ್ತು ಊಟ ಮಾಡುವುದು, ಕೆಲವೊಮ್ಮೆ ದಿನ ಪೂರ್ತಿ ಉಪವಾಸವಿರುವುದೂ ಇದೆ! ಹೀಗೆ ಪ್ರತಿದಿನ ತೂಕ ಇಳಿಸಿಕೊಳ್ಳಲು ಬೇಕಾಗುವ ಎಲ್ಲಾ ಪ್ರಯತ್ನವನ್ನು ಕೂಡ ಚಾಚೂ ತಪ್ಪದೆ ಮಾಡುವರು, ಆದರೆ ದೇಹದ ತೂಕ ಇಳಿಯಲ್ಲಿ ಯಶಸ್ಸು ಕಾಣದೆ, ನಿರಾಸೆ ಅನುಭವಿ ಸುವರು! ಆದರೆ ನಮ್ಮಲ್ಲಿ ಬಹುತೇಕರು ತೂಕ ಇಳಿಸಿಕೊಳ್ಳುವ ಪ್ರಯತ್ನದಲ್ಲಿ ಕೆಲವೊಂದು ತಪ್ಪುಗಳನ್ನು ಮಾಡುತ್ತೇವೆ. ಅಂತಹ ತಪ್ಪುಗಳಿಂದಾಗಿಯೂ ಕೂಡ ತೂಕ ಇಳಿಕೆಗೆ ಹಿನ್ನಡೆ ಉಂಟು ಮಾಡುವ ಸಾಧ್ಯತೆ ಕೂಡ ಇರುತ್ತದೆ..

**ತೂಕ ಇಳಿಸಲು ಬಯಸುವವರು ಬಿಳಿ ಅಕ್ಕಿಯ ಅನ್ನ ಊಟ ಮಾಡಬಾರದು**

ಮನುಷ್ಯನ ದೈಹಿಕ ಬೆಳವಣಿಗೆಗೆ, ದಿನನಿತ್ಯದ ಕಾರ್ಯ ಚಟುವಟಿ ಕೆಗಳಿಗೆ, ದೇಹದ ಶಕ್ತಿಯನ್ನು ಹೆಚ್ಚಿಸುವಲ್ಲಿ ಅನ್ನದ ಮಹತ್ವ ಮರೆಯುವ ಹಾಗಿಲ್ಲ. ಹೀಗಾಗಿ ಮನುಷ್ಯನ ದೇಹದ ಆರೋಗ್ಯಕರ ಬೆಳವಣಿಗೆಗೆ ಅನ್ನಕ್ಕೆ ಹಿಂದಿನ ಕಾಲದಿಂದಲೂ ಕೂಡ ವಿಶೇಷ ಸ್ಥಾನಮಾನ ನೀಡುತ್ತಾ ಬರಲಾಗಿದೆ.

ಆದರೆ ತೂಕ ಇಳಿಸಲು ಬಯಸುವವರು ಬಿಳಿಅಕ್ಕಿಯ ಅನ್ನದಿಂದ ದೂರವಿರಬೇಕು ಎನ್ನುತ್ತಾರೆ ತಜ್ಞರು ಇದರ ಹಿಂದಿನ ಕಾರಣ ವೆಂದರೆ ಈ ಬಿಳಿ ಅಕ್ಕಿಯ ಗ್ಲೈಸೆಮಿಕ್ ಸೂಚ್ಯಂಕ ಹೆಚ್ಚಾಗಿದೆ. ಇದು ಸುಮಾರು 70 ರಿಂದ 90 ರಷ್ಟಿದೆ. ಇದರಲ್ಲಿ ಪೋಷಕಾಂಶಗಳು ಕಡಿಮೆ ಮತ್ತು ಹೆಚ್ಚಿನ ಕಾರ್ಬೋಹೈಡ್ರೇಟ್‌ಗಳಿವೆ. ಆದ್ದರಿಂದ, ಬಿಳಿ ಅಕ್ಕಿಯ ಅನ್ನ ಸೇವನೆ ಮಾಡುವುದರಿಂದ ದೇಹದ ತೂಕ ಹೆಚ್ಚಾಗುವ ಸಾಧ್ಯತೆ ಹೆಚ್ಚಿರುತ್ತದೆ ಎನ್ನುವುದು ತಜ್ಞರ ಸಲಹೆ.

ಸಾಮಾನ್ಯವಾಗಿ ಅಂಗಡಿಗಳಲ್ಲಿ ಸಿಗುತ್ತಿರುವ ಬಿಳಿಅಕ್ಕಿಗಳಿಗೆ ಹೆಚ್ಚಾಗಿ ಪಾಲೀಶ್ ಮಾಡಿರುವ ಕಾರಣ, ತನ್ನಲ್ಲಿ ಹೆಚ್ಚಾಗಿ ಪೋಷಕಾಂಶಗಳು ಒಳಗೊಂಡಿರುವುದಿಲ್ಲ. ಹೀಗಾಗಿ ಈ ಅಕ್ಕಿ ಯಿಂದ ತಯಾರು ಮಾಡಿದ ಅನ್ನ ದೇಹದ ತೂಕ ಹೆಚ್ಚಿಸುವ ಸಾಧ್ಯತೆ ಹೆಚ್ಚಿರುತ್ತದೆ.



**ಬಿಳಿ ಅಕ್ಕಿಯಲ್ಲಿ ಗ್ಲೈಸೆಮಿಕ್ ಸೂಚ್ಯಂಕ:** ಇನ್ನು ಬಿಳಿ ಅಕ್ಕಿಯಲ್ಲಿ ಗ್ಲೈಸೆಮಿಕ್ ಸೂಚ್ಯಂಕ ಹೆಚ್ಚಾಗಿದೆ. ಇದು ಸುಮಾರು 70 ರಿಂದ 90 ರಷ್ಟಿದೆ. ಇದರಲ್ಲಿ ಪೋಷಕಾಂಶಗಳು ಕಡಿಮೆ ಮತ್ತು ಹೆಚ್ಚಿನ ಕಾರ್ಬೋಹೈಡ್ರೇಟ್‌ಗಳಿವೆ. ಆದ್ದರಿಂದ ಬಿಳಿ ಅಕ್ಕಿಯ ಅನ್ನ ಮಾಡಿ ಸೇವನ ಮಾಡುವುದರಿಂದ ದೇಹದ ತೂಕ ಹೆಚ್ಚಾಗುವುದರ ಜೊತೆಗೆ ಬೊಜ್ಜು ಮಧುಮೇಹದ ಅಪಾಯ ಕೂಡ ಕಂಡು ಬರಬಹುದು. ಈಗಾಗಲೇ ಮಧುಮೇಹ ಇರುವವರು ಬಿಳಿ ಅಕ್ಕಿಯನ್ನು ತಿನ್ನದಂತೆ ಸೂಚಿಸಲಾಗಿದೆ. ಏಕೆಂದರೆ ಇದು ಸಕ್ಕರೆಯನ್ನು ಹೆಚ್ಚಿಸುತ್ತದೆ. ನಮ್ಮ ದೇಶದಲ್ಲಿ ಅನೇಕ ರೀತಿಯ ಅಕ್ಕಿಯನ್ನು ಬೆಳೆಯಲಾಗುತ್ತದೆ. ಇವುಗಳಲ್ಲಿ ಪೋಷಕಾಂಶಗಳು ಸಮೃದ್ಧವಾಗಿರುವ ಹಾಗೂ ದೇಹದ ತೂಕ ಇಳಿಸಲು ನೆರವಿಗೆ ಬರುವ ಕೆಲವೊಂದು ಬಗೆಯ ಅಕ್ಕಿಯ ಬಗ್ಗೆ ಈ ಲೇಖನದಲ್ಲಿ ಮಾಹಿತಿಯನ್ನು ನೀಡಿದ್ದೇವೆ ಮುಂದೆ ಓದಿ

**ಭತ್ತವನ್ನು ಬೇಯಿಸಿ ಒಣಗಿಸಿ ಅದರ ನಂತರ ಕುಚ್ಚಲಕ್ಕಿ ಅಥವಾ ಕೆಂಪಕ್ಕಿಯನ್ನು ತಯಾರಿಸಲಾಗುತ್ತದೆ. ಈ ಅಕ್ಕಿಯಲ್ಲಿ ನಾರಿನಾಂಶದ ಪ್ರಮಾಣ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತದೆ ಎಂದು ಹೇಳಲಾಗುತ್ತದೆ. ಪ್ರಮುಖವಾಗಿ ಈ ಕೆಂಪಕ್ಕಿಯಲ್ಲಿ ಕಂಡುಬರುವ ಅಧಿಕ ಪ್ರಮಾಣದ ನಾರಿನಾಂಶವು, ಜೀರ್ಣಕ್ರಿಯೆ ಪ್ರಕ್ರಿಯೆಯನ್ನು ಹೆಚ್ಚಿಸುವುದರ ಜೊತೆಗೆ ದೀರ್ಘಕಾಲ ಹೊಟ್ಟೆ ತುಂಬಿರುವಂತೆ ಮಾಡುವುದ ಜೊತೆಗೆ ದೇಹದ ತೂಕ ಇಳಿಸಲು ಕೂಡ ನೆರವಿಗೆ ಬರುವುದು. ಹೀಗಾಗಿ ದೇಹದ ತೂಕ ಇಳಿಸಲು ಬಯಸುವ ವರು ಕೆಂಪಕ್ಕಿಯನ್ನು ಬಳಸುವುದು ಒಳ್ಳೆಯದು.**

**ಕಪ್ಪು ಅಕ್ಕಿ:** ಸಾಮಾನ್ಯ ಅಕ್ಕಿಯಂತೆ ಇದ್ದರೂ ಕೂಡ, ಇದರ ಬಣ್ಣ ಮಾತ್ರ ಕಡುಕಪ್ಪು ಅಥವಾ ಸ್ವಲ್ಪ ಕಡುನೇರಳೆ ಬಣ್ಣದಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ಜಪಾನ್, ಚೀನಾ ಥೈಲ್ಯಾಂಡ್ ಮತ್ತು ಇಂಡೋನೇಶಿಯಾದಲ್ಲಿ ಇದನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ, ಇತ್ತೀಚೆಗೆ ಭಾರತದಲ್ಲಿಯೂ ಕೂಡ ಹೇರಳ ವಾಗಿ ಈ ಅಕ್ಕಿಯನ್ನು ಬೆಳೆಸಲಾಗುತ್ತಿದೆ.

### ಕೆಂಪಕ್ಕಿಯ ಗಂಜಿ ಊಟ ಮಾಡಿ!

ಪ್ರಮುಖವಾಗಿ ಈ ಅಕ್ಕಿಯಲ್ಲಿ ಕಂಡುಬರುವ ಆ್ಯಂಥೋಸಿಯಾನಿನ್ ಎನ್ನುವ ಆ್ಯಂಟಿ ಆಕ್ಸಿಡೆಂಟ್ ಹಾಗೂ ಇದರಲ್ಲಿ ಹೇರಳವಾಗಿ ಕಂಡು ಬರುವ ಪ್ರೋಟೀನ್, ನಾರಿನಾಂಶವು ದೇಹದ ತೂಕವನ್ನು ಇಳಿಸಲು ನೆರವಿಗೆ ಬರುತ್ತದೆ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ:** ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ಸಂಬಂಧಿಗಳಿದ್ದಲ್ಲಿ ಸಣ್ಣ ಪ್ರಯಾಣ ನಿಮ್ಮ ದೈನಂದಿನ ಒತ್ತಡದ ಜೀವನದಿಂದ ವಿಶ್ರಾಂತಿ ತರುತ್ತದೆ.

**ವೃಷಭ:** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟು ಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು.

**ಮಿಥುನ:** ನಿಮ್ಮ ಒರಟು ವರ್ತನೆ ನಿಮ್ಮ ಪತ್ನಿಯೊಂದಿಗಿನ ಸಂಬಂಧವನ್ನು ಹಾಳು ಮಾಡಬಹುದು. ಏನಾದರೂ ಬಾಲಿಶವಾದದ್ದನ್ನು ಮಾಡುವ ಮೊದಲು ನಿಮ್ಮ ವರ್ತನೆಯ ಪರಿಣಾಮದ ಬಗ್ಗೆ ಆಲೋಚಿಸಿ. ಸಾಧ್ಯವಾದಲ್ಲಿ ದೂರ ಹೋಗಿ ನಿಮ್ಮ ಮನಸ್ಥಿತಿಯನ್ನು ಬದಲಾಯಿಸಿ.

**ಕರ್ಕಾಟಕ:** ಕುಡಿಯುವ ಅಭ್ಯಾಸವನ್ನು ತೊಡೆದುಹಾಕಲು ಇದೊಂದು ಪವಿತ್ರವಾದ ದಿನ. ನೀವು ವೈನ್ ಕುಡಿಯುವುದು ಆರೋಗ್ಯದ ಪ್ರಾಣಾಂತಿಕ ಶತ್ರು ಎಂದು ನೀವು ಅರ್ಥ ಮಾಡಿಕೊಳ್ಳಬೇಕು, ಇದು ನಿಮ್ಮ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ಸಾಲ ಕೇಳುವ, ಅದನ್ನು ಹಿಂತಿರುಗಿಸದೆ ಇರುವಂತಹ ಸ್ನೇಹಿತರಿಂದ ತಪ್ಪಿಸುವ ಅಗತ್ಯವಿದೆ.

**ಸಿಂಹ:** ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಬಯಕೆ ಮತ್ತು ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ಕೆಲವು ದುಃಖದ ಸಮಯದಲ್ಲಿ ನೀವು ಸಂಗ್ರಹಿಸುವ ಹಣ ಮಾತ್ರ ನಿಮ್ಮ ಕೆಲಸಕ್ಕೆ ಬರುತ್ತದೆ ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿ.

**ಕನ್ಯಾ:** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ, ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ, ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ. ಈ ರಾಶಿಚಕ್ರದ ವಿವಾಹಿತ ಜನರಿಗೆ ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ.

**ತುಲಾ:** ಅಶಕ್ತ ದೇಹ ಮನಸ್ಸನ್ನು ದುರ್ಬಲಗೊಳಿಸುವುದರಿಂದ ಶಕ್ತಿ ಮರಳಿ ಪಡೆಯಲು ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮಲ್ಲಿ ಸಾಮರ್ಥ್ಯದ ಕೊರತೆಯಿರದೇ ಇಚ್ಛಾಶಕ್ತಿಯ ಕೊರತೆಯಿದೆಯೆಂದು ನೀವು ಅರ್ಥ ಮಾಡಿಕೊಳ್ಳಬೇಕು. ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ನಷ್ಟ ಅನುಭವಿಸುವ ಸಾಧ್ಯತೆ.

**ವೃಶ್ಚಿಕ:** ಸಂತೋಷದಿಂದ ತುಂಬಿದ ಒಳ್ಳೆಯ ದಿನ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ. ನಿಮ್ಮ ಮಾಮ ಅಥವಾ ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು. ನೀವು ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ.

**ಧನಸ್ಸು:** ಸಂಗಾತಿಯೊಡನೆ ಚಲನಚಿತ್ರ – ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ, ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.

**ಮಕರ:** ಕೆಲವು ಮಾನಸಿಕ ಒತ್ತಡಗಳ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು. ಇದರ ಕಾರಣದಿಂದ ನೀವು ಆಸ್ಪತ್ರೆಗೂ ಹೋಗಬೇಕಾಗಬಹುದು, ನಿಮ್ಮ ಸಾಕಷ್ಟು ಹಣವು ಸಹ ಖರ್ಚು ಆಗಬಹುದು. ಹಳೆಯ ಸಂಪರ್ಕಗಳು, ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ.

**ಕುಂಭ:** ಇಂದು ನೀವು ಹಲವಾರು ಒತ್ತಡಗಳು, ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು, ಇದು ನಿಮಗೆ ಕಿರಿಕಿರಿ, ಆತಂಕದ ಭಾವನೆಗಳನ್ನು ಉಂಟುಮಾಡಬಹುದು. ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ನೀವು ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ.

**ಮೀನ:** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ – ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ ಮತ್ತು ನಿಮ್ಮ ಕೆಲಸಗಳನ್ನು ಇನ್ನೊಂದು ದಿನಕ್ಕೆ ವರ್ಗಾಯಿಸಿ. ಆರ್ಥಿಕ ಜೀವನದಲ್ಲಿ ಇಂದು ಸಂತೋಷ ಉಳಿದಿರುತ್ತದೆ.

# ಚಿತ್ತಗುಪ್ಪ ತಾಲ್ಲೂಕಿನಲ್ಲಿ ಕಂಪಿಸಿದ ಭೂಮಿ; 2.9 ಭೂಕಂಪದ ತೀವ್ರತೆ ದಾಖಲು

• ಉದಯವಾಹಿನಿ, ಬೀದರ್

ಬೀದರ್ ಜಿಲ್ಲೆಯ ಚಿತ್ತಗುಪ್ಪ ತಾಲ್ಲೂಕಿನಲ್ಲಿ ಭಾನುವಾರ ಮುಂಜಾನೆ ಲಘು ಭೂಕಂಪನ ಸಂಭವಿಸಿದ್ದು, ರಿಕ್ಟರ್‌ಮಾಪಕದಲ್ಲಿ 2.9 ತೀವ್ರತೆ ದಾಖಲಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ದೃಢಪಡಿಸಿದೆ. ಈ ಭೂಕಂಪನದಿಂದ ಯಾವುದೇ ಹಾನಿ ಸಂಭವಿಸಿಲ್ಲ, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಇಲಾಖೆ ಸ್ಪಷ್ಟಪಡಿಸಿದೆ.




**ಭೂಕಂಪನದ ವಿವರಗಳು:** KSNDMC ಜಾಲತಾಣದಲ್ಲಿ ದಾಖಲಾದ ಮಾಹಿತಿಯ ಪ್ರಕಾರ, ಭೂಕಂಪನದ ನಿಖರವಾದ ವಿವರಗಳು ಹೀಗಿವೆ. **ಕೇಂದ್ರಬಿಂದು:** ಚಿತ್ತಗುಪ್ಪ ತಾಲ್ಲೂಕಿನ ಬಾಸ್ಕರನಗರ ಗ್ರಾಮದಿಂದ ವಾಯುವ್ಯಕ್ಕೆ 2.4 ಕಿ.ಮೀ. ದೂರದಲ್ಲಿ. **ತೀವ್ರತೆ:** 2.9 **ಸಮಯ:** ಮುಂಜಾನೆ 03:42:26 ಗಂಟೆಗೆ **ನಿರ್ದೇಶಾಂಕಗಳು: ಅಕ್ಷಾಂಶ:** 17.7212° N; **ರೇಖಾಂಶ:** 77.1854° E **ಆಳ:** ಭೂಮಿಯಿಂದ 5 ಕಿ.ಮೀ. ಆಳದಲ್ಲಿ ಭೂಕಂಪ ಏರ್ಪಟ್ಟಿದೆ.

**ಕೇಂದ್ರಬಿಂದುವಿನಿಂದ ವಿವಿಧ ಸ್ಥಳಗಳಿಗೆ ಇರುವ ದೂರ:**

ಭೂಕಂಪನದ ಕೇಂದ್ರಬಿಂದುವು ಈ ಕೆಳಗಿನ ಸ್ಥಳಗಳಿಂದ ನಿರ್ದಿಷ್ಟ ದೂರದಲ್ಲಿದೆ. ಚಿತ್ತಗುಪ್ಪ ತಾಲ್ಲೂಕಿನಿಂದ ವಾಯುವ್ಯಕ್ಕೆ 4.0 ಕಿ.ಮೀ. ಇಟಗಾ ಗ್ರಾಮ ಪಂಚಾಯತ್‌ನಿಂದ ಉತ್ತರಕ್ಕೆ 4.3 ಕಿ.ಮೀ. ಬೆಳಕೇರಾ ಗ್ರಾಮ ಪಂಚಾಯತ್‌ನಿಂದ ಪಶ್ಚಿಮ-ವಾಯುವ್ಯಕ್ಕೆ 6.8 ಕಿ.ಮೀ. ಬೀದರ್ ನಗರದಿಂದ ನೈಋತ್ಯಕ್ಕೆ 40.0 ಕಿ.ಮೀ.

**ಜನರು ಭಯಪಡುವ ಅಗತ್ಯವಿಲ್ಲ:** ಭೂಕಂಪನದ ತೀವ್ರತೆ ಕಡಿಮೆ ಇರುವುದರಿಂದ, ಇದರ ಕಂಪನವು ಕೇಂದ್ರಬಿಂದುವಿನಿಂದ ಗರಿಷ್ಠ 30-40 ಕಿ.ಮೀ. ವ್ಯಾಪ್ತಿಯವರೆಗೆ ಅನುಭವಕ್ಕೆ ಬಂದಿರಬಹುದು ಎಂದು ವಿಶ್ಲೇಷಿಸಲಾಗಿದೆ. ಇಂತಹ ಕಡಿಮೆ ತೀವ್ರತೆಯ ಭೂಕಂಪನಗಳು ಸ್ಥಳೀಯ ಸಮುದಾಯಕ್ಕೆ ಯಾವುದೇ ರೀತಿಯ ಹಾನಿಯನ್ನುಂಟು ಮಾಡುವುದಿಲ್ಲ.

ಕೇವಲ ಭೂಮಿಯ ನಡುಕದ ಅನುಭವವಾಗಿರಬಹುದು. ಭೂಕಂಪನದ ಕೇಂದ್ರಬಿಂದುವು ಭೂಕಂಪನ ವಲಯ-IIರಲ್ಲಿ ಬರುವುದರಿಂದ, ಇಲ್ಲಿ ಹಾನಿಯಾಗುವ ಸಾಧ್ಯತೆ ತೀರಾ ಕಡಿಮೆ. ಭೂವೈಜ್ಞಾನಿಕ ನಕ್ಷೆಯ ಪ್ರಕಾರ, ಈ ಪ್ರದೇಶದಲ್ಲಿ ಯಾವುದೇ ರಚನಾತ್ಮಕ ದೋಷಗಳಿಲ್ಲ. ಆದ್ದರಿಂದ, ಸಾರ್ವಜನಿಕರು ಭಯಭೀತರಾಗುವ ಅಗತ್ಯವಿಲ್ಲ, ಎಂದು ಕೆಎಸ್‌ಎನ್‌ಡಿಎಮ್‌ಸಿ ನಿರ್ದೇಶಕರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಳೆ ವೈಷಮ್ಯ ಬಿಜೆಪಿ ಮುಖಂಡ ವೆಂಕಟೇಶ್ ಕುರುಬರ ಹತ್ಯೆ

## ಕೊಲೆ ಪ್ರಕರಣದ ಪ್ರಮುಖ ಆರೋಪಿಗಳಾದ ರವಿ ಹಾಗೂ ಗೌಳಿ ಗಂಗಾಧರ ಬಂಧನ

• ಉದಯವಾಹಿನಿ, ಕೊಪ್ಪಳ:

ಹಳೆ ವೈಷಮ್ಯ ಹಿನ್ನೆಲೆ ಗಂಗಾವತಿ ಪಟ್ಟಣದಲ್ಲಿ ನಡೆದಿದ್ದ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ವೆಂಕಟೇಶ್ ಕುರುಬರ ಹತ್ಯೆ ಪ್ರಕರಣದ ಕೇಸಿನ ಪ್ರಮುಖ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ರವಿ, ಗೌಳಿ ಗಂಗಾಧರ ಬಂಧಿತ ಆರೋಪಿಗಳು. ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ವೆಂಕಟೇಶ್ ಕುರುಬರ ಕೊಲೆ ನಡೆದು ಬರೋಬ್ಬರಿ 19 ದಿನಗಳ ಬಳಿಕ ಆರೋಪಿಗಳು ಸೆರೆ ಸಿಕ್ಕಿದ್ದಾರೆ. ಹಳೇ ವೈಷಮ್ಯಕ್ಕೆ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಏಳು ಜನರನ್ನು ಬಂಧಿಸಿದ್ದ ಪೊಲೀಸರು, ಇದೀಗ ಪ್ರಮುಖ ಆರೋಪಿ ರವಿ ಹಾಗೂ ಗೌಳಿ ಗಂಗಾಧರ್ ಅವರನ್ನು ಬಂಧಿಸಿದ್ದಾರೆ. ರವಿ ಬಂಧನಕ್ಕೆ ಕೊಪ್ಪಳ ಎಸ್‌ಪಿ ವಿಶೇಷ ತಂಡ ರಚಿಸಿದ್ದರು. ರವಿಗಾಗಿ ಹೊರ ರಾಜ್ಯದಲ್ಲಿ ಹುಡುಕಾಡಿದ್ದ ಪೊಲೀಸರು ಯಶಸ್ವಿಯಾಗಿ ಬಂಧಿಸಿದ್ದಾರೆ.

19 ದಿನಗಳ ಬಳಿಕ ಸೆರೆ



ಉದಯವಾಹಿನಿ ಚಿತ್ರ

**ಕೊಲೆಗೆ ಕಾರಣವೇನು?:** ವೆಂಕಟೇಶ್ ಕುರುಬರ ಕೊಲೆ ಕೇಸ್‌ನ ಎ1 ಆರೋಪಿಯಾಗಿದ್ದ ರವಿ ಅಕ್ಟೋಬರ್ 8 ರಂದು ಗಂಗಾವತಿಯಲ್ಲಿ ನಡೆದ ಹತ್ಯೆಗೆ ಸಂಚು ರೂಪಿಸಿದ್ದ. ಬಿಜೆಪಿ ಯುವ ಮೋರ್ಚಾದ ನಗರ ಘಟಕದ ಅಧ್ಯಕ್ಷ ವೆಂಕಟೇಶ್ ಕುರುಬರ್ (32) ತಡರಾತ್ರಿ ಊಟ ಮುಗಿಸಿ ಸ್ನೇಹಿತರೊಂದಿಗೆ ದ್ವಿಚಕ್ರ ವಾಹನದಲ್ಲಿ ಮನೆಗೆ ತೆರಳುತ್ತಿದ್ದಾಗ, ಕಾರಿನಲ್ಲಿ ಹಿಂಬಾಲಿಸಿದ ಐವರು ಯುವಕರ ಗುಂಪು, ಅವರ ಬೈಕ್‌ಗೆ ಗುದ್ದಿ ನೆಲಕ್ಕುರುಳುವಂತೆ ಮಾಡಿ, ಅವರು ಕೆಳಗೆ ಬಿದ್ದ ವೆಂಕಟೇಶ್ ಅವರ ಮೇಲೆ ಮಾರಕಾಸ್ತ್ರಗಳಿಂದ ಮನಬಂದಂತೆ ಕೊಚ್ಚಿ ಕೊಲೆ ಮಾಡಿ ಸ್ಥಳದಿಂದ ಪರಾರಿಯಾಗಿದ್ದರು. ತೀವ್ರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದ ವೆಂಕಟೇಶ್ ಅವರನ್ನು ಸರ್ಕಾರಿ ಉಪ ವಿಭಾಗ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದರು. ಕೊಲೆಗೆ ಸಂಚು ರೂಪಿಸಿದ್ದ ಆರೋಪಿಗಳು, ವೆಂಕಟೇಶ್ ಅವರ ಚಲನವಲನಗಳನ್ನು ಗಮನಿಸಿದ್ದರು. (ಅ.7)ರಂದು ತಮ್ಮ ಯೋಜನೆ ಪ್ರಕಾರ ಹತ್ಯೆ ಮಾಡಿ ಪರಾರಿಯಾಗಿದ್ದಾರೆ.

### ಸ್ನೇಹಿತನ ಕೊಂದಿದ್ದಕ್ಕೆ ಸೇಡು

**ಕೊಲೆಯಾದ ಕೆಲವೇ ದಿನಕ್ಕೆ ಐವರು ಆರೋಪಿಗಳ ಪೈಕಿ ನಾಲ್ವರು ಭೀಮ್ ಅಲಿಯಾಸ್ ಭರತ್, ಸಲೀಂ, ವಿಜಯ್ ಹಾಗೂ ಧನರಾಜ್ ಬಳ್ಳಾರಿ ಜಿಲ್ಲೆಯ ಕಂಪ್ಲಿ ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದರು. ಮತ್ತೊಬ್ಬ ಪರಾರಿಯಾಗಿದ್ದ ಎನ್ನಲಾಗಿತ್ತು. ಕಳೆದ ಎರಡು ವರ್ಷಗಳ ಹಿಂದೆ ವೆಂಕಟೇಶನ ಸ್ನೇಹಿತ ಅಮರಭಗತ್ ಸಿಂಗ್ ಮಾರುತಿ ಅಲಿಯಾಸ್ ಸಲಗ ಎಂಬ ಯುವಕನ ಮೇಲೆ ಕಲ್ಲು ಎತ್ತಿಹಾಕಿದ್ದ. ಮಾರಣಾಂತಿಕವಾಗಿ ಗಾಯಗೊಂಡಿದ್ದ ಮಾರುತಿ ಎರಡು ವರ್ಷ ಕೋಮಾದಲ್ಲಿದ್ದ. ಸಾವು ಬದುಕಿನ ಹೋರಾಟದಲ್ಲಿದ್ದ ಆತ ಮೂರು ತಿಂಗಳ ಹಿಂದೆ ಮೃತಪಟ್ಟ ಇದರಿಂದ ಪ್ರಮುಖ ಆರೋಪಿ ಸಿಟ್ಟಾಗಿದ್ದ. ಒಳ್ಳೆಯ ದಿನ ಸರಿಯಾದ ಸಮಯ ನೋಡಿ ಕೊಲೆ ಮಾಡಲು ಪ್ಲ್ಯಾನ್ ಮಾಡಿದ್ದ ಎಂದು ಪೊಲೀಸರು ತಿಳಿಸಿದರು.**

ಆದರೆ, ಆರೋಪಿಗಳು ಬಂದಿದ್ದ ಕಾರಿನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ, ಆನೆಗೊಂದಿ ರಸ್ತೆಯ ಪಿಎಲ್‌ಡಿ ಬ್ಯಾಂಕ್ ಬಳಿ ಕಾರನ್ನು ಬಿಟ್ಟು ಪರಾರಿಯಾಗಿದ್ದಾರೆ. ಗಂಗಾವತಿ ಶಹರ ಪೊಲೀಸರು ಕಾರನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಿದ್ದರು.

# 4,500 ಕೆಜಿ ಅನ್ನಭಾಗ್ಯ ಅಕ್ಕಿ ಜಪ್ತಿ

• ಉದಯವಾಹಿನಿ, ಹಾವೇರಿ

ಜಿಲ್ಲೆಯ ಹಾನಗಲ್ ತಾಲ್ಲೂಕಿನ ತಿಳವಳ್ಳಿ ಬಳಿ ಅನ್ನಭಾಗ್ಯ ಯೋಜನೆಯ 4,500 ಕೆ.ಜಿ. ಪಡಿತರ ಅಕ್ಕಿ ಜಪ್ತಿ ಮಾಡಲಾಗಿದ್ದು, ಈ ಬಗ್ಗೆ ಅಡೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಿಳವಳ್ಳಿ ಗ್ರಾಮದಲ್ಲಿರುವ ತಿಳವಳ್ಳಿ ಹಂಸಬಾವಿ ರಸ್ತೆಯಲ್ಲಿ ಟಾಟಾ ಗೂಡ್ಸ್ ವಾಹನದಲ್ಲಿ ಅಕ್ಕಿಯನ್ನು ಅಕ್ರಮವಾಗಿ ಸಾಗಿಸಲಾಗುತ್ತಿತ್ತು. ಆಹಾರ ಇಲಾಖೆ ಅಧಿಕಾರಿಗಳು ಅ. 24ರಂದು ರಾತ್ರಿ ಕಾರ್ಯಾಚರಣೆ ನಡೆಸಿ, ವಾಹನ ಸಮೇತ ಅಕ್ಕಿ ಪತ್ತೆ ಮಾಡಿದ್ದಾರೆ. ಈ ಬಗ್ಗೆ ಹಾನಗಲ್ ತಹಶೀಲ್ದಾರ್ ಕಚೇರಿಯ ಆಹಾರ ಇಲಾಖೆಯ ಶಿರಸ್ತೆದಾರ ವೆಂಕಟೇಶ ಸಂಗಪ್ಪ ದೊಡ್ಡಮನಿ ಅವರು ದೂರು ನೀಡಿದ್ದಾರೆ ಎಂದು ಆಡೂರು ಠಾಣೆ ಪೊಲೀಸರು ತಿಳಿಸಿದರು. 100 ಚೀಲಗಳಲ್ಲಿ ತುಂಬಿದ್ದ 1.30 ಲಕ್ಷ ಮೌಲ್ಯದ 4,500 ಕೆ.ಜಿ. ಪಡಿತರ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳು ಎನ್ನಲಾದ ಅಕ್ಕಿ ಆಲೂರಿನ ಅನಿಲಕುಮಾರ ಕರಬಸಪ್ಪ ಮಾಳಗಿ ಹಾಗೂ ಬಂಕಾಪುರದ ಸುರೇಶ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಚಾಲಕ ವಾಹನ ಬಿಟ್ಟು ಪರಾರಿಯಾಗಿದ್ದಾನೆ ಎಂದು ಹೇಳಿದರು. ಬಿಪಿಎಲ್ ಪಡಿತರ ಚೀಟಿದಾರರಿಗೆ ಅನ್ನಭಾಗ್ಯ ಯೋಜನೆಯಡಿ ರಾಜ್ಯ ಸರ್ಕಾರ ಉಚಿತವಾಗಿ ಅಕ್ಕಿ ನೀಡುತ್ತಿದೆ. ಇದೇ ಅಕ್ಕಿಯನ್ನು ಫಲಾನುಭವಿಗಳಿಂದ ಖರೀದಿಸುತ್ತಿರುವ ಕೆಲವರು, ಅದನ್ನು ಕಾಳಸಂತೆಯಲ್ಲಿ ಮಾರುತ್ತಿರುವ ಮಾಹಿತಿಯಿದೆ. ಈಗ ಸಿಕ್ಕಿರುವ ಅಕ್ಕಿಯನ್ನು ಎಲ್ಲಿಂದ ಖರೀದಿಸಲಾಗಿತ್ತು, ಎಲ್ಲಿಗೆ ಕಳುಹಿಸಲಾಗುತ್ತಿತ್ತು ಎಂಬುದು ತನಿಖೆ ಮೂಲಕ ತಿಳಿಯಬೇಕಿದೆ ಎಂದು ಪೊಲೀಸರು ತಿಳಿಸಿದರು. ಕಾರ್ಯಾಚರಣೆ ಬಗ್ಗೆ ಪ್ರತಿಕ್ರಿಯಿಸಿದ ಆಹಾರ ಇಲಾಖೆ ಉಪನಿರ್ದೇಶಕ ಮಂಜುನಾಥ್, 4,500 ಕೆ.ಜಿ. ಪಡಿತರ ಅಕ್ಕಿ ಜಪ್ತಿ ಮಾಡಲಾಗಿದ್ದು, ಪೊಲೀಸರಿಗೂ ದೂರು ನೀಡಲಾಗಿದೆ. ತನಿಖೆಯಿಂದಲೇ ಮತ್ತಷ್ಟು ಮಾಹಿತಿ ತಿಳಿಯಬೇಕಿದೆ ಎಂದರು.

# ಸಂಚಲನ ಸೃಷ್ಟಿಸಿದ್ದ ಯತೀಂದ್ರ ಹೇಳಿಕೆಗೆ ಸತೀಶ್ ಜಾರಕಿಹೊಳಿ ಮೊದಲ ಪ್ರತಿಕ್ರಿಯೆ

• ಉದಯವಹಿನಿ, ಬೆಳಗಾವಿ



ಡಾ.ಯತೀಂದ್ರ ಸಿದ್ದರಾಮಯ್ಯ ಅಹಿಂದ ನಾಯಕತ್ವದ ಬಗ್ಗೆ ಹೇಳಿದ್ದಾರೆಯೇ ಹೊರತು, ಮುಖ್ಯಮಂತ್ರಿ, ಡಿಸಿಎಂ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಅಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು. ತಂದೆ ಸಿದ್ದರಾಮಯ್ಯ ನಂತರ, ಅಹಿಂದ ನಾಯಕತ್ವ ವಹಿಸಿಕೊಳ್ಳಲು ಸಚಿವ ಸತೀಶ ಜಾರಕಿಹೊಳಿ ಸಮರ್ಥರಾಗಿದ್ದಾರೆ ಎಂಬ ಯತೀಂದ್ರ ಹೇಳಿಕೆಗೆ, ಇಲ್ಲಿ ಭಾನುವಾರ ಸುದ್ದಿಗಾರರಿಗೆ ಅವರು ಹೀಗೆ ಪ್ರತಿಕ್ರಿಯಿಸಿದರು.

ಪಕ್ಷವೇ ಬೇರೆ. ಅಹಿಂದ ಸಂಘಟನೆಯೇ ಬೇರೆ. ಸಿ.ಎಂ ಸ್ಥಾನಕ್ಕೂ ಅದಕ್ಕೂ ಸಂಬಂಧವಿಲ್ಲ. ಈ ವಿಚಾರದಲ್ಲಿ ಗೊಂದಲ ನಿರ್ಮಿಸುವ ಅಗತ್ಯವಿಲ್ಲ ಎಂದರು. ಸಚಿವ ಸಂಪುಟ ಪುನರ್ ರಚನೆ ವಿಚಾರವಾಗಿ ಪ್ರತಿಕ್ರಿಯಿಸಿದ ಸತೀಶ, ಸಂಪುಟ ಪುನರ್ ರಚನೆ ಆದಾಗ ಹಳಬರು ಹೋಗಿ, ಹೊಸಬರು ಬರುತ್ತಾರೆ. ಸರ್ಕಾರ ಅಧಿಕಾರಕ್ಕೆ ಬಂದ 30 ತಿಂಗಳ ನಂತರ, ಸಂಪುಟ ಪುನರ್ ರಚನೆ ಮಾಡಲಾಗುತ್ತದೆ ಎನ್ನಲಾಗಿತ್ತು. ಈಗ ಆ ಚರ್ಚೆ ಅಂತಿಮ ಹಂತಕ್ಕೆ ಬಂದಿರಬೇಕು. ಯಾರನ್ನು ಸಚಿವ ಸ್ಥಾನದಿಂದ ಕೈಬಿಡುತ್ತಾರೆ ಎಂಬ ವಿಚಾರ ಪಕ್ಷದ ವರಿಷ್ಠರಿಗೆ ಬಿಟ್ಟಿದ್ದು. ಈ ಬಗ್ಗೆ ನಮ್ಮ ಹಂತದಲ್ಲಿ ಚರ್ಚೆಯಾಗಿಲ್ಲ ಎಂದು ಹೇಳಿದರು. ಸಚಿವ ಸ್ಥಾನ ತ್ಯಾಗದ ಬಗ್ಗೆ ಕೃಷ್ಣ ಬೈರೇಗೌಡ ಮಾತನಾಡಿರುವ ಕುರಿತು ಪ್ರತಿಕ್ರಿಯಿಸಿದ ಸತೀಶ, 'ಪಕ್ಷದ ಹೈಕಮಾಂಡ್ ಸೂಚನೆಯನ್ನು ಎಲ್ಲರೂ ಪಾಲಿಸಬೇಕು. ಸಚಿವ ಸ್ಥಾನ ತೊರೆದವರು ಪಕ್ಷದ ಪರವಾಗಿ ಕೆಲಸ ಮಾಡಬೇಕು. ಸಚಿವರಾದವರು ಜನರ ಕೆಲಸ ಮಾಡಬೇಕು ಎಂದರು. ಸಂಪುಟದಲ್ಲಿ 34 ಜನರಿಗೆ ಮಾತ್ರ ಸಚಿವ ಸ್ಥಾನ ನೀಡಬೇಕಿದೆ. ಅನೇಕ ಹಿರಿಯರು ಆಕಾಂಕ್ಷಿಗಳಾಗಿದ್ದಾರೆ. ಯಾರು ಸಚಿವರಾಗುತ್ತಾರೆ ಎಂದು ನಾವೇ ಹೇಳುವುದು ಕಷ್ಟ. ಪಕ್ಷದ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. 'ಡಿಸೆಂಬರ್ ನಂತರ ನನಗೆ ಶುಕ್ರದೆಸೆ ಆರಂಭವಾಗಲಿದೆ' ಎಂಬ ಶಾಸಕ ಲಕ್ಷ್ಮಣ ಸವದಿ ಹೇಳಿಕೆಗೆ, ಬಹಳಷ್ಟು ಹಿರಿಯರು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಅಂತಿಮವಾಗಿ ಲಕ್ಷ್ಮೀ ಯಾರಿಗೆ ಒಲಿಯುತ್ತಾಳೆ ಕಾದುನೋಡೋಣ ಎಂದರು. ಬೆಳಗಾವಿ ಜಿಲ್ಲೆ ದೊಡ್ಡದಿದೆ. ಇದನ್ನು ವಿಭಜಿಸುವಂತೆ ಎಲ್ಲಾ ಶಾಸಕರೂ ಹೇಳಿದ್ದಾರೆ ಎಂದರು.

# ಬೀಜೋತ್ಪಾದನೆಯಲ್ಲಿ ಹೆಚ್ಚಿನ ಆದಾಯ

• ಉದಯವಾಹಿನಿ, ರಾಣೆಬೆನ್ನೂರು

ರೈತರು ವಾಣಿಜ್ಯ ಬೆಳೆಗಳನ್ನು ಬೆಳೆದಾಗ ಸಿಗುವ ಲಾಭಕ್ಕಿಂತ ಬೀಜೋತ್ಪಾದನೆಯಲ್ಲಿ ಹೆಚ್ಚಿನ ಆದಾಯ ಪಡೆಯಲು ಸಾಧ್ಯ. ಹಾವೇರಿ ಜಿಲ್ಲೆಯು ಬೀಜೋತ್ಪಾದನೆಗೆ ಪ್ರತಿಕೂಲವಾದ ವಾತಾವರಣ ಹೊಂದಿದೆ. ಬೀಜೋತ್ಪಾದನೆಯಲ್ಲಿ ಹೆಚ್ಚಿನ ರೈತರು ಪಾಲ್ಗೊಂಡು ಉದ್ಯಮಶೀಲರಾಗಿ ಪ್ರಗತಿ ಹೊಂದಬೇಕು ಎಂದು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ, ಮುಖ್ಯಸ್ಥ ಪ್ರೊ.ಎ.ಎಚ್. ಬಿರಾದಾರ ಹೇಳಿದರು.

ತಾಲ್ಲೂಕಿನ ಹನುಮನಮಟ್ಟಿ ಕೃಷಿ ವಿಶ್ವವಿದ್ಯಾಲಯದಲ್ಲಿ ಐಸಿಎಆರ್‌- ಕೃಷಿ ವಿಜ್ಞಾನ ಕೇಂದ್ರದಿಂದ ರೈತರಿಗೆ ಏರ್ಪಡಿಸಿದ್ದ ಬೀಜೋತ್ಪಾದನೆ ತರಬೇತಿ ಒಂದು ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶಿಗ್ಗಾಂವ್ ಬೈಫ್ ಸಂಸ್ಥೆಯ ಅಧಿಕಾರಿ ಈರಣ್ಣ ಸಿ.ಬಾಗೇವಾಡಿ ಮಾತನಾಡಿ, ಶಿಗ್ಗಾಂವ್ ತಾಲ್ಲೂಕಿನ ರೈತರು ಬೀಜೋತ್ಪಾದನೆ ತರಬೇತಿಯಲ್ಲಿ ಪಾಲ್ಗೊಳ್ಳುತ್ತಿರುವುದು ಸಂತಸದ ವಿಷಯ. ಮುಂದಿನ ದಿನಗಳಲ್ಲಿ ಹೆಚ್ಚಿನ ರೈತರು ಬೀಜೋತ್ಪಾದನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

# ಮಾಜಿ ಸಂಸದ ಜಾಧವ, ಅಧಿಕಾರದಲ್ಲಿರುವಾಗ ಬಂಜಾರ ಸಂಘಕ್ಕೆ ತೊರದ ಕಾಳಜಿ ಇವಾಗ ಏಕೆ?

• ಉದಯವಾಹಿನಿ,ಚಿಂಚೋಳಿ



ತಾಲ್ಲೂಕಾ ಸೇರಿದಂತೆ ಇತರೆ ತಾಲ್ಲೂಕು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿನ ಬಂಜಾರ ಸಮಾಜವನ್ನು ದಾರಿ ತಪ್ಪಿಸುವ ಕಾರ್ಯವನ್ನು ಮಾಜಿ ಸಂಸದ ಡಾ.ಉಮೇಶ ಜಾಧವ ಮಾಡುತ್ತಿದ್ದಾರೆ ಎಂದು ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ತಾಲ್ಲೂಕಾ ಉಪಾಧ್ಯಕ್ಷ ಡಾ.ತುಕ್ಕರಾಮ ಪವ್ವಾರ ಆರೋಪಿಸಿದರು.

ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು, ಕಲಬುರ್ಗಿ ಮಾಜಿ ಸಂಸದ ಡಾ.ಉಮೇಶ ಜಾಧವರಿಗೆ ಬಂಜಾರ ಸಂಘಟನೆಗಳ ಬಗ್ಗೆ ಇರದ ಕಾಳಜಿ ಈಗ ಏಕೆ ಬಂದಿದೆ.

ಅಧಿಕಾರದಲ್ಲಿರುವಾಗ ಬಂಜಾರ ಸಮಾಜದ ಸಂಘದ ಮೇಲೆ ತೊರದ ಕಾಳಜಿ ಇವಾಗ ಏಕೆ ಎಂದು ಬಹಿರಂಗ ಪಡಿಸಬೇಕು, ಸಮಾಜಕ್ಕೆ ಅವರು ನೀಡುತ್ತಿರುವ ಸಂದೇಶವಾದರು ಏನು, ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘಕ್ಕೆ ರಾಜ್ಯ ಗೌರವಾಧ್ಯಕ್ಷರಾಗಿ, ಆಲ್ ಇಂಡಿಯನ್‌ಬಂಜಾರ ಸೇವಾ ಸಂಘದ ರಾಷ್ಟ್ರೀಯ ಅಧ್ಯಕ್ಷರಾಗಿ ಎರಡು ಸಂಘಟನೆಗಳ ನೊಂದಣಿ ಬೇರೆ, ತತ್ವ, ಧ್ಯೇಯ, ಕಾರ್ಯಶೈಲಿ ಬೇರೆಯಾಗಿದ್ದರು, ಗುರುತಿಸಿಕೊಂಡಿದ್ದಾರೆ.

ಪಟ್ಟಣದಲ್ಲಿ ಕರ್ನಾಟಕ ಪ್ರದೇಶ ಬಂಜಾರ ಸಂಘದ ಪದಾಧಿಕಾರಿಗಳ ಪದಗ್ರಹಣ ಮಾಡಿಸುತ್ತಾರೆ, ಕಾರ್ಯಕ್ರಮಕ್ಕೆ ಸಂಘಟನೆಯ ಸಮಾಜದ ಅನೇಕ ಮುಖಂಡರಾದ ವಿಠಲ ಜಾಧವ, ಸುಭಾಷ್ ರಾಠೋಡ್, ರಾಮಶೆಟ್ಟಿ ಪವಾರ ಅವರನ್ನು ಆಹ್ವಾನ ನೀಡದೆ ಸರ್ವಾಧಿಕಾರಿಯಂತೆ ವರ್ತಿಸುತ್ತಿರುವುದು ಸಮಾಜಕ್ಕೆ ಮಾಡುವ ಘೋರ ಅನ್ಯಾಯವಾಗಿದೆ ಇದನ್ನು ತಾಲ್ಲೂಕು ಬಂಜಾರ ಸಮಾಜ ತೀವ್ರವಾಗಿ ಖಂಡಿಸುತ್ತದೆ ಎಂದು ಹೇಳಿದರು.

# ನಾಯಕತ್ವ ಹೈಕಮಾಂಡ್ ನಿರ್ಧಾರ: ಸಿಎಂ


• ಉದಯವಾಹಿನಿ, ಚನ್ನಮ್ಮನ ಕಿತ್ತೂರು



ನಾನು ಈಗ ಅಹಿಂದ ಸಂಘಟಿಸುತ್ತಿದ್ದೇನೆ. ಮುಂದೆ ಸತೀಶ ಜಾರಕಿಹೊಳಿ ಮಾಡ್ತಾರೆ ಎಂದಷ್ಟೇ ಯತೀಂದ್ರ ಹೇಳಿದ್ದಾರೆ. ನಾಯಕತ್ವವನ್ನು ಹೈಕಮಾಂಡ್ ತೀರ್ಮಾನಿಸುತ್ತದೆ, ನಾವಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಇಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಯತೀಂದ್ರ ಹೇಳಿಕೆಯನ್ನು ಮಾಧ್ಯಮದವರೇ ತಿರುಚಿದ್ದೀರಿ. ಅವರು ಸೈದ್ಧಾಂತಿಕವಾಗಿ ಹೇಳಿಕೆ ಕೊಟ್ಟಿದ್ದಾರೆ ಎಂದರು. ಎರಡೂವರೆ ವರ್ಷದ ಸಂಪುಟ ಪುನರ್ ರಚನೆ ಮಾಡುತ್ತೇವೆ ಎಂದು ಹೇಳಿದ್ದೇವೆ. ಹೈಕಮಾಂಡ್ 4-5 ತಿಂಗಳ ಹಿಂದೆಯೇ ಅನುಮತಿ ನೀಡಿದೆ. ಮಾಡುತ್ತೇವೆ ಎಂದರು.

# ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಮಂಗಳೂರು



ಪುತ್ತೂರಿನ ಉಪ್ಪಳಿಗೆಯಲ್ಲಿ ಈಚೆಗೆ ನಡೆದ ದೀಪೋತ್ಸವ ಕಾರ್ಯಕ್ರಮದಲ್ಲಿ ಧಾರ್ಮಿಕ ದ್ವೇಷ ಪ್ರಚೋದಿಸುವ, ಮಹಿಳೆಯರ ಘನತೆಗೆ ಧಕ್ಕೆಯುಂಟುಮಾಡುವ ರೀತಿಯಲ್ಲಿ ಭಾಷಣ ಮಾಡಿದ ಆರೋಪದ ಮೇಲೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್)ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಹಾಗೂ ಕಾರ್ಯಕ್ರಮದ ಆಯೋಜಕರ ವಿರುದ್ಧ ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲ್ಲಡ್ಕ ಪ್ರಭಾಕರ ಭಟ್ ಅವರ ಭಾಷಣವು ಯೂಟ್ಯೂಬ್ ಚಾನೆಲ್ ಒಂದರಲ್ಲಿ ಪ್ರಸಾರಗೊಂಡಿದೆ. ಧಾರ್ಮಿಕ ದ್ವೇಷ ಪ್ರಚೋದಿಸುವ, ಮಹಿಳೆಯರ ಘನತೆಗೆ ಧಕ್ಕೆ ಉಂಟುಮಾಡುವ ಹಾಗೂ ಸಾರ್ವಜನಿಕ ಶಾಂತಿಗೆ ಅಪಾಯ ಉಂಟುಮಾಡುವಂತೆ ಅವರು ಮಾತನಾಡಿದ್ದಾರೆ. ಹಿಂದೂ-ಮುಸ್ಲಿಂ ಸಮುದಾಯಗಳ ಬಗ್ಗೆ ಅವಮಾನಕಾರಿ ಹೇಳಿಕೆ ನೀಡಿದ್ದಾರೆ. ಮತದಾರರ ಸಂಖ್ಯೆಯನ್ನು ಉಲ್ಲೇಖ ಮಾಡಿ ಧಾರ್ಮಿಕ ವೈಮನಸ್ಸು ಉಂಟುಮಾಡಿದ್ದಾರೆ ಎಂದು ಆರೋಪಿಸಿ ಪುತ್ತೂರು ತಾಲ್ಲೂಕಿನ ಈಶ್ವರಿ ಪದ್ಮುಂಜ ದೂರು ನೀಡಿದ್ದರು.

ಅದರನ್ವಯ ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 79, ಸೆಕ್ಷನ್ 196 (ವಿವಿಧ ಗುಂಪುಗಳ ನಡುವೆ ದ್ವೇಷ ಹರಡುವುದು), ಸೆಕ್ಷನ್ 299 (ಉದ್ದೇಶಪೂರ್ವಕವಾಗಿ ಧಾರ್ಮಿಕ ದ್ವೇಷವನ್ನು ಹರಡುವುದು), ಸೆಕ್ಷನ್ 302 ಹಾಗೂ 3(5) ಸೆಕ್ಷನ್ ಅಡಿಯಲ್ಲಿ ಪ್ರಭಾಕರ ಭಟ್ ಮತ್ತು ಕಾರ್ಯಕ್ರಮ ಆಯೋಜಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ನಮ್ಮ ಕರ್ನಾಟಕ ಸೇನೆ ಘಟಕ ರಚನೆ, ಪದಾಧಿಕಾರಿಗಳ ಆಯ್ಕೆ

**ತಿಪ್ಪನಟಗಿ ಗ್ರಾಮ ಘಟಕದ ನೂತನ ಪದಾಧಿಕಾರಿಗಳು**

| | |
|---|---|
| ಗೌರವ ಅಧ್ಯಕ್ಷರು | ಅಂಬಪ್ಪ ತಿಪ್ಪನಟಗಿ |
| ಅಧ್ಯಕ್ಷರು | ಹಣಮಂತ್ರಾಯ ನಾಯೋಡಿ |
| ಉಪಾಧ್ಯಕ್ಷರು | ದೇವಿಂದ್ರಪ್ಪ ಝುಂಡದಕಟ್ಟಿ |
| ಪ್ರಧಾನ ಕಾರ್ಯದರ್ಶಿ | ಮಾನಪ್ಪ ಬಡಿಗೇರ |
| ಸಹ ಕಾರ್ಯದರ್ಶಿ | ಭೀಮಾಶಂಕರ |
| ಸಂಘಟನಾ ಕಾರ್ಯದರ್ಶಿ | ಗಂಗು ಹೊಟ್ಟಿ |
| ಪ್ರಧಾನ ಸಂಚಾಲಕ | ಹಣಮಂತ ಬಡಿಗೇರ |
| ಸಂಚಾಲಕ | ರಮೇಶ ದೇಸಾಯಿ |
| ಖಜಾಂಚಿ | ಅನಿಲಕುಮಾರ |

• ಉದಯವಾಹಿನಿ, ಕೆಂಭಾವಿ

ನಮ್ಮ ಕರ್ನಾಟಕ ಸೇನೆಯ ರಾಜ್ಯಧ್ಯಕ್ಷರಾದ ಶ್ರೀ ಎಂ. ಬಸವರಾಜ ಪಡುಕೋಟೆ ಹಾಗೂ ರಾಜ್ಯ ಸಂಚಾಲಕರಾದ ಭೀಮಣ್ಣ ಶಖಾಪುರ ಅವರ ಆದೇಶದ ಮೇರೆಗೆ, ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿ ಹೋಬಳಿಯ ತಿಪ್ಪನಟಗಿ ಗ್ರಾಮದಲ್ಲಿ 'ನಮ್ಮ ಕರ್ನಾಟಕ ಸೇನೆ'ಯ ಗ್ರಾಮ ಘಟಕವನ್ನು ರಚಿಸಲಾಯಿತು. ಕೆಂಭಾವಿ ಹೋಬಳಿಯ ಅಧ್ಯಕ್ಷರಾದ ಶ್ರೀ ಶರಣು ಎಸ್. ದೇವರಮನಿ, ಕಾರ್ಮಿಕ ಘಟಕದ ಅಧ್ಯಕ್ಷರಾದ ಶ್ರೀ ಗುರುರಾಜ ಎಸ್. ಅಂಗಡಿ ಅವರ ಸಮುಖದಲ್ಲಿ ಸಭೆ ನಡೆಸಿ, ಗ್ರಾಮ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.



ಉದಯವಾಹಿನಿ ಚಿತ್ರ

**ಸದಸ್ಯರುಗಳು:** ಪರಮಣ್ಣ ದೊಡ್ಡಮನಿ, ಕೃಷ್ಣ ದೇಸಾಯಿ, ರಮೇಶ ಸೂಗೂರು, ಯಂಕಪ್ಪ ಹೊಟ್ಟಿ, ಉಮೇಶ ಚಿಡಿಬಿ, ಮುದಿನಂದಪ್ಪ ಅಂಜುಳ, ಉದ್ದೊಡ್ಡಪ್ಪ ಚಿಡಿಬಿ, ಭೀಮಣ್ಣ ಹೊಟ್ಟಿ, ಮೌನೇಶ ಹಡಪದ, ಮಹಿಬೂಬ ಪಟೇಲ್, ನಿಂಗು ಸೂಗೂರು, ಹಣಮಂತ್ರಾಯ ಕೊಲಕುಂದಿ, ವೆಂಕಟೇಶ ಅಮ್ಮಾಪೂರ ಮತ್ತು ನಿಂಗಪ್ಪ ಚಿಡಿಬಿ ಅವರುಗಳನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

# ಜೆಜೆಎಂನಿಂದ ಹಾಳಾದ ರಸ್ತೆಗಳು

• ಉದಯವಾಹಿನಿ, ಗುಳೇದಗುಡ್ಡ

ಪಟ್ಟಣದಲ್ಲಿ ಎರಡನೇ ಹಂತದ 24/7 ಕುಡಿಯುವ ನೀರಿನ ಯೋಜನೆಯಾದ ಜಲಜೀವನ್ ಮಷಿನ್ ಸಾಕಾರಗೊಳಿಸಲು ಪಟ್ಟಣದ ಶೇ 90ರಷ್ಟು ಪ್ರಮುಖ ರಸ್ತೆಗಳನ್ನು ಅಗೆದು ಪೈಪ್ ಲೈನ್ ಹಾಕಲಾಗಿದ್ದು ಅಗೆದ ರಸ್ತೆಯನ್ನು ಮುಚ್ಚದೇ ಹಾಗೆ ಬಿಟ್ಟಿದ್ದು ಬೈಕ್ ಹೋಗದಷ್ಟು ತೊಂದರೆಯಾಗಿದೆ. ಬೇಗನೆ ದುರಸ್ತಿಮಾಡಬೇಕೆಂದು ಪಟ್ಟಣದ ನಾಗರಿಕರು ಆಗ್ರಹಿಸಿದ್ದಾರೆ. ಸಾರ್ವಜನಿಕವಾಗಿ ಕುಡಿಯುವ ನೀರು ನಲ್ಲಿಗಳಿಂದ ರಸ್ತೆಗೆ ಬಂದು ಅಗೆದ ರಸ್ತೆ ತುಂಬಿ ನಡೆದಾಡದ ಸ್ಥಿತಿ ನಿರ್ಮಾಣವಾಗಿದೆ. ಈಚೆಗೆ ಸುರಿದ ಮಳೆಯಿಂದಲೂ ನೀರು ರಸ್ತೆಯಲ್ಲಿ ನಿಂತು ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ. ಸಂಬಂಧಿಸಿದವರು ದುರಸ್ತಿಮಾಡಬೇಕಾದ ಅವಶ್ಯಕತೆ ಇದೆ. ಪಟ್ಟಣದ ಬನ್ನಿಕಟ್ಟಿ, ಸರ್ಕಾರಿ ಬಾಲಕಿಯರ ಕಾಲೇಜು ರಸ್ತೆ, ಮುಖ್ಯ ರಸ್ತೆ ಬಿಟ್ಟು ಇತರೆ ಪಟ್ಟಣದ ಎಲ್ಲಾ ಸಣ್ಣ ರಸ್ತೆ, ಸಂದಿಗಳನ್ನು ಅಗೆದು ಹಾಗೆಯೇ ಬಿಡಲಾಗಿ. ವಯಸ್ಕರರು, ಬೈಕ್ ಸವಾರರು, ಪಾದಚಾರಿಗಳು ನಡೆದಾಡಲು ಒಂದು ರಸ್ತೆಯಿಂದ ಇನ್ನೊಂದು ಹೋಗಲು ತೀವ್ರ ತೊಂದರೆಯಾಗಿದೆ. ಅದನ್ನು ಕೂಡಲೇ ಮುಚ್ಚಿಸಬೇಕೆಂದು ಈರಣ್ಣ ಅಲದಿ ಮುಂತಾದವರು ಆಗ್ರಹಿಸುತ್ತಾರೆ.

## ಇಂದು ವಿಚಾರಣೆಗೆ ಹಾಜರಾಗಲು ತಿಮರೋಡಿ, ಗಿರೀಶ್ ಮಟ್ಟಣ್ಣವರ್ ಸೇರಿ ನಾಲ್ವರಿಗೆ ನೋಟಿಸ್: ಜಯಂತ್ ಟಿ ಹೇಳಿದ್ದೇನು?

# ವಿಚಾರಣೆಗೆ ಹಾಜರಾಗದಿದ್ದರೆ ಬಂಧನದ ಎಚ್ಚರಿಕೆ

• ಉದಯವಾಹಿನಿ, ಬೆಳ್ತಂಗಡಿ

ರಾಜ್ಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿರುವ ಧರ್ಮಸ್ಥಳ ಅಸಹಜ ಸಾವುಗಳ ಪ್ರಕರಣಗಳ ತನಿಖೆಯಲ್ಲಿ ಮಹತ್ವದ ಬೆಳವಣಿಗೆಯಾಗಿದ್ದು, ಪ್ರಕರಣದ ಹೋರಾಟದ ನೇತೃತ್ವವಹಿಸಿರುವ ಮಹೇಶ್ ಶೆಟ್ಟಿ ತಿಮರೋಡಿ ಸೇರಿದಂತೆ ನಾಲ್ವರು ಪ್ರಮುಖ ಹೋರಾಟಗಾರರಿಗೆ ವಿಶೇಷ ತನಿಖಾ ತಂಡ ನೋಟಿಸ್ ಜಾರಿ ಮಾಡಿದೆ. ಅಕ್ಟೋಬರ್ 27ರ ಸೋಮವಾರದಂದು ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಲಾಗಿದೆ. ಸೌಜನ್ಯ ಪರ ಹೋರಾಟಗಾರರಾದ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ಜಯಂತ್ ಟಿ. ಹಾಗೂ ವಿಠಲ್ ಗೌಡ ಅವರಿಗೆ ಅ. 24ರಂದು ನೋಟಿಸ್ ಜಾರಿಗೊಳಿಸಲಾಗಿದ್ದು, ಅ. 27ರಂದು ಬೆಳಗ್ಗೆ 10:30ಕ್ಕೆ ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಹಾಜರಾಗುವಂತೆ ನಿರ್ದೇಶಿಸಲಾಗಿದೆ.

**ನೋಟಿಸ್‌ನಲ್ಲಿ ಕಠಿಣ ಎಚ್ಚರಿಕೆ:** ವಿಚಾರಣೆಗೆ ಗೈರುಹಾಜರಾದಲ್ಲಿ, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 35(3)ರ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ನೋಟಿಸ್‌ನಲ್ಲಿ ಸ್ಪಷ್ಟವಾಗಿ ಎಚ್ಚರಿಕೆ ನೀಡಲಾಗಿದೆ. ಈ ಹಿಂದೆ, ಸಾಕ್ಷಿ ಚಿನ್ನಯ್ಯ ಅವರು ತಂದಿದ್ದ ಬುರುಡೆಗೆ ಸಂಬಂಧಿಸಿದಂತೆ ಇದೇ ತಂಡವನ್ನು ಎಸ್‌ಐಟಿ ವಿಚಾರಣೆ ನಡೆಸಿತ್ತು. ಇದೀಗ ಮತ್ತೆ ವಿಚಾರಣೆಗೆ ಹಾಜರಾಗಲು ಸೂಚಿಸಿರುವುದು ತನಿಖೆಯ ತೀವ್ರತೆಯನ್ನು ಹೆಚ್ಚಿಸಿದೆ.

**ಪ್ರತಿಭಟನೆ ದಿನವೇ ವಿಚಾರಣೆಗೆ ಹೋರಾಟಗಾರರ ಆಕ್ರೋಶ:** ಅ. 27ರಂದು ಸೌಜನ್ಯ ಪರ ಹೋರಾಟಗಾರರು ಬೆಳ್ತಂಗಡಿ ತಾಲ್ಲೂಕು ಕಚೇರಿ ಎದುರು ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಲು ಮತ್ತು ಸಹಿ ಸಂಗ್ರಹ ಅಭಿಯಾನದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲು ಕಾರ್ಯಕ್ರಮ ನಿಗದಿಪಡಿಸಿದ್ದರು. ಇದೇ ದಿನಾಂಕದಂದೇ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.



ಎಸ್‌ಐಟಿ ಕಚೇರಿಗೆ ಬರುವಂತೆ ನೋಟಿಸ್

### ಹೋರಾಟಗಾರರ ಆಕ್ರೋಶಕ್ಕೆ ಕಾರಣ

**ಧರ್ಮಸ್ಥಳ ಅಸಹಜ ಸಾವುಗಳ ತನಿಖೆಯಲ್ಲಿ ಮಹತ್ವದ ಬೆಳವಣಿಗೆಯಾಗಿದ್ದು, ಸೌಜನ್ಯ ಪರ ಹೋರಾಟಗಾರರಾದ ಮಹೇಶ್ ಶೆಟ್ಟಿ ತಿಮರೋಡಿ ಸೇರಿದಂತೆ ನಾಲ್ವರಿಗೆ ಎಸ್‌ಐಟಿ ನೋಟಿಸ್ ಜಾರಿ ಮಾಡಿದೆ. ಅ.27ರಂದು ವಿಚಾರಣೆಗೆ ಹಾಜರಾಗದಿದ್ದರೆ ಕಾನೂನು ಕ್ರಮ ಎಚ್ಚರಿಕೆ ನೀಡಲಾಗಿದೆ. ಇದೇ ದಿನ ಪ್ರತಿಭಟನೆ ನಿಗದಿಪಡಿಸಿರುವುದು ಹೋರಾಟಗಾರರ ಆಕ್ರೋಶಕ್ಕೆ ಕಾರಣವಾಗಿದೆ.**

ಈ ಕುರಿತು ಪ್ರತಿಕ್ರಿಯಿಸಿದ ಹೋರಾಟಗಾರ ಜಯಂತ್ ಟಿ., ಅ. 27ರಂದು ನಾವು ಬೆಳ್ತಂಗಡಿ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ಆಯೋಜಿಸಿದ್ದೇವೆ. ಇದೇ ಸಮಯಕ್ಕೆ ಎಸ್‌ಐಟಿ ಕಚೇರಿಗೆ ಬರುವಂತೆ ನೋಟಿಸ್ ನೀಡಿರುವುದು ಸರಿಯಲ್ಲ.

### ಸಾರ್ವಜನಿಕರಿಗೆ ಮನವಿ

**ಎಸ್‌ಐಟಿ ನೋಟಿಸ್ ಬಂದಿದೆ ಎಂಬ ಕಾರಣಕ್ಕೆ ಯಾರೂ ಹೋರಾಟದಿಂದ ಹಿಂದೆ ಸರಿಯಬಾರದು ಎಂದು ಅವರು ಜನರಲ್ಲಿ ಮನವಿ ಮಾಡಿದರು. ಕೇವಲ ಎಲ್ಲೋ ಕುಳಿತು ನಾವು ನಿಮ್ಮ ಜೊತೆ ಇದ್ದೇವೆ ಎನ್ನುವುದು ಬೇಡ. ಪ್ರತಿಯೊಬ್ಬ ಸೌಜನ್ಯಪರ, ನ್ಯಾಯಪರ ಹೋರಾಟಗಾರರೂ ಅಂದು ಬೆಳ್ತಂಗಡಿಗೆ ಬರಲೇಬೇಕು. ಖುದ್ದಾಗಿ ಬಂದು ಸಹಿ ಮಾಡಿ, ನಮ್ಮ ಹೋರಾಟಕ್ಕೆ ಬಲ ತುಂಬಬೇಕು. ನಾವೆಲ್ಲರೂ ಒಟ್ಟಾಗಿದ್ದೇವೆ ಎಂದು ತೋರಿಸಿಕೊಡಬೇಕು, ಎಂದು ಅವರು ಭಾವನಾತ್ಮಕವಾಗಿ ಕರೆ ನೀಡಿದರು.**

ಎಸ್‌ಐಟಿ ನೋಟಿಸ್ ನೀಡಿರುವುದು ನಿಜ. ವಿಚಾರಣೆಗೆ ಹಾಜರಾಗದಿದ್ದರೆ ಬಂಧಿಸುವ ಬಗ್ಗೆಯೂ ತಿಳಿಸಲಾಗಿದೆ. ಹಾಗಂತ ನಮ್ಮ ಪೂರ್ವನಿಗದಿತ ಪ್ರತಿಭಟನೆಯನ್ನು ನಾವು ನಿಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಬೆಳಗ್ಗೆ ಹೋರಾಟಗಾರರೆಲ್ಲರೂ ಸೇರಿ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸುತ್ತೇವೆ. ಸ್ಥಳದಲ್ಲೇ ಸಹಿ ಸಂಗ್ರಹಿಸಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತೇವೆ. ನಮ್ಮ ಕಾರ್ಯಕ್ರಮ ಮುಗಿದ ನಂತರವೇ ನಾವು ಎಸ್‌ಐಟಿ ವಿಚಾರಣೆಗೆ ಹಾಜರಾಗುತ್ತೇವೆ ಎಂದು ಅವರು ತಮ್ಮ ನಿಲುವನ್ನು ಪ್ರಕಟಿಸಿದ್ದಾರೆ. ಹೋರಾಟವನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದಲೇ ಈ ರೀತಿ ಮಾಡಲಾಗುತ್ತಿದೆ.


ನೋಟಿಸ್ ಬಂದಿರುವುದು ಸತ್ಯ. ನೋಟಿಸ್‌ನಲ್ಲಿ ತಿಳಿಸಿರುವಂತೆ, 10:30ಕ್ಕೆ ಹಾಜರಾಗದಿದ್ದರೆ ನಮ್ಮನ್ನು ಬಂಧಿಸುವ ಅವಕಾಶ ಅವರಿಗೆ ಇರುತ್ತದೆ. ಆದರೆ, ನಾವು ಇದಕ್ಕೆ ಹೆದರುವುದಿಲ್ಲ. ನಮ್ಮ ಮನವಿ ಸಲ್ಲಿಕೆ ಕಾರ್ಯಕ್ರಮ ಮುಗಿಸಿ, ಸುಮಾರು 12 ಗಂಟೆಯ ನಂತರ ವಿಚಾರಣೆಗೆ ಹಾಜರಾಗಲು ಕಾಲಾವಕಾಶ ಕೇಳುತ್ತೇವೆ. ಒಂದು ವೇಳೆ ಅವರು ನಮ್ಮನ್ನು ಬಂಧಿಸಿದರೂ, ನಾವು ಸಂತೋಷದಿಂದ ಹೋಗಲು ಸಿದ್ಧ. ನಮ್ಮ ಹೋರಾಟ ಅತ್ಯಾಚಾರಿಗಳು, ದೇಶದ್ರೋಹಿಗಳ ವಿರುದ್ಧವಾಗಿದ್ದು, ಇದಕ್ಕಾಗಿ ಯಾವುದೇ ತ್ಯಾಗಕ್ಕೂ ನಾವು ಸಿದ್ಧರಿದ್ದೇವೆ, ಎಂದು ಅವರು ಸ್ಪಷ್ಟಪಡಿಸಿದರು.

### ಮಹಾರಾಷ್ಟ್ರದಲ್ಲಿ ವೈದ್ಯೆ ಆತ್ಮಹತ್ಯೆ ಕೇಸ್: ಬಿಜೆಪಿ ಸರಕಾರದ ಅಮಾನವೀಯ ಮುಖ ಬಯಲು: ರಾಹುಲ್ ಗಾಂಧಿ ವಾಗ್ದಾಳಿ

# ನಾಗರಿಕ ಸಮಾಜದ ಮನಃಸಾಕ್ಷಿಯನ್ನು ಅಲುಗಾಡಿಸುವ ದುರಂತ

**ಮುಂಬೈ:** ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ 29 ವರ್ಷದ ವೈದ್ಯೆಯೊಬ್ಬರು ಅತ್ಯಾಚಾರ ಮತ್ತು ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡ ಘಟನೆ ದೇಶವನ್ನೇ ಬೆಚ್ಚಿಬೀಳಿಸಿದೆ. ಈ ಘಟನೆ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಇದನ್ನು ನಾಗರಿಕ ಸಮಾಜದ ಮನಃಸಾಕ್ಷಿಯನ್ನು ಅಲುಗಾಡಿಸುವ ದುರಂತ ಎಂದು ಬಣ್ಣಿಸಿದ್ದಾರೆ. ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಈ ಬಗ್ಗೆ ಬರೆದುಕೊಂಡಿರುವ ಅವರು, ಈ ಘಟನೆಯನ್ನು ಸಂಸ್ಥಾಗತ ಹತ್ಯೆ ಎಂದು ಕರೆದಿದ್ದಾರೆ. ಸಾರ್ವಜನಿಕರನ್ನು ರಕ್ಷಿಸಬೇಕಾದ ಸರಕಾರವೇ ಈ ಅಮಾಯಕ ಮಹಿಳೆಯ ಮೇಲೆ ಅತ್ಯಾಚಾರ ಮತ್ತು ಶೋಷಣೆಯಂತಹ ಹೀನ ಕೃತ್ಯ ಎಸಗಿದೆ ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

**ಬಿಜೆಪಿ ಸರಕಾರದ ಅಮಾನವೀಯ ಮುಖ:** ವರದಿಗಳ ಪ್ರಕಾರ, ಬಿಜೆಪಿ ಜೊತೆ ಗುರುತಿಸಿಕೊಂಡಿದ್ದ ಕೆಲವು ಪ್ರಭಾವಿ ವ್ಯಕ್ತಿಗಳು ಆಕೆಗೆ ಲಂಚಕ್ಕೆ ಒತ್ತಾಯಿಸಿದ್ದರಂತೆ. ಇದು ಅಪರಾಧಿಗಳನ್ನು ರಕ್ಷಿಸುವ ಸಿದ್ಧಾಂತದ ಅತ್ಯಂತ ಹೇಯ ಉದಾಹರಣೆಯಾಗಿದೆ. ಇದು ಆತ್ಮಹತ್ಯೆಯಲ್ಲ, ಇದು ಸಂಸ್ಥಾಗತ ಹತ್ಯೆ ಎಂದು ಗಾಂಧಿ ಅಭಿಪ್ರಾಯಪಟ್ಟಿದ್ದಾರೆ. ಅಧಿಕಾರವೇ ಅಪರಾಧಿಗಳಿಗೆ ರಕ್ಷಾ ಕವಚವಾದಾಗ,



**ಸರ್ಕಾರವೇ ಹೊಣೆ**

ಸತಾರಾದಲ್ಲಿ ಡಾ. ಸಂಪದಾ ಮುಂಡೆ ಎಂಬ ಯುವ ವೈದ್ಯೆ ಅತ್ಯಾಚಾರ ಮತ್ತು ಕಿರುಕುಳದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಇತರರ ನೋವನ್ನು ನಿವಾರಿಸುವ ಕನಸು ಕಂಡಿದ್ದ ಒಬ್ಬ ಪ್ರತಿಭಾವಂತ ವೈದ್ಯೆಯಾಗಿದ್ದರು. ಆದರೆ, ಭ್ರಷ್ಟ ವ್ಯವಸ್ಥೆ ಮತ್ತು ಅಧಿಕಾರದಲ್ಲಿರುವವರ ದುರುದ್ದೇಶಕ್ಕೆ ಬಲಿಯಾಗಿದ್ದಾರೆ .

– ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ನ್ಯಾಯವನ್ನು ಯಾರಿಂದ ನಿರೀಕ್ಷಿಸಲು ಸಾಧ್ಯ? ಡಾ. ಸಂಪದಾ ಅವರ ಸಾವು ಈ ಬಿಜೆಪಿ ಸರಕಾರದ ಅಮಾನವೀಯ ಮತ್ತು ಸಂವೇದನಾಶೂನ್ಯ ಮುಖವನ್ನು ಬಯಲು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ನಮಗೆ ನ್ಯಾಯ ಬೇಕು**

**ನಡೆದಿದ್ದೇನು?:** ಘಟನೆಯ ವಿವರಗಳ ಪ್ರಕಾರ, ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಆಸ್ಪತ್ರೆಯೊಂದರಲ್ಲಿ 29 ವರ್ಷದ

**ಅಮಾನವೀಯ ಮುಖ ಬಯಲು**

**ಮಹಾರಾಷ್ಟ್ರದ ಸತಾರಾದಲ್ಲಿ 29 ವರ್ಷದ ವೈದ್ಯೆಯೊಬ್ಬರು ಅತ್ಯಾಚಾರ ಮತ್ತು ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಘಟನೆಯನ್ನು ಸಂಸ್ಥಾಗತ ಹತ್ಯೆ ಎಂದು ಕರೆದಿರುವ ರಾಹುಲ್ ಗಾಂಧಿ, ಬಿಜೆಪಿ ಸರ್ಕಾರದ ಅಮಾನವೀಯ ಮುಖವನ್ನು ಬಯಲು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಬ್-ಇನ್ಸ್‌ಪೆಕ್ಟರ್ ಮತ್ತು ಇನ್ನೊಬ್ಬ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಾಗಿದೆ.**


ವೈದ್ಯೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಮ್ಮ ಅಂಗೈಯಲ್ಲಿ ಬರೆದಿದ್ದ ಡೆತ್ ನೋಟ್‌ನಲ್ಲಿ, ಅವರು ಸಬ್-ಇನ್ಸ್‌ಪೆಕ್ಟರ್ ಗೋಪಾಲ್ ಬಡಾನೆ ಅವರಿಂದ ಹಲವು ಬಾರಿ ಅತ್ಯಾಚಾರಕ್ಕೆ ಒಳಗಾಗಿದ್ದಾಗಿ ಮತ್ತು ಪ್ರಶಾಂತ್ ಬಂಕರ್ ಅವರಿಂದ ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯಕ್ಕೆ ಒಳಗಾಗಿದ್ದಾಗಿ ತಿಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಬಂಕರ್ ಅವರು ವೈದ್ಯೆ ಬಾಡಿಗೆಗೆ ವಾಸವಿದ್ದ ಮನೆಯ ಮಾಲೀಕರ ಮಗನಾಗಿದ್ದಾನೆ. ಮೂಲತಃ ಬೀಡ್ ಜಿಲ್ಲೆಯವರಾದ ಈ ವೈದ್ಯೆ, ಫಾಲ್ಟನ್ ಪಟ್ಟಣದ ಆಸ್ಪತ್ರೆಯಲ್ಲಿ ವೈದ್ಯಕೀಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ರಾತ್ರಿ ಫಾಲ್ಟನ್‌ನ ಲಾಡ್ಜ್ ಒಂದರಲ್ಲಿ ಅವರ ಮೃತದೇಹ ಪತ್ತೆಯಾಗಿದೆ. ಅದಕ್ಕೂ ಹಿಂದಿನ ದಿನ ಅವರು ಲಾಡ್ಜ್‌ಗೆ ಬಂದಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಸತಾರಾ ಎಸ್ಪಿ ತುಷಾರ್ ದೋಷಿ ಅವರು, ಸಬ್-ಇನ್ಸ್‌ಪೆಕ್ಟರ್ ಗೋಪಾಲ್ ಬಡಾನೆ ಮತ್ತು ಪ್ರಶಾಂತ್ ಬಂಕರ್ ವಿರುದ್ಧ ಅತ್ಯಾಚಾರ ಮತ್ತು ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ರಾಹುಲ್ ಗಾಂಧಿ ಅವರು, ಈ ಘಟನೆಯಲ್ಲಿ ಸಂತ್ರಸ್ತೆಯ ಕುಟುಂಬಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿದ್ದಾರೆ. ಈ ನ್ಯಾಯಕ್ಕಾಗಿ ನಡೆಯುವ ಹೋರಾಟದಲ್ಲಿ ನಾವು ಸಂತ್ರಸ್ತೆಯ ಕುಟುಂಬದೊಂದಿಗೆ ದೃಢವಾಗಿ ನಿಲ್ಲುತ್ತೇವೆ. ಭಾರತದ ಪ್ರತಿಯೊಬ್ಬ ಹೆಣ್ಣುಮಗಳಿಗಾಗಿ – ಇನ್ನು ಮುಂದೆ ಭಯ ಬೇಡ, ನಮಗೆ ನ್ಯಾಯ ಬೇಕು ಎಂದು ಹೇಳಿದ್ದಾರೆ. ಈ ಘಟನೆ ಬಿಜೆಪಿ ಸರಕಾರದ ಅಮಾನವೀಯ ಮತ್ತು ಸಂವೇದನಾಶೂನ್ಯ ಮುಖವನ್ನು ಬಯಲು ಮಾಡಿದೆ ಎಂದು ಅವರು ಪುನರುಚ್ಚರಿಸಿದ್ದಾರೆ. ಅಧಿಕಾರ ದುರುಪಯೋಗಪಡಿಸಿಕೊಂಡು ಅಪರಾಧಿಗಳನ್ನು ರಕ್ಷಿಸುವ ವ್ಯವಸ್ಥೆಯ ವಿರುದ್ಧ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ವಾಯುಭಾರ ಕುಸಿತ, ಒಡಿಶಾದಲ್ಲಿ ಚಂಡಮಾರುತದ ಎಚ್ಚರಿಕೆ

**ಭುವನೇಶ್ವರ:** ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ಚಂಡಮಾರುತ ತೀವ್ರಗೊಂಡು ಕರಾವಳಿಯತ್ತ ನಿಧಾನವಾಗಿ ಚಲಿಸುತ್ತಿದ್ದು, ಒಡಿಶಾ ಸರ್ಕಾರವು ಎಲ್ಲಾ 30 ಜಿಲ್ಲೆಗಳಲ್ಲಿ ಎಚ್ಚರಿಕೆ ಸೂಚನೆ ನೀಡಿದೆ. ಅ.28 ರ ಸಂಜೆ ಅಥವಾ ರಾತ್ರಿ ಕಾಕಿನಾಡದ ಸುತ್ತಮುತ್ತಲಿನ ಮಚಲಿಪಟ್ಟಣಂ ಕಳಿಂಗಪಟ್ಟಣಂ ನಡುವೆ ಆಂಧ್ರಪ್ರದೇಶದ ಕರಾವಳಿಯನ್ನು ಚಂಡಮಾರುತ ದಾಟುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ, ಗರಿಷ್ಠ ಗಾಳಿಯ ವೇಗ ಗಂಟೆಗೆ 90–110 ಕಿ.ಮೀ ಇರಬಹುದು.

ಅ. 28 ಮತ್ತು 29 ರಂದು ಒಡಿಶಾದಲ್ಲಿ ಅತಿ ಹೆಚ್ಚು ಮಳೆಯಾಗಲಿದೆ ಎಂದು ಅದು ಹೇಳಿದೆ. ಒಡಿಶಾದ ಹಲವಾರು ದಕ್ಷಿಣ ಮತ್ತು ಕರಾವಳಿ ಜಿಲ್ಲೆಗಳಿಗೆ ಐಎಂಡಿ ಕೆಂಪು, ಕಿತ್ತಳೆ ಮತ್ತು ಹಳದಿ ಎಚ್ಚರಿಕೆಗಳನ್ನು ನೀಡಿದೆ, ಅಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ 20 ಸೆಂ.ಮೀ.ಗಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆಯಿದೆ. ಒಡಿಶಾದ ಕಂದಾಯ ಮತ್ತು




ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ಅವರು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ರಕ್ಷಣಾ, ಪರಿಹಾರ ಕಾರ್ಯಾಚರಣೆಗಳಿಗೆ ಸಿಬ್ಬಂದಿ, ಯಂತ್ರೋಪಕರಣಗಳನ್ನು ಸಿದ್ಧಪಡಿಸಲಾಗಿದ್ದು, ಭಾರೀ ಮಳೆ, ಗಾಳಿ ಅಪ್ಪಳಿಸುವ ಸಾಧ್ಯತೆ ಇರುವುದರಿಂದ ತಗ್ಗು ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಸಚಿವರು ಹೇಳಿದರು.

ಕರಾವಳಿ ಮತ್ತು ದಕ್ಷಿಣ ಪ್ರದೇಶಗಳಲ್ಲಿನ 15 ಜಿಲ್ಲೆಗಳು ಮುಂಬರುವ ಚಂಡಮಾರುತದಿಂದ ಪ್ರಭಾವಿತವಾಗುತ್ತವೆ ಎಂದು ಅವರು ಹೇಳಿದರು.

ಏತನ್ಮಧ್ಯೆ, ಪರಿಸ್ಥಿತಿಯ ತುರ್ತುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ದಕ್ಷಿಣ ಮತ್ತು ಕರಾವಳಿ ಪ್ರದೇಶಗಳಲ್ಲಿನ ಸುಮಾರು ಏಳು ಜಿಲ್ಲೆಗಳು ಸರ್ಕಾರಿ ನೌಕರರ ರಜೆಯನ್ನು ರದ್ದುಗೊಳಿಸಿವೆ. ಕಳೆದ 6 ಗಂಟೆಗಳಲ್ಲಿ ಬಂಗಾಳಕೊಲ್ಲಿಯ ಆಗ್ನೇಯ ಭಾಗದಲ್ಲಿ ಕಾಣಿಸಿಕೊಂಡಿದ್ದ ವಾಯುಭಾರ ಕುಸಿತವು ಗಂಟೆಗೆ 10 ಕಿ.ಮೀ ವೇಗದಲ್ಲಿ ಪಶ್ಚಿಮ-ವಾಯುವ್ಯ ದಿಕ್ಕಿಗೆ ಚಲಿಸಿ, ತೀವ್ರಗೊಂಡಿದೆ.

ಇದು ಬಹುತೇಕ ಪಶ್ಚಿಮವಾಯುವ್ಯಯ ದಿಕ್ಕಿಗೆ ಚಲಿಸುವ ಸಾಧ್ಯತೆಯಿದೆ, ಮುಂದಿನ 24 ಗಂಟೆಗಳಲ್ಲಿ ನೈಋತ್ಯ, ಪಕ್ಕದ ಪಶ್ಚಿಮ–ಮಧ್ಯ ಬಂಗಾಳಕೊಲ್ಲಿಯಲ್ಲಿ ಚಂಡಮಾರುತವಾಗಿ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆಯಿದೆ. ನಂತರ, ಅದು ವಾಯುವ್ಯಯ ದಿಕ್ಕಿಗೆ, ನಂತರ ಉತ್ತರ–ವಾಯುವ್ಯಯ ದಿಕ್ಕಿಗೆ ಚಲಿಸುವ ಸಾಧ್ಯತೆಯಿದೆ, ಅ. 28 ರ ಬೆಳಿಗ್ಗೆ ತೀವ್ರ ಚಂಡಮಾರುತವಾಗಿ ತೀವ್ರಗೊಳ್ಳುವ ಸಾಧ್ಯತೆಯಿದೆ ಎಂದು ಅದು ಹೇಳಿದೆ.

## ವೈದ್ಯರ ನಿರ್ಲಕ್ಷ್ಯದಿಂದ ಎಚ್‌ಐವಿಗೆ ತುತ್ತಾದ ಐವರು ಮಕ್ಕಳು

**ರಾಂಚಿ:** ವೈದ್ಯರ ನಿರ್ಲಕ್ಷ್ಯದಿಂದ ಜಾರ್ಖಂಡ್‌ನ ಆಸ್ಪತ್ರೆ ಒಂದರಲ್ಲಿ ರಕ್ತ ಪಡೆದ ಐವರು ಮಕ್ಕಳು ಎಚ್‌ಐವಿಗೆ ತುತ್ತಾಗಿರುವ ಆಘಾತಕಾರಿ ಘಟನೆ ನಡೆದಿದೆ. ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯಲ್ಲಿ ಈ ಪ್ರಕರಣ ಬೆಳಕಿಗೆ ಬಂದಿದ್ದು, ಚೈಬಾಸಾದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ವರ್ಗಾವಣೆ ಮಾಡಿದ ನಂತರ ಏಳು ವರ್ಷದ ಥಲಸ್ಸೆಮಿಯಾ ರೋಗಿ ಸೇರಿದಂತೆ ಕನಿಷ್ಠ ಐದು ಮಕ್ಕಳಿಗೆ ಎಚ್‌ಐವಿ ಪಾಸಿಟಿವ್ ಕಾಣಿಸಿಕೊಂಡಿದೆ. ಈ ಘಟನೆಯು ರಾಜ್ಯದ ಆರೋಗ್ಯ ಇಲಾಖೆಯಾದ್ಯಂತ ಆಕ್ರೋಶ ಮತ್ತು ಭೀತಿ ಹುಟ್ಟುಹಾಕಿದ್ದು, ರಾಂಚಿಯ ಉನ್ನತ ಮಟ್ಟದ ವೈದ್ಯಕೀಯ ತಂಡವು ತಕ್ಷಣದ ತನಿಖೆಗೆ ಆದೇಶಿಸಿದೆ.

ಥಲಸ್ಸೆಮಿಯಾ ಪೀಡಿತ ಮಗುವಿನ ಕುಟುಂಬವು ಚೈಬಾಸಾ ಸದರ್ ಆಸ್ಪತ್ರೆಯ ರಕ್ತನಿಧಿಯಲ್ಲಿ ಎಚ್‌ಐವಿ ಸೋಂಕಿತ ರಕ್ತವನ್ನು ಮಗುವಿಗೆ ನೀಡಲಾಗಿತ್ತು. ಮೊದಲನೆಯದಾಗಿ ಈ ಘಟನೆ ಬೆಳಕಿಗೆ ಬಂದಿತ್ತು. ಈ ಮಕ್ಕಳು ಥಲಸ್ಸೆಮಿಯಾ ರೋಗ ಪೀಡಿತರಾಗಿದ್ದರು. ಮಕ್ಕಳಿಗೆ ಚೈಬಾಸಾದಲ್ಲಿರುವ ಸ್ಥಳೀಯ ರಕ್ತ ನಿಧಿಯಿಂದ ಎಚ್‌ಐವಿ ಸೋಂಕಿತರ ರಕ್ತ ನೀಡಲಾಗಿದೆ ಎಂದು ಏಳು ವರ್ಷದ ಮಗುವಿನ ಕುಟುಂಬ ಆರೋಪಿಸಿದೆ. ರಾಂಚಿಯ ಐದು ಸದಸ್ಯರ ವೈದ್ಯಕೀಯ ತಂಡವು ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿದೆ. ಮಕ್ಕಳಿಗೆ ಸೋಂಕಿತ ರಕ್ತ ಹೇಗೆ ದೊರೆತಿದೆ ಎಂಬುದನ್ನು ಕಂಡುಹಿಡಿಯಲು ಜಾರ್ಖಂಡ್ ಸರ್ಕಾರ ವೈದ್ಯಕೀಯ ತಂಡವನ್ನು ರಚಿಸಿದೆ.


ತಂಡದ ತಪಾಸಣೆಯ ಸಮಯದಲ್ಲಿ ಥಲಸ್ಸೆಮಿಯಾದಿಂದ ಬಳಲುತ್ತಿರುವ ಬಾಲಕನ ಜತೆ ಇನ್ನೂ ನಾಲ್ಕು ಮಕ್ಕಳು ಎಚ್‌ಐವಿ–ಪಾಸಿಟಿವ್ ಎಂದು ಕಂಡುಬಂದಿದ್ದು, ಒಟ್ಟು ಪೀಡಿತ ಅಪ್ರಾಪ್ತ ಮಕ್ಕಳ ಸಂಖ್ಯೆ ಐದಕ್ಕೆ ಏರಿದೆ. ಎಲ್ಲಾ ಮಕ್ಕಳು ಒಂದೇ ಆಸ್ಪತ್ರೆಯಲ್ಲಿ ರಕ್ತ ಪಡೆದಿದ್ದರು.

ಆರಂಭಿಕ ತನಿಖೆಯಲ್ಲಿ ಥಲಸ್ಸೆಮಿಯಾ ರೋಗಿಗೆ ಕಲುಷಿತ ರಕ್ತವನ್ನು ವರ್ಗಾವಣೆ ಮಾಡಲಾಗಿದೆ ಎಂದು ತಿಳಿದುಬಂದಿದೆ. ತನಿಖೆಯ ಸಮಯದಲ್ಲಿ ರಕ್ತ ಬ್ಯಾಂಕಿನಲ್ಲಿ ಕೆಲವು ವ್ಯತ್ಯಾಸಗಳು ಪತ್ತೆಯಾಗಿದ್ದು, ಅವುಗಳನ್ನು ಪರಿಹರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಡಾ.ದಿನೇಶ್‌ಕುಮಾರ್ ತಿಳಿಸಿದ್ದಾರೆ. ಮೊದಲ ಸೋಂಕಿತ ಮಗುವಿನ ಕುಟುಂಬವು ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರಕ್ಕೆ ದೂರು ನೀಡಿದ್ದು, ನ್ಯಾಯವನ್ನು ಕೋರಿದೆ. ಸ್ಥಳೀಯ ಪ್ರತಿನಿಧಿಗಳು ಸಹ ಉನ್ನತ ಮಟ್ಟದ ತನಿಖೆಗೆ ಒತ್ತಾಯಿಸಿದ್ದಾರೆ.

## ಕರ್ನೂಲ್ ಬಸ್ ಬೆಂಕಿ ದುರಂತಕ್ಕೆ ಬ್ಯಾಟರಿಗಳು ಸ್ಫೋಟಗೊಂಡಿದ್ದೇ ಕಾರಣ : ಪ್ರಾಥಮಿಕ ತನಿಖೆ ವರದಿ

**ಹೈದರಾಬಾದ್:** ದೇಶವನ್ನೇ ಬೆಚ್ಚಿಬೀಳಿಸಿದ್ದ ಆಂಧ್ರಪ್ರದೇಶದ ಕರ್ನೂಲ್ ಬಳಿ ಸಂಭವಿಸಿದ ಭೀಕರ ಬಸ್ ದುರಂತಕ್ಕೆ 12 ಕೆವಿ ಸಾಮರ್ಥ್ಯದ ಬ್ಯಾಟರಿಗಳು ಸ್ಫೋಟಗೊಂಡಿದ್ದೇ ಕಾರಣ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. 20 ಪ್ರಯಾಣಿಕರು ಸಜೀವ ದಹನಗೊಂಡು, ಹಲವರು ಗಾಯಗೊಂಡಿದ್ದ ಈ ಘಟನೆಗೆ ಖಾಸಗಿ ವ್ಯಕ್ತಿಯೊಬ್ಬರು ದುಬಾರಿ ಬೆಲೆಯ ಸ್ಮಾರ್ಟ್‌ಫೋನ್‌ಗಳನ್ನು ಸಾಗಿಸುತ್ತಿದ್ದರು. ಇದು ಸ್ಫೋಟಗೊಂಡಿದೇ ಘಟನೆಗೆ ಮತ್ತೊಂದು ಕಾರಣ ಎಂದು ತನಿಖೆಯಿಂದ ತಿಳಿದುಬಂದಿದೆ. ಘಟನೆ ನಡೆದ ನಂತರ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

ಎಫ್‌ಎಸ್‌ಎಲ್ ತನಿಖಾ ವರದಿ ಈವರೆಗೂ ಅಧಿಕೃತವಾಗಿ ಹೊರಬಂದಿಲ್ಲ. ಪ್ರಾಥಮಿಕ ಮೂಲಗಳ ಪ್ರಕಾರ ಬಸ್‌ಗೆ ಅಳವಡಿಸಿದ್ದ 12ಕೆವಿ ಸಾಮರ್ಥ್ಯದ ಬ್ಯಾಟರಿ ಮತ್ತು ಸ್ಮಾರ್ಟ್‌ಫೋನ್ ಏಕಕಾಲಕ್ಕೆ ಸ್ಫೋಟಗೊಂಡಿದ್ದರಿಂದ 20 ಮಂದಿಯ ಜೀವ ಬಲಿ ತೆಗೆದುಕೊಂಡಿದೆ. ಅಪಘಾತಕ್ಕೂ ಮುನ್ನ ಅಜಾಗರೂಕತೆಯಿಂದ ಚಾಲನೆ ಮಾಡುತ್ತಿದ್ದ ದ್ವಿಚಕ್ರವಾಹನಕ್ಕೆ ಬಸ್ ಡಿಕ್ಕಿಯಾಗಿ ವಾಹನವನ್ನು ಕೆಳಗೆ ಎಳೆದುಕೊಂಡು ಹೋಗಿದ್ದರಿಂದ ಬೈಕ್‌ನ ಇಂಧನ ಟ್ಯಾಂಕ್ ಒಡೆದು ಬೆಂಕಿ ಹೊತ್ತಿಕೊಂಡಿತು. ಬಸ್‌ನಲ್ಲಿದ್ದ 19 ಪ್ರಯಾಣಿಕರು ಮತ್ತು ಬೈಕ್ ಸವಾರ ಸೇರಿದಂತೆ ಇಪ್ಪತ್ತು ಜನರು ಸಾವನ್ನಪ್ಪಿದ್ದರು. ವಿಧಿವಿಜ್ಞಾನ ತಜ್ಞರ ಪ್ರಕಾರ, ಹೈದರಾಬಾದ್‌ನಿಂದ ಬೆಂಗಳೂರಿಗೆ



ಪ್ರಯಾಣಿಸುತ್ತಿದ್ದ ಖಾಸಗಿ ಸ್ಲೀಪರ್‌ಬಸ್ ಸುಮಾರು 46 ಲಕ್ಷ ರೂ. ಮೌಲ್ಯದ 234 ಸ್ಮಾರ್ಟ್‌ಫೋನ್‌ಗಳು ಇದ್ದವು. ಇವುಗಳನ್ನು ವ್ಯಾಪಾರಿಯೊಬ್ಬರು ಲಾಜಿಸ್ಟಿಕ್ಸ್ ಸೇವೆಯ ಮೂಲಕ ಸಾಗಿಸುತ್ತಿದ್ದರು. ಬೆಂಕಿ ಪ್ರಾರಂಭವಾದ ನಂತರ ಸಾಧನಗಳೊಳಗಿನ ಲಿಥಿಯಂ–ಐಯಾನ್ ಬ್ಯಾಟರಿಗಳು ಸ್ಫೋಟಗೊಂಡು ಪ್ರಯಾಣಿಕರ ಕ್ಯಾಬಿನ್‌ನಾದ್ಯಂತ ವೇಗವಾಗಿ ಹರಡಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಬಸ್ಸಿನ ಮುಂಭಾಗದಲ್ಲಿ ಇಂಧನ ಸೋರಿಕೆ ಕಂಡುಬಂದಿದ್ದು, ಬೈಕ್ ವಾಹನದ ಕೆಳಗೆ ಸಿಲುಕಿಕೊಂಡ ನಂತರ ಬೆಂಕಿ ಹೊತ್ತಿಕೊಂಡಿದೆ. ಇದರ ಪರಿಣಾಮ ಉಂಟಾದ ಬೆಂಕಿ ಕಿಡಿಗಳು ಮತ್ತು ಇಂಧನ ಸೋರಿಕೆ ಬೆಂಕಿಗೆ ಹತ್ತಿಕೊಳ್ಳಲು ಕಾರಣವಾಯಿತು. ಅಲ್ಯೂಮಿನಿಯಂ ಶಾಖಕ್ಕೆ ಕರಗಿ, ಬೆಂಕಿಯ ವೇಗ ಹೆಚ್ಚಲು ಕಾರಣವಾಯಿತು ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ.

ಆಂಧ್ರಪ್ರದೇಶದ ಅಗ್ನಿಶಾಮಕ ಸೇವೆಗಳು ಮತ್ತು ವಿಧಿವಿಜ್ಞಾನ ಇಲಾಖೆಯ ತಜ್ಞರು ಸಲ್ಲಿಸಿರುವ ವರದಿಯ ಪ್ರಕಾರ, ಬಸ್ಸಿನ ಬ್ಯಾಟರಿ ಪ್ಯಾಕ್ ಜೊತೆಗೆ ಸ್ಮಾರ್ಟ್‌ಫೋನ್ ಸರಕು ಬೆಂಕಿ ಹರಡಲು ಕಾರಣ ಎಂದು ದೃಢಪಡಿಸಿದ್ದಾರೆ.ಈ ಅವಘಡಕ್ಕೆ ಬಸ್‌ನಲ್ಲಿದ್ದ ಎರಡು 12 ಕೆವಿ ಬ್ಯಾಟರಿಗಳೇ ಕಾರಣ, ಸ್ಮಾರ್ಟ್‌ಫೋನ್‌ಗಳ ಸರಕಲ್ಲ ಎಂದು ಹೇಳಿ, ಅವು ಹೆಚ್ಚಾಗಿ ಹಾಗೆಯೇ ಇದ್ದವು ಎಂದು ಕರ್ನೂಲ್ ರೇಂಜ್ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಕೋಯಾ ಪ್ರವೀಣ್ ಹೇಳಿದ್ದಾರೆ. ಅದು ಬೆಂಕಿಗೆ ಪ್ರಮುಖ ಕಾರಣವಲ್ಲ. ಟ್ಯಾಂಕ್ ಸಿಡಿದು ಬೆಂಕಿ ನಿಖರವಾಗಿ ಮುಖ್ಯ ನಿರ್ಗಮನ ದ್ವಾರದಲ್ಲಿ ಕಾಣಿಸಿಕೊಂಡಿತು. ಮುಖ್ಯ ನಿರ್ಗಮನ ದ್ವಾರದ ಹಿಂದೆ ಬಸ್ ಬ್ಯಾಟರಿಗಳು, ಎರಡು 12 ಕೆವಿ ಬ್ಯಾಟರಿಗಳು ಇದ್ದವು. ಈ ಬ್ಯಾಟರಿಗಳು ಸ್ಫೋಟಗೊಂಡವು ಎಂದು ಸುದ್ದಿ ಸಂಸ್ಥೆಗೆ ಅವರು ತಿಳಿಸಿದ್ದಾರೆ.

ಈ ಎರಡು ಕಾರಣಗಳ ಹೊರತಾಗಿ, ಬಸ್ಸಿನಲ್ಲಿ ಲೋಹದ ಬಣ್ಣ ಸೇರಿದಂತೆ ಹೆಚ್ಚು ದಹನಕಾರಿ ವಸ್ತುಗಳನ್ನು ಅಳವಡಿಸಲಾಗಿತ್ತು, ಇದು ಬೆಂಕಿಯನ್ನು ಮತ್ತಷ್ಟು ಹೆಚ್ಚಿಸಿತು ಎಂದು ಡಿಐಜಿ ಪ್ರವೀಣ್ ಹೇಳಿದರು. ಏತನಧ್ಯೆ ಸುಟ್ಟ ದೇಹಗಳ ಗುರುತುಗಳನ್ನು ಪತ್ತೆಹಚ್ಚಲು ಡಿಎನ್‌ಎ ಪರೀಕ್ಷೆ ನಡೆಯುತ್ತಿದ್ದು, ಸೋಮವಾರದೊಳಗೆ ಈ ಪ್ರಕ್ರಿಯೆಯು ಪೂರ್ಣಗೊಳ್ಳಬಹುದು. ಹೈದರಾಬಾದ್‌ನಿಂದ ಬೆಂಗಳೂರಿಗೆ ಹೋಗುತ್ತಿದ್ದ ಬಸ್‌ನಲ್ಲಿ 44 ಪ್ರಯಾಣಿಕರಿದ್ದರು. ಕೆಲವರು ಬೆಂಕಿಯಿಂದ ಪಾರಾಗಿದ್ದಾರೆ.

ಪ್ರಯಾಣಿಕರ ಬಾಗಿಲಿನಿಂದ ಹಾರಿ ಬೆಂಕಿಯಿಂದ ಪಾರಾದ ಬಸ್ ಚಾಲಕನನ್ನು ವಶಕ್ಕೆ ಪಡೆದಿದ್ದಾರೆ. ವಾಹನದೊಳಗೆ ಪ್ರವೇಶಿಸಲು ಸಾಧ್ಯವಿಲ್ಲ ಎಂದು ಅರಿತುಕೊಂಡ ಲಕ್ಷ್ಮಯ್ಯ ಮತ್ತು ನಾರಾಯಣ, ಟೈರ್ ಬದಲಾಯಿಸಲು ಬಳಸುವ ರಾಡ್‌ನಿಂದ ಕಿಟಕಿ ಗಾಜುಗಳನ್ನು ಒಡೆಯಲು ಪ್ರಾರಂಭಿಸಿದರು, ಇದರಿಂದಾಗಿ ಕೆಲವು ಪ್ರಯಾಣಿಕರು ಬೆಂಕಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿದೆ. ಕೆಲವು ಪ್ರೇಕ್ಷಕರು ಇನ್ನೂ ಕೆಲವು ಕಿಟಕಿ ಗಾಜುಗಳನ್ನು ಒಡೆದರು, ಇನ್ನು ಕೆಲವರು ಗಾಬರಿಗೊಂಡು ತಪ್ಪಿಸಿಕೊಳ್ಳಲು ಧಾವಿಸಿದ ಪ್ರಯಾಣಿಕರಿಂದ ಒಳಗಿನಿಂದ ಮುರಿದಿದ್ದಾರೆ. ಆದಾಗ್ಯೂ ಬೆಂಕಿಯು ಉರಿಯುತ್ತಲೇ ಇತ್ತು ಮತ್ತು ಇಡೀ ಬಸ್ಸನ್ನು ಆವರಿಸಿತ್ತು. ಇದರಿಂದ ಭಯಭೀತರಾದ ಲಕ್ಷ್ಮಯ್ಯ ಸ್ಥಳದಿಂದ ಪರಾರಿಯಾಗಿದ್ದ. ಪೊಲೀಸರು ಕರ್ನೂಲ್‌ನಿಂದ ಆತನನ್ನು ಬಂಧಿಸಿದ್ದಾರೆ. ಈತಮ ವಿರುದ್ಧ ನಿರ್ಲಕ್ಷ್ಯ ಮತ್ತು ಅತಿ ವೇಗದ ಚಾಲನೆಗಾಗಿ ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 125 (ಎ) ಮತ್ತು 106 (1) ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ .

## ಆಸಿಯಾನ್ ಶೃಂಗಸಭೆ: ಟ್ರಂಪ್ ಭಾಗಿ

**ಮಲೇಷ್ಯಾ:** ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ (ಆಸಿಯಾನ್) ಶೃಂಗಸಭೆ ಇದೇ 26ರಿಂದ ಆರಂಭವಾಗಲಿದ್ದು, 28ರ ವರೆಗೆ ನಡೆಯಲಿದೆ. 11ನೇ ಸದಸ್ಯರಾಷ್ಟ್ರವಾಗಿ ಪೂರ್ವ ತಿಮೋರ್, ಆಸಿಯಾನ್ ಸಂಘಟನೆಗೆ ಸೇರ್ಪಡೆಯಾಗಲಿದೆ. ಅಲ್ಲದೇ, ಅಮೆರಿಕ ಅಧ್ಯಕ್ಷರಾಗಿ ಎರಡನೇ ಬಾರಿಗೆ ಆಯ್ಕೆಗೊಂಡ ನಂತರ ಇದೇ ಮೊದಲ ಬಾರಿಗೆ ಏಷ್ಯಾಕ್ಕೆ ಭೇಟಿ ನೀಡುತ್ತಿರುವ ಡೊನಾಲ್ಡ್ ಟ್ರಂಪ್ ಕೂಡ ಈ ಶೃಂಗದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಶೃಂಗಸಭೆಗೆ ಪೂರ್ವಭಾವಿಯಾಗಿ, ಅಸಿಯಾನ್ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಸಭೆ ನಡೆಸಿದರು. ಸದಸ್ಯ ರಾಷ್ಟ್ರಗಳಾದ ಭಾರತ, ಚೀನಾ, ಜಪಾನ್, ಆಸ್ಟ್ರೇಲಿಯಾ, ರಷ್ಯಾ, ದಕ್ಷಿಣ ಕೊರಿಯಾ ಅಮೆರಿಕ ಪ್ರತಿನಿಧಿಗಳು ಶೃಂಗಸಭೆಯಲ್ಲಿ ಪಾಲ್ಗೊಳ್ಳುವರು. ಪ್ರಾದೇಶಿಕ ಭದ್ರತೆ, ಆರ್ಥಿಕ ಪುನಶ್ಚೇತನ ಹಾಗೂ ಸಾಗರ ಗಡಿಗೆ ಸಂಬಂಧಿಸಿದ ವ್ಯಾಜ್ಯಗಳ ಕುರಿತು ಈ ದೇಶಗಳ ನಾಯಕರು ಚರ್ಚೆ ನಡೆಸುವರು.

## ಪಾತಾಳಕ್ಕೆ ಬಿದ್ದ ಪಾಕ್ ಸಾಲದ ಪ್ರಮಾಣ 80 ಲಕ್ಷ ಕೋಟಿಗೆ ಏರಿಕೆ

**ಇಸ್ಲಾಮಾಬಾದ್:** ಆರ್ಥಿಕ ದುಸ್ಥಿತಿಗೆ ಸಿಲುಕಿರುವ ಪಾಕಿಸ್ತಾನವನ್ನ ಶೆಹಬಾಜ್ ಷರೀಫ್ ಆಡಳಿತ ಇನ್ನಷ್ಟು ಸಾಲದ ಕೂಪಕ್ಕೆ ತಳ್ಳಿದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ, ಪ್ರಸಕ್ತ ವರ್ಷ ಜೂನ್ ವೇಳೆಗೆ ಪಾಕಿಸ್ತಾನದ ಸಾಲದ ಮಿತಿ 2,86,832 ಶತಕೋಟಿ ಡಾಲರ್ ಅಂದ್ರೆ ಸುಮಾರು 80.6 ಲಕ್ಷ ಕೋಟಿ ಪಾಕಿಸ್ತಾನಿ ರೂಪಾಯಿಗೆ ಏರಿಕೆಯಾಗಿದೆ.

ಇದು ಕಳೆದ ವರ್ಷಕ್ಕೆ ಹೋಲಿಸಿದ್ರೆ 13 ಪ್ರತಿಶತದಷ್ಟು ಹೆಚ್ಚಾಗಿದೆ. ಹೌದು. ಪಾಕಿಸ್ತಾನದ ಹಣಕಾಸು ಸಚಿವಾಲಯ ಬಿಡುಗಡೆ ಮಾಡಿದ 2025ರ ಅಂಕಿ–ಅಂಶದ ಪ್ರಕಾರ, ಜೂನ್ 2025ರ ಅಂತ್ಯದ ವೇಳೆಗೆ ಪಾಕಿಸ್ತಾನದ ಒಟ್ಟು ಸಾಲ 80.6 ಲಕ್ಷ ಕೋಟಿ ಪಾಕಿಸ್ತಾನಿ ರೂಪಾಯಿಗಳಷ್ಟಾಗಿದೆ. ಇದರಲ್ಲಿ 54.5 ಲಕ್ಷ ಕೋಟಿ ದೇಶಿಯ ಸಾಲ, 26 ಲಕ್ಷ ಕೋಟಿ ಬಾಹ್ಯ ಸಾಲ ಇದೆ. ಅಲ್ಲದೇ ದೇಶದ ಸಾಲದ ಪ್ರಮಾಣ ಜಿಡಿಪಿಗಿಂತ 70% ಏರಿಕೆಯಾಗಿದೆ ಎನ್ನಲಾಗಿದೆ.

**ಸಾಲದ ಹೊರೆ ಹೆಚ್ಚಾಗಿದ್ದೇಕೆ?:** ದೇಶಿಯ ಸಾಲವು ವರ್ಷದಿಂದ ವರ್ಷಕ್ಕೆ ಶೇ.15 ರಷ್ಟು ಏರಿಕೆಯಾಗುತ್ತಿದೆ. ಇದರೊಂದಿಗೆ ಬಾಹ್ಯ ಸಾಲವು ವಾರ್ಷಿಕ ಶೇ.6 ರಷ್ಟು ಹೆಚ್ಚಾಗುತ್ತಾ ಬಂದಿದೆ. ಐಎಂಎಫ್, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್, ಇತರ ಬಹುಪಕ್ಷೀಯ ಸಂಸ್ಥೆಗಳಿಂದಲೂ ನಿಧಿಗಳು ಹರಿದುಬಂದಿದ್ದು, ಸಾಲದ ಹೊರೆ ಹೆಚ್ಚಾಗುತ್ತ ಸಾಗಿದೆ.

## ಅಧಿಕಾರಕ್ಕೆ ಬಂದರೆ ಪಂಚಾಯತ್ ಪ್ರತಿನಿಧಿಗಳಿಗೆ 50 ಲಕ್ಷ ಪಿಂಚಣಿ, ವಿಮೆ

**ಪಾಟ್ನಾ:** ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮಹಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಪಂಚಾಯತ್ ಪ್ರತಿನಿಧಿಗಳಿಗೆ 50 ಲಕ್ಷ ಪಿಂಚಣಿ ಮತ್ತು ವಿಮಾ ರಕ್ಷಣೆ ನೀಡುವುದಾಗಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಘೋಷಣೆ ಮಾಡಿದ್ದಾರೆ. ಈಗಾಗಲೇ ಪ್ರತಿ ಮನೆಗೆ ಸರ್ಕಾರಿ ಉದ್ಯೋಗ ಭರವಸೆ ನೀಡಿದ್ದಾರೆ.

ನಾಲ್ಕು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಇದಕ್ಕೂ ಮುನ್ನ ನಡೆದ ಸುದ್ದಿಗೋಷ್ಠಿಯಲ್ಲಿ ಮೈತ್ರಿಕೂಟದ ಭರವಸೆ ಪ್ರಕಟಿಸಿದ್ದಾರೆ. ನಾವು ಮೂರು ಹಂತದ ಪಂಚಾಯತ್ ಪ್ರತಿನಿಧಿಗಳಿಗೆ ಪಿಂಚಣಿ ಯೋಜನೆ ಜಾರಿಗೆ ತರುತ್ತೇವೆ. 50 ಲಕ್ಷ ರೂ.ವರೆಗೆ ವಿಮೆ ಸಹ ಒದಗಿಸಲಾಗುವುದು.

ಪಿಡಿಎಸ್ ವಿತರಕರಿಗೆ ಗೌರವಧನ ನೀಡಲಾಗುವುದು ಹಾಗೂ ಪ್ರತಿ ಕ್ವಿಂಟಾಲ್‌ಗೆ ಮಾರ್ಜಿನ್ ಹಣ ಹೆಚ್ಚಿಸಲಾಗುವುದು. ಅಲ್ಲದೇ ಕುಂಬಾರರು, ಕಮಾರರು ಮತ್ತು ಬಡಗಿಗಳಂತಹ ಶ್ರಮಜೀವಿಗಳಿಗೆ 5 ಲಕ್ಷ ರೂಪಾಯಿಗಳ ವರೆಗೆ ಆರ್ಥಿಕ ನೆರವು ನೀಡುವುದಾಗಿ ಅವರು ಘೋಷಿಸಿದರು.



5 ವರ್ಷದಲ್ಲಿ 5 ಲಕ್ಷ ರೂ. ಏಕಕಾಲಿಕ ನೆರವು, ಸರ್ಕಾರಿ ಉದ್ಯೋಗಗಳಿಗೆ ಅನುಕಂಪದ ನೇಮಕಾತಿಗಳಿಗೆ 58 ವರ್ಷ ವಯಸ್ಸಿನ ಮಿತಿ ತೆಗೆದುಹಾಕುವುದಾಗಿಯೂ ಭರವಸೆ ನೀಡಿದ್ದಾರೆ. ಚುನಾವಣಾ ಪ್ರಚಾರ ತೀವ್ರಗೊಂಡಿದೆ ಮತ್ತು ಬಿಹಾರ ಬದಲಾವಣೆಗೆ ಹಾತೊರೆಯುತ್ತಿದೆ. ಪ್ರಸ್ತುತ ಅಧಿಕಾರದಲ್ಲಿರುವ ನಿತೀಶ್ ಕುಮಾರ್ ಸರ್ಕಾರವನ್ನು ಟೀಕಿಸಿದ ತೇಜಸ್ವಿ ಯಾದವ್, ಬಿಹಾರದಲ್ಲಿ 20 ವರ್ಷಗಳಿಂದ ನಿಷ್ಕ್ರಿಯ ಸರ್ಕಾರವಿದೆ ಮತ್ತು ಈಗ ಸಾರ್ವಜನಿಕರು ಬದಲಾವಣೆಗಾಗಿ ಹಾತೊರೆಯುತ್ತಿದ್ದಾರೆ.

ತಾನು ಎಲ್ಲಿಗೆ ಹೋದರೂ, ಎಲ್ಲಾ ಜಾತಿ ಮತ್ತು ಧರ್ಮದ ಜನರು ಅವರನ್ನು ಬೆಂಬಲಿಸಲು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ ಎಂದರು. ಜನರು ಪ್ರಸ್ತುತ ಸರ್ಕಾರದಿಂದ ಬೇಸತ್ತಿದ್ದಾರೆ ಬಿಹಾರ ಸರ್ಕಾರವನ್ನು ಬದಲಾಯಿಸಲು ಬಯಸುತ್ತಾರೆ. ಈ ಸರ್ಕಾರದ ಅಡಿಯಲ್ಲಿ ಭ್ರಷ್ಟಾಚಾರ, ಅಪರಾಧಗಳು ವ್ಯಾಪಕವಾಗಿವೆ ಮತ್ತು ಜನರು ಬಿಜೆಪಿಯನ್ನು ಅರ್ಥಮಾಡಿಕೊಂಡಿದ್ದಾರೆ ಎಂದರು.

ಪ್ರಚಾರ ಶುರುವಾದಾಗಿನಿಂದ ಬಿಹಾರ ಬದಲಾವಣೆಗಾಗಿ ಕಾತರದಿಂದ ಕಾಯುತ್ತಿದೆ. ಎನ್‌ಡಿಎ ದೃಷ್ಟಿಹೀನ ಸರ್ಕಾರ, ಭ್ರಷ್ಟ ಸರ್ಕಾರ. ಈ ಸರ್ಕಾರದಿಂದ ಜನ ಬೇಸತ್ತಿದ್ದಾರೆ. ಬಜೆಟ್‌ನಲ್ಲಿ ಬಿಹಾರಕ್ಕೆ ಬರಬೇಕಾದ ಹಣ ಗುಜರಾತ್‌ಗೆ ಹೋಗುತ್ತಿದೆ ಎಂದು ಕಿಡಿಕಾರಿದರು.

**ಬಿಜೆಪಿ, ನಿತೀಶ್ ವಿರುದ್ಧ ವಾಗ್ದಾಳಿ :** ಬಿಜೆಪಿ ಮತ್ತು ಅಮಿತ್ ಶಾ ಅವರನ್ನು ಗುರಿಯಾಗಿಸಿಕೊಂಡು ಮಾತನಾಡಿದ ತೇಜಸ್ವಿ ಯಾದವ್, ಬಿಹಾರದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಲು ಉದ್ದೇಶಪೂರ್ವಕವಾಗಿ ಅವಕಾಶ ನೀಡಲಾಗಿಲ್ಲ ಎಂದು ಹೇಳಿದರು. ಅಲ್ಲದೆ, ತಮ ಸರ್ಕಾರದ ಸಾಧನೆಗಳನ್ನು ಪಟ್ಟಿ ಮಾಡುವಾಗ, 17 ತಿಂಗಳಲ್ಲಿ ಬಹಳಷ್ಟು ಕೆಲಸಗಳನ್ನು ಮಾಡಲಾಗಿದೆ ಮತ್ತು ಚಾಚಾಜಿ ಅವರ ವಿರುದ್ಧ ತಿರುಗಿ ಬೀಳದಿದ್ದರೆ, ಹೆಚ್ಚಿನ ಕೆಲಸಗಳನ್ನು ಮಾಡಲಾಗುತ್ತಿತ್ತು ಎಂದು ಹೇಳಿದರು.

# ಉತ್ತರ ಪ್ರದೇಶ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್ ದಿಲ್ಲಿಗೆ ಭೇಟಿ

## ಜೆವಾರ್ ವಿಮಾನ ನಿಲ್ದಾಣ ಉದ್ಘಾಟನೆಗೆ ಸಿದ್ಧ; ಮೋದಿಯವರು ದಿನಾಂಕ ಕೊಡುವುದೊಂದೇ ಬಾಕಿ

**ಲಕ್ನೋ:** ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ದೆಹಲಿಗೆ ಭೇಟಿ ನೀಡಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ನವೆಂಬರ್ ಮೂರನೇ ವಾರದಲ್ಲಿ ನೋಯ್ಡಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಮೊದಲ ಹಂತವನ್ನು ಉದ್ಘಾಟಿಸಲು ಪ್ರಧಾನಿಯವರಿಂದ ದಿನಾಂಕವನ್ನು ಕೋರಿದರು.

**ವಿಮಾನ ನಿಲ್ದಾಣದ ಪ್ರಸ್ತುತ ಸ್ಥಿತಿ, ಬಾಕಿ ಇರುವ ಕಾಮಗಾರಿಗಳು, ಉದ್ಘಾಟನಾ ಸಮಾರಂಭದ ರೂಪುರೇಷೆಗಳ ಬಗ್ಗೆ ವಿವರವಾದ ಪ್ರಸ್ತುತಿ ನೀಡಲಾಯಿತು. ಈ ಸಭೆಯಲ್ಲಿ, ವಿಮಾನ ನಿಲ್ದಾಣವನ್ನು ಉತ್ತರ ಪ್ರದೇಶದ ಅಭಿವೃದ್ಧಿಯ ಸಂಕೇತ ಎಂದು ಮುಖ್ಯಮಂತ್ರಿ ಬಣ್ಣಿಸಿದರು. ನಿರ್ಮಾಣ ಕಾಮಗಾರಿಯಲ್ಲಿ ಗುಣಮಟ್ಟ ಮತ್ತು ಸಮಯಪಾಲನೆಗೆ ಆದ್ಯತೆ ನೀಡಬೇಕು ಎಂದು ಒತ್ತಿ ಹೇಳಿದರು.**

**ನವೆಂಬರ್ 25 ರಂದು ರಾಮ ಮಂದಿರದ ಮೇಲೆ ಧರ್ಮ ಧ್ವಜ**

ವಿಮಾನ ನಿಲ್ದಾಣದ ಮೊದಲ ಹಂತದ ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಾಚರಣೆಗಳು ಹೇಗೆ ಆರಂಭವಾಗಬಹುದು ಎಂಬ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಅಲ್ಲದೆ, ನವೆಂಬರ್ 25 ರಂದು ರಾಮ ಮಂದಿರದ ಮೇಲೆ ಧರ್ಮ ಧ್ವಜವನ್ನು ಹಾರಿಸುವ ಸಮಾರಂಭದಲ್ಲಿ



ಭಾಗವಹಿಸಲು ಪ್ರಧಾನಿ ಮೋದಿ ಅವರು ಅಯೋಧ್ಯೆಗೆ ಭೇಟಿ ನೀಡುವ ಸಾಧ್ಯತೆಯ ಬಗ್ಗೆಯೂ ಚರ್ಚಿಸಿದರು. ಈ ಹಿಂದೆ, ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಅವರು ಪ್ರಧಾನ ಮಂತ್ರಿಯನ್ನು ಭೇಟಿ ಮಾಡಿ, ರಾಮ ಮಂದಿರದಲ್ಲಿ ಧ್ವಜಾರೋಹಣ ಸಮಾರಂಭದಲ್ಲಿ ಭಾಗವಹಿಸಲು ಆಹ್ವಾನಿಸಿದ್ದರು. ಪ್ರಧಾನ ಮಂತ್ರಿಗಳು ಭಾಗವಹಿಸಲು ಒಪ್ಪಿಗೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ಇದಕ್ಕೂ ಮುನ್ನ, ಮುಖ್ಯಮಂತ್ರಿ ಆದಿತ್ಯನಾಥ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ನವೆಂಬರ್ 25 ರಂದು ಅಯೋಧ್ಯೆಯಲ್ಲಿ ನಡೆಯುವ ಧ್ವಜಾರೋಹಣ ಸಮಾರಂಭದಲ್ಲಿ ಭಾಗವಹಿಸುವ ಅವರ ಪ್ರಸ್ತಾವಿತ ಭೇಟಿಯ ಬಗ್ಗೆ ಚರ್ಚಿಸಿದರು. ಇಂದು ಘಾಜಿಯಾಬಾದ್‌ನಲ್ಲಿ ಯಶೋಧಾ ಮೆಡಿಸಿಟಿ ಯೋಜನೆಯ ಉದ್ಘಾಟನೆಯಲ್ಲಿ

**ಮೋದಿಯವರ ಜೊತೆ ಚರ್ಚೆ**

**ನವೆಂಬರ್ 23 ರಿಂದ 29 ರವರೆಗೆ ಲಕ್ನೋದಲ್ಲಿ ನಡೆಯಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಷ್ಟ್ರೀಯ ಜಂಬೂರಿಯ ಉದ್ಘಾಟನೆಗೆ ಮೋದಿ ಅವರನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆಹ್ವಾನಿಸಿದರು. ಅಲ್ಲದೆ, ರಾಜ್ಯದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದ ಸಮಿತಿಯು ವಿಕಸಿತ ಉತ್ತರ ಪ್ರದೇಶ-2047 ಅಭಿಯಾನಕ್ಕಾಗಿ ಸ್ವೀಕರಿಸಿದ 50 ಲಕ್ಷ ಸಲಹೆಗಳ ವರದಿಯನ್ನು ಪ್ರಧಾನ ಮಂತ್ರಿಗೆ ಹಸ್ತಾಂತರಿಸಿದರು. ಕಳೆದ ಎಂಟು ವರ್ಷಗಳಲ್ಲಿ ರಾಜ್ಯ ಸರ್ಕಾರದ ಪ್ರಮುಖ ಸಾಧನೆಗಳು, ಮುಂಬರುವ ದೊಡ್ಡ ಯೋಜನೆಗಳ ಬಗ್ಗೆಯೂ ಮಾಹಿತಿ ನೀಡಿದರು.**

ಭಾಗವಹಿಸಲು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರಾಷ್ಟ್ರ ರಾಜಧಾನಿಯಲ್ಲಿ ರಾತ್ರಿ ತಂಗಲಿದ್ದಾರೆ. ಈ ಸಮಾರಂಭದಲ್ಲಿ ರಾಷ್ಟ್ರಪತಿ ಮುರ್ಮು, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಅವರು ಉಪಸ್ಥಿತರಿರುತ್ತಾರೆ.

**ಜೇವಾರ್ ವಿಮಾನ ನಿಲ್ದಾಣದಲ್ಲಿ ಸ್ಥಳ ಪರಿಶೀಲನೆ:** ಸಿಎಂ ಆದಿತ್ಯನಾಥ್ ಅವರು ಜೇವಾರ್ ವಿಮಾನ ನಿಲ್ದಾಣದಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ದೇಶೀಯ ಟರ್ಮಿನಲ್, ಭದ್ರತಾ ವ್ಯವಸ್ಥೆಗಳು, ಸಂಚಾರ ನಿರ್ವಹಣೆ ಮತ್ತು ಉದ್ಘಾಟನಾ ಸ್ಥಳ ಸೇರಿದಂತೆ ಪ್ರಮುಖ ಸೌಲಭ್ಯಗಳ ಪ್ರಗತಿಯನ್ನು ಪರಿಶೀಲಿಸಿದರು. ಜಿಲ್ಲಾ ಮತ್ತು ಪೊಲೀಸ್ ಆಡಳಿತ, ನೋಯ್ಡಾ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ಅಧಿಕಾರಿಗಳು ಮತ್ತು ವಿಮಾನ ನಿಲ್ದಾಣದ ಕನ್ಸೆಷನರ್ ಪ್ರತಿನಿಧಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದರು.

ಯೋಜನೆಯ ಪ್ರತಿಯೊಂದು ಅಂಶವೂ ಉನ್ನತ ಗುಣಮಟ್ಟವನ್ನು ಹೊಂದಿರಬೇಕು ಮತ್ತು ಉದ್ಘಾಟನೆಗೆ ಸಿದ್ಧತೆಗಳಲ್ಲಿ ಯಾವುದೇ ಲೋಪವನ್ನು ಸಹಿಸಲಾಗುವುದಿಲ್ಲ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ವಿಕಸಿತ ಉತ್ತರ ಪ್ರದೇಶ –2047 ಅಭಿಯಾನಕ್ಕಾಗಿ ರಾಜ್ಯದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದ ಸಮಿತಿಯು 50 ಲಕ್ಷ ಸಲಹೆಗಳನ್ನು ಸ್ವೀಕರಿಸಿದೆ.

ಈ ಕುರಿತ ವರದಿಯನ್ನು ಮುಖ್ಯಮಂತ್ರಿ ಆದಿತ್ಯನಾಥ್ ಅವರು ಪ್ರಧಾನ ಮಂತ್ರಿಗಳಿಗೆ ಹಸ್ತಾಂತರಿಸಿದರು. ಕಳೆದ ಎಂಟು ವರ್ಷಗಳಲ್ಲಿ ರಾಜ್ಯ ಸರ್ಕಾರದ ಪ್ರಮುಖ ಸಾಧನೆಗಳು ಮತ್ತು ಮುಂಬರುವ ದೊಡ್ಡ ಯೋಜನೆಗಳ ಬಗ್ಗೆಯೂ ಅವರು ಪ್ರಧಾನ ಮಂತ್ರಿಗೆ ಮಾಹಿತಿ ನೀಡಿದರು.

## ಮಿನಿ ನ್ಯೂಸ್

### ಕಾರಿನಲ್ಲಿ ಗುಂಡು ಹಾರಿಸಿಕೊಂಡು ವ್ಯಕ್ತಿ ಆತ್ಮಹತ್ಯೆ

**ಲಕ್ನೋ:** ಇಲ್ಲಿನ ಹಜರತ್‌ಗಂಜ್ ಪ್ರದೇಶದಲ್ಲಿ ನಿಲ್ಲಿಸಿದ್ದ ಕಾರಿನೊಳಗೆ ವ್ಯಕ್ತಿಯೊಬ್ಬರು ಗುಂಡು ಹಾರಿಸಿಕೊಂಡು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತನನ್ನು ರಾಜಾಜಿಪುರಂ ನಿವಾಸಿ ಇಶಾನ್ ಗಾರ್ಗ್ (38) ಎಂದು ಗುರುತಿಸಲಾಗಿದೆ. ರಾತ್ರಿ 11.40ರ ಸುಮಾರಿಗೆ ಘಟನೆ ಸಂಭವಿಸಿದೆ. ಸ್ವಲ್ಪ ಸಮಯದ ನಂತರ, ಹಜರತ್‌ಗಂಜ್ ಪೊಲೀಸ್ ಠಾಣೆಗೆ ಈ ಬಗ್ಗೆ ಮಾಹಿತಿ ಬಂದಿದೆ ಎಂದು ಅವರು ತಿಳಿಸಿದ್ದಾರೆ. ಕಾರಿನ ಇಂಜಿನ್ ಚಾಲನೆಯಲ್ಲಿತ್ತು ಮತ್ತು ಚಾಲಕನ ಸೀಟಿನಲ್ಲಿ ಕುಳಿತ್ತಿದ್ದ ವ್ಯಕ್ತಿ ತಲೆಗೆ ಗುಂಡೇಟಿನ ಗಾಯವಾಗಿತ್ತು.ಅವನ ಬಲಗೈನಲ್ಲಿದ್ದ ರಿವಾಲ್ವರ್,ನಾಲ್ಕು ಲೈವ್ ಕಾಟ್ರಿಡ್ಜ್‌ಗಳನ್ನುವಶಪಡಿಸಿಕೊಳ್ಳಲಾಗಿದೆ.

ಪೊಲೀಸರ ಪ್ರಕಾರ, ಇಶಾನ್ ಗಾರ್ಗ್ ಅವರು ರಿವಾಲ್ವರ್ ಪರವಾನಗಿ ಹೊಂದಿದ್ದರು ಮೃತರ ಕುಟುಂಬಕ್ಕೆ ಮಾಹಿತಿ ನೀಡಲಾಗಿದ್ದು, ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಹೆಚ್ಚಿನ ಕಾನೂನು ವಿಧಿವಿಧಾನಗಳು ಮತ್ತು ತನಿಖೆಗಳು ನಡೆಯುತ್ತಿವೆ ಎಂದು ಪೊಲೀಸರು ತಿಳಿಸಿದ್ದಾರೆ.

### ಕರೂರ್ ಕಾಲ್ತುಳಿತ ಪ್ರಕರಣದ ತನಿಖೆ ಆರಂಭಿಸಿದ ಸಿಬಿಐ

**ನವದೆಹಲಿ:** ಕರೂರ್ ಕಾಲ್ತುಳಿತದ ಪ್ರಕರಣದ ತನಿಖೆಯನ್ನು ಸಿಬಿಐ ಆರಂಭಿಸಿದೆ. ನಟ,ರಾಜಕಾರಣಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ ರಾಜಕೀಯ ರ್‍ಯಾಲಿಯಲ್ಲಿ 41 ಜನರು ಸಾವನ್ನಪ್ಪಿದ ಕರೂರ್ ಕಾಲ್ತುಳಿತದ ತನಿಖೆಯನ್ನು ಸಿಬಿಐ ವಹಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಮಿಳುನಾಡಿನ ಕರೂರಿನ ವೇಲುಸಾಮಿಪುರಂನಲ್ಲಿರುವ ಸ್ಥಳಕ್ಕೆ ಸಿಬಿಐನ ವಿಶೇಷ ತಂಡ ಈಗಾಗಲೇ ಭೇಟಿ ನೀಡಿದೆ ಎಂದು ಅವರು ಹೇಳಿದರು. ನಿಯಮದಂತೆ, ಸಿಬಿಐ ರಾಜ್ಯ ಪೊಲೀಸರ ಎಫ್‌ಐಆರ್ ಅನ್ನು ಮರು ನೋಂದಾಯಿಸಿದೆ ಮತ್ತು ಬೆಳವಣಿಗೆಯ ಬಗ್ಗೆ ಸ್ಥಳೀಯ ನ್ಯಾಯಾಲಯಕ್ಕೆ ತಿಳಿಸಿದೆ ಎಂದು ಅವರು ಹೇಳಿದರು. ತಮಿಳಗ ವೆಟ್ರಿ ಕಳಗಂ (ಟಿವಿಕೆ) ಸ್ವತಂತ್ರ ತನಿಖೆಗಾಗಿ ಸಲ್ಲಿಸಿದ ಅರ್ಜಿಯ ಮೇರೆಗೆ ಸುಪ್ರೀಂ ಕೋರ್ಟ್ ಈ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಿದೆ. ತನಿಖೆಯನ್ನು ವಹಿಸಿಕೊಳ್ಳಲು ಹಿರಿಯ ಅಧಿಕಾರಿಯನ್ನು ನೇಮಿಸಲು, ಅಧಿಕಾರಿಯ ಸಹಾಯಕ್ಕಾಗಿ ಇತರ ಕೆಲವು ಅಧಿಕಾರಿಗಳನ್ನು ನೇಮಿಸಲು ಸುಪ್ರೀಂ ಕೋರ್ಟ್ ಸಿಬಿಐ ನಿರ್ದೇಶಕರಿಗೆ ನಿರ್ದೇಶನ ನೀಡಿತ್ತು. ಸಿಬಿಐ ತನಿಖೆಯ ಮೇಲ್ವಿಚಾರಣೆಗಾಗಿ ನ್ಯಾಯಾಲಯವು ಮಾಜಿ ಸುಪ್ರೀಂ ಕೋರ್ಟ್ ನ್ಯಾಯಾಧೀಶ ಅಜಯ್ ರಸ್ತೋಗಿ ನೇತೃತ್ವದಲ್ಲಿ ಮೂವರು ಸದಸ್ಯರ ಮೇಲ್ವಿಚಾರಣಾ ಸಮಿತಿಯನ್ನು ಸಹ ರಚಿಸಿತು.

### 2028ರ ಚುನಾವಣೆಯಲ್ಲಿ ಸ್ಪರ್ಧಿಸುವ ಆಯ್ಕೆ ನನ್ನ ಮುಂದೆ ಇದೆ

**ವಾಷಿಂಗ್ಟನ್:** ಭವಿಷ್ಯದಲ್ಲಿ ಅಧ್ಯಕ್ಷೀಯ ಚುನಾವಣೆ ಸ್ಪರ್ಧಿಸುವುದಾಗಿ ಅಮೆರಿಕದ ಮಾಜಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹೇಳಿದ್ದಾರೆ. ಬಿಬಿಸಿ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, 'ಮುಂದಿನ ವರ್ಷಗಳಲ್ಲಿ ಮಹಿಳೆಯೊಬ್ಬರು ಅಮೆರಿಕದ ಅಧ್ಯಕ್ಷರಾಗಲಿದ್ದಾರೆ. ಬಹುಶಃ ಅದು ನಾನು ಆಗಿರಬಹುದು' ಎಂದಿದ್ದಾರೆ. 'ನಾನಿನ್ನೂ ಮುಗಿಸಿಲ್ಲ' ಎಂದು ಹೇಳಿದ್ದಾರೆ.

2028ರ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಬೇಕೋ ಬೇಡವೋ ಎನ್ನುವುದರ ಬಗ್ಗೆ ನಿರ್ಧರಿಸಿಲ್ಲ ಎಂದಿರುವ ಅವರು, ಮುಂದೆ ಭಾರಿ ಸವಾಲುಗಳನ್ನು ಎದುರಿಸಬೇಕಾಗಬಹುದು ಎನ್ನುವುದನ್ನು ತಳ್ಳಿ ಹಾಕಿದ್ದಾರೆ. 'ನಾನು ನನ್ನ ಜೀವವನ್ನು ಜನರ ಸೇವೆಯಲ್ಲೇ ಸವೆಸಿದ್ದೇನೆ. ಅದು ನನ್ನ ರಕ್ತದಲ್ಲಿಯೇ ಇದೆ. ಜನ ಸೇವೆಗೆ ಅನೇಕ ಮಾರ್ಗಗಳಿವೆ. ನಾನು ಚುನಾವಣೆಗಳ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ ಎಂದು ಹೇಳಿದ್ದಾರೆ. 2024ರ ಅಧ್ಯಕ್ಷೀಯ ಚುನಾವಣೆಯಿಂದ ಜೋ ಬೈಡನ್ ಹಿಂದೆ ಸರಿದ ಬಳಿಕ ಕಮಲಾ ಅವರು ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗಿದ್ದರು. ಆದರೆ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ವಿರುದ್ಧ ಸೋಲನುಭವಿಸಿದ್ದರು.

ಈ ಬಗ್ಗೆ ಅವರು ಬರೆದಿರುವ 107 ಡೇಸ್ ಎನ್ನುವ ಪುಸ್ತಕ ಇತ್ತೀಚೆಗೆ ಬಿಡುಗಡೆಯಾಗಿದ್ದು, ಆ ಬಳಿಕ ಹಲವು ಸಂದರ್ಶನಗಳನ್ನು ನೀಡಿದ್ದಾರೆ. 2028ರ ಚುನಾವಣೆಯಲ್ಲಿ ಸ್ಪರ್ಧಿಸುವ ಆಯ್ಕೆ ನನ್ನ ಮುಂದೆ ಇದೆ. ಟ್ರಂಪ್ ವಿರುದ್ಧ ಹೋರಾಡುವುದಲ್ಲಿ ಹಾಗೂ ಚುನಾವಣೆಯಗೆ ತಯಾರಿ ನಡೆಸುವುದು ಸೇರಿದಂತೆ ಹಲವು ವಿಷಯಗಳಲ್ಲಿ ನಾನೇ ಪಕ್ಷವನ್ನು ಮುನ್ನಡೆಸುತ್ತಿದ್ದೇನೆ' ಎಂದು ಕಳೆದ ವಾರ ಅಸೋಸಿಯೇಟ್ ಪ್ರೆಸ್ (ಎಪಿ)ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದರು.

2028ರ ಚುನಾವಣೆಗೆ ಸ್ಪರ್ಧಿಸುವ ಯೋಜನೆ ಇದೆಯೇ ಎನ್ನುವ ಪ್ರಶ್ನೆಗೆ, ಆ ಬಗ್ಗೆ ಇನ್ನೂ ನಿರ್ಧರಿಸಿಲ್ಲ.

ಸ್ಪರ್ಧಿಸಲೂಬಹುದು, ಇರದಿರಲೂಬಹುದು ಎಂದು ಹೇಳಿದ್ದರು.



## ನಾನೇ ನೀನಂತೆ ಹಾಡಿಗೆ 3 ಕೋಟಿ ವ್ಯೂಸ್



ಬ್ಯಾಟ್ ಸಿನಿಮಾದ ನಾನಂತೆ ನೀನಂತೆ ಹಾಡಿಗೂ ಸಹ ಸಿದ್ ಶ್ರೀರಾಮ್ ಗಾಯನವಿದೆ. ಈ ಹಾಡು ಈಗಾಗಲೇ 3 ಕೋಟಿ ವ್ಯೂಸ್ ಪಡ್ಕೊಂಡಿದೆ. ಸಿದ್ ಶ್ರೀರಾಮ್ ಚೆನ್ನೈ ಮೂಲದ ಈ ಗಾಯಕ ಕನ್ನಡದಲ್ಲಿ ಮೋಡಿ ಮಾಡ್ತಾ ಇದ್ದಾರೆ. ಇವರ ಜೇನಂತ ಧನಿಗೆ ಕನ್ನಡಿಗರು ಕಳೆದೋಗ್ತಿದ್ದಾರೆ. ಟಾಮ್ ಅಂಡ್ ಜೆರ್ರಿ ಎಂಬ ಸಿನಿಮಾದ ಹಾಯಾಗಿದೆ ಹಾಡಿಗೆ ಮೊದಲ ಬಾರಿಗೆ ಸಿದ್ ಶ್ರೀರಾಮ್ ಕನ್ನಡದಲ್ಲಿ ದನಿಯಾಗಿದ್ದರು. ಆ ಹಾಡು ಸೂಪರ್ ಡೂಪರ್ ಹಿಟ್ ಆಯ್ತು.

ಅದಾದ ನಂತರ ಲವ್ 360 ಸಿನಿಮಾದ ಜಗವೇ ನೀನು ಹಾಡಂತೂ ಸಿದ್ ಶ್ರೀರಾಮ್ ನ ಕನ್ನಡಿಗರ ಮನೆ ಮನದಲ್ಲಿ ನಿಲ್ಲುವಂತೆ ಮಾಡಿತು. ಶಶಾಂಕ್ ನಿರ್ದೇಶನದ ಲವ್ 360 ಸಿನಿಮಾ ಬಗ್ಗೆ ಜನರಿಗೆ ಗೊತ್ತಾಗಲು ಈ ಹಾಡೇ ಮೂಲಕ ಕಾರಣವಾಯ್ತು. ರಿಸೆಂಟ್ ಆಗಿ ಸಿದ್ ಶ್ರೀರಾಮ್ ಕಂಠ ಕುಣಿಸಿದ ಹಾಡು ಅಂದ್ರೆ ಅದು ಏಳುಮಲೆ ಸಿನಿಮಾದ ಯಾವಾಗ ಯಾವಾಗ ಹಾಡು.. ಆ ಹಾಡು ಸಹ ಸಖತ್ ಹಿಟ್ ಆಗಿತ್ತು.

ಇದೀಗ ಬ್ಯಾಟ್ ಸಿನಿಮಾದ ನಾನಂತೆ ನೀನಂತೆ ಹಾಡಿಗೂ ಸಹ ಸಿದ್ ಶ್ರೀರಾಮ್ ಗಾಯನವಿದೆ. ಈ ಹಾಡು ಈಗಾಗಲೇ 3 ಕೋಟಿ ವ್ಯೂಸ್ ಪಡ್ಕೊಂಡಿದೆ. ಸದ್ಯದ ಟ್ರೆಂಡ್ ನಲ್ಲಿ ಎಲ್ಲಿ ನೋಡಿದ್ರೂ ಬ್ಯಾಟ್ ಸಿನಿಮಾದ ಹಾಡೇ ಗುನುಗುನುಗಿಸ್ತಾ ಇದೆ. ಸಿದ್ ಶ್ರೀರಾಮ್ ಅವರ ದನಿಯಲ್ಲಿ ಅದೇನೋ ಲಾಲಿತ್ಯಾ ಇದೆ. ಒಮ್ಮೆ ಕೇಳ್ತಾ ಇದ್ದರೆ ಕೇಳ್ತಾನೇ ಇರಬೇಕು ಅನಿಸುತ್ತೆ. ಅದರಲ್ಲೂ ಮೆಲೋಡಿ ಹಾಡುಗಳಾಗಿದ್ರೆ ಬೇರೊಂದು ಲೋಕದಲ್ಲಿ ಕಳೆದೋಗುವಂತಿರುತ್ತೆ ಅವರ ಗಾಯನ. ಸೋನು ನಿಗಮ್ ನಂತರ ಕನ್ನಡದಲ್ಲಿ ಹೆಚ್ಚು ಆಪ್ತ ವಾಗುತ್ತಿರೋ ವಾಯ್ಸ್ ಅಂದ್ರೆ ಅದು ಸಿದ್ ಶ್ರೀರಾಮ್ ವಾಯ್ಸ್ ಅಂದ್ರೂ ತಪ್ಪಾಗದು. ಅಕ್ಟೋಬರ್ 31ರಂದು ಈ ಸಿನಿಮಾ ಬರಲಿದ್ದು, ಇದರ ಟ್ರೈಲರ್ ರಿಲೀಸ್ ಆಗಿದೆ. ಇಲ್ಲಿಯವರೆಗೂ ರೊಮ್ಯಾಂಟಿಕ್ ಲವರ್ ಬಾಯ್ ಆಗಿ ಕಾಣಿಸಿಕೊಂಡಿದ್ದ ಡಾರ್ಲಿಂಗ್ ಕೃಷ್ಣ ಇಲ್ಲಿ ಪಕ್ಕಾ ಮಾಸ್, ಆಕ್ಷನ್ ಹೀರೋ ಆಗಿ ಕಾಣಿಸಿಕೊಂಡಿದ್ದಾರೆ. ಬ್ಯಾಟ್ ಅಂದ್ರೆ ಹಾಳಾದವನು, ಕೆಟ್ಟವನು ಎಂಬ ಅರ್ಥ ಇದೆ. ಹಂಗಾದ್ರೆ ಈ ಚಿತ್ರದ ನಾಯಕ ಯಾವ ಹಾದಿ ಹಿಡಿದಿದ್ದಾನೆ. ಯಾಕೆ ಅವ್ನು ಹಾಳಾದ ಎಂಬುದನ್ನ ನೀವು ಸಿನಿಮಾದಲ್ಲೇ ನೋಡಬೇಕು. ಆದ್ರೆ ಈಗ ರಿಲೀಸ್ ಆಗಿರೋ ಟ್ರೈಲರ್ ಇಂಟ್ರೆಸ್ಟಿಂಗ್ ಆಗಿದೆ.

ಸದಭಿರುಚಿಯ ಅಂಶಗಳ ಜೊತೆ ಸಿನಿಮಾ ಮಾಡ್ತಾರೆ ಎಂಬ ನಂಬುಗೆ ಸಿನಿರಸಿಕರಲ್ಲಿ ಇರೋದ್ರಿಂದ ಬ್ಯಾಟ್ ಸಹ ಒಂದೊಳ್ಳೆಯ ಸಿನಿಮಾ ಆಗುವ ಸೂಚನೆಯನ್ನ ಕೊಡ್ತಾ ಇದೆ. ಕನ್ನಡ ಚಿತ್ರರಂಗಕ್ಕೆ ಮತ್ತೊಂದು ಹಿಟ್ ಸಿನಿಮಾ ಸಿಗಲಿದ್ಯಾ ಅಂತ ಕಾದು ನೋಡಬೇಕು.

## ಬಲೂಚಿಸ್ತಾನ್ ಪರ ಬ್ಯಾಟಿಂಗ್

## ಪಾಕ್‌ನಿಂದ ಸಲ್ಮಾನ್ ಖಾನ್‌ಗೆ ಟೆರರ್ ಪಟ್ಟ



ಪಾಕಿಸ್ತಾನದ ಮಾಧ್ಯಮ ವರದಿಗಳ ಪ್ರಕಾರ, ಬಾಲಿವುಡ್ ಸ್ಟಾರ್ ಸಲ್ಮಾನ್ ಖಾನ್ ಅವರನ್ನು ಪಾಕಿಸ್ತಾನದ 1997 ರ ಭಯೋತ್ಪಾದನಾ ನಿಗ್ರಹ ಕಾಯ್ದೆಯ ನಾಲ್ಕನೇ ವೇಳಾಪಟ್ಟಿಯ ಅಡಿಯಲ್ಲಿ ಸೇರಿಸಿದೆ. ಬಾಲಿವುಡ್ ಸೂಪರ್‌ಸ್ಟಾರ್ ಸಲ್ಮಾನ್ ಖಾನ್ ಅವರನ್ನು ಭಯೋತ್ಪಾದಕ ಎಂದು ಪಾಕಿಸ್ತಾನ ಕರೆದಿದೆ. ಇತ್ತೀಚೆಗೆ ರಿಯಾದ್‌ನಲ್ಲಿ ನಡೆದ ಜಾಯ್ ಫೋರಮ್ 2025 ಕಾರ್ಯಕ್ರಮದಲ್ಲಿ ಭಾರತೀಯ ಸಿನಿಮಾದ ಜಾಗತಿಕ ವ್ಯಾಪ್ತಿಯ ಬಗ್ಗೆ ಮಾತನಾಡುವಾಗ ನಟ ಸಲ್ಮಾನ್ ಖಾನ್ ಅವರು ಬಲೂಚಿಸ್ತಾನ್ ಮತ್ತು ಪಾಕಿಸ್ತಾನವನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದ್ದರು. ಇದರಿಂದ ಕುಪಿತಗೊಂಡಿರುವ ಪಾಕಿಸ್ತಾನ ಸರ್ಕಾರ, ನಟ ಸಲ್ಮಾನ್ ಖಾನ್‌ಗೆ 'ಭಯೋತ್ಪಾದಕ' ಎಂದು ಹಣೆಪಟ್ಟಿ ಕಟ್ಟಿದೆ.

ಪಾಕಿಸ್ತಾನದ ಮಾಧ್ಯಮ ವರದಿಗಳ ಪ್ರಕಾರ, ಬಾಲಿವುಡ್ ಸ್ಟಾರ್ ಸಲ್ಮಾನ್ ಖಾನ್ ಅವರನ್ನು ಪಾಕಿಸ್ತಾನದ 1997 ರ ಭಯೋತ್ಪಾದನಾ ನಿಗ್ರಹ ಕಾಯ್ದೆಯ ನಾಲ್ಕನೇ ವೇಳಾಪಟ್ಟಿಯ ಅಡಿಯಲ್ಲಿ ಸೇರಿಸಿದೆ. ಭಯೋತ್ಪಾದನೆಯೊಂದಿಗೆ ಸಂಪರ್ಕ ಹೊಂದಿರುವ ಆರೋಪದ ಮೇಲೆ ಕಟ್ಟುನಿಟ್ಟಿನ ನಿಗಾದಲ್ಲಿರುವ ವ್ಯಕ್ತಿಗಳಿಗೆ ಈ ಕಾಯ್ದೆಯನ್ನು ಕಾಯ್ದಿರಿಸಲಾಗಿದೆ. ಪಟ್ಟಿ ಮಾಡಲಾದವರು ಚಲನೆ, ಆಸ್ತಿ ಮೇಲ್ವಿಚಾರಣೆ ಮತ್ತು ಸಂಭಾವ್ಯ ಕಾನೂನು ಕ್ರಮಗಳ ಮೇಲೆ ನಿರ್ಬಂಧಗಳನ್ನು ಎದುರಿಸಬೇಕಾಗುತ್ತದೆ. 'ಈಗ, ನೀವು ಹಿಂದಿ ಸಿನಿಮಾ ಮಾಡಿ ಇಲ್ಲಿ ಬಿಡುಗಡೆ ಮಾಡಿದರೆ, ಅದು ಸೂಪರ್ ಹಿಟ್ ಆಗುತ್ತದೆ. ನೀವು ತಮಿಳು, ತೆಲುಗು ಅಥವಾ ಮಲಯಾಳಿ ಸಿನಿಮಾ ಮಾಡಿದರೆ, ನೂರಾರು ಕೋಟಿ ಗಳಿಸುತ್ತದೆ, ಏಕೆಂದರೆ ಇಲ್ಲಿ ಹಲವಾರು ದೇಶಗಳ ಜನರು ವಾಸಿಸುತ್ತಾರೆ. ಬಲೂಚಿಸ್ತಾನದ ಜನರಿದ್ದಾರೆ, ಅಫ್ಘಾನಿಸ್ತಾನದ ಜನರಿದ್ದಾರೆ, ಪಾಕಿಸ್ತಾನದ ಜನರಿದ್ದಾರೆ. ಎಲ್ಲರೂ ಇಲ್ಲಿ ಕೆಲಸ ಮಾಡುತ್ತಿದ್ದಾರೆ.' ಎಂದು ಸಲ್ಮಾನ್ ಖಾನ್ ತಮ್ಮ ಭಾಷಣದಲ್ಲಿ ಹೇಳಿದ್ದರು. ಬಲೂಚಿಸ್ತಾನವನ್ನು ಪಾಕಿಸ್ತಾನದಿಂದ ಬೇರ್ಪಡಿಸುವ ನಟ ಸಲ್ಮಾನ್ ಖಾನ್ ಅವರ ಹೇಳಿಕೆಯು ಇಸ್ಲಾಮಾಬಾದ್‌ನಿಂದ ತೀವ್ರ ಟೀಕೆಗೆ ಗುರಿಯಾಗಿದೆ, ಏಕೆಂದರೆ ಪಾಕಿಸ್ತಾನ ಬಲೂಚಿಸ್ತಾನ ಪ್ರಾಂತ್ಯವನ್ನು ತನ್ನ ದೇಶದ ಅವಿಭಾಜ್ಯ ಅಂಗವೆಂದು ಪರಿಗಣಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ, ಬಲೂಚ್ ಪ್ರತ್ಯೇಕತಾವಾದಿ ನಾಯಕರು ನಟ ಸಲ್ಮಾನ್ ಖಾನ್ ಅವರ ಮಾತುಗಳನ್ನು ಶ್ಲಾಘಿಸಿದ್ದಾರೆ. ಬಲೂಚ್ ಸ್ವಾತಂತ್ರ್ಯದ ಪ್ರಮುಖ ವಕೀಲರಾದ ಮೀರ್ ಯಾರ್ ಬಲೂಚ್, 'ನಟ ಸಲ್ಮಾನ್ ಖಾನ್ ಅವರು ಆರು ಕೋಟಿ ಬಲೂಚ್ ಜನರಿಗೆ ಸಂತೋಷ ತಂದಿದ್ದಾರೆ. ಇದು ಗುರುತು ಮತ್ತು ಮನ್ನಣೆಗಾಗಿ ನಮ್ಮ ಹೋರಾಟವನ್ನು ಗುರುತಿಸುವ 'ಮೃದು ರಾಜತಾಂತ್ರಿಕತೆ'ಯ ಕ್ರಿಯೆಯಾಗಿದೆ ಎಂದು ಅವರು ಹೇಳಿದರು.

## ನಾಲ್ಕನೇ ಶತಕ ಬಾರಿಸಿದ ರಶ್ಮಿಕಾ



ಕೂರ್ಗ್ ಬ್ಯೂಟಿ ರಶ್ಮಿಕಾ ತಾನೆಷ್ಟು ಲಕ್ಕಿ ಅಂತ ಪ್ರೂವ್ ಮಾಡಿದ್ದಾರೆ. ಮತ್ತೊಮ್ಮೆ ಸೆಂಚುರಿ ಬಾರಿಸಿದ್ದಾರೆ. ಒಂದೇ ವರ್ಷ ಸತತ 4ನೇ ಶತಕ ಬಾರಿಸಿದ್ದಾರೆ. ತನ್ಮೂಲಕ ನಾನಿದ್ದ ಕಡೆ ಲಕ್ ಇರುತ್ತೆ ಅನ್ನೋದನ್ನ ಪ್ರೂವ್ ಮಾಡಿದ್ದಾರೆ. ರಶ್ಮಿಕಾ ಸದ್ಯದ ನ್ಯಾಷನಲ್ ಕ್ರಷ್. ರಶ್ಮಿಕಾ ಇದಾರೆ ಅಂದ್ರೆ ಆ ಸಿನಿಮಾ ಸೂಪರ್ ಹಿಟ್ ಆಗುತ್ತೆ ಅನ್ನೋದು ಯಾವಾಗಲೋ ಸಾಬಿತಾಗಿದೆ. 2023ರಲ್ಲಿ ಅನಿಮಲ್ ಮೂಲಕ ಇಂಡಸ್ಟ್ರಿ ಹಿಟ್ ಕೊಟ್ರು ರಶ್ಮಿಕಾ. ಕಳೆದ ವರ್ಷ ಪುಷ್ಪ2 ಮೂಲಕ ಗ್ಲೋಬಲ್ ಹಿಟ್ ಕೊಟ್ರು. ಈ ವರ್ಷ ಛಾವ ಮೂಲಕ ಸೆನ್ಸೇಷನ್ ಕ್ರಿಯೇಟ್ ಮಾಡಿದ್ರು. ಈ ಎಲ್ಲಾ ಸಿನಿಮಾಗಳ ಗೆಲುವಿನಲ್ಲೂ ರಶ್ಮಿಕಾ ಪಾಲು ದೊಡ್ಡದಿದೆ.. ಆದ್ರೆ ರಶ್ಮಿಕಾ ಒಬ್ಬರಿಂದಾನೆ ಈ ಸಿನಿಮಾಗಳು ಹಿಟ್ ಆದ್ವಾ ಅಂದ್ರೆ ನೋ ಅಂತ್ಲೇ ಹೇಳಬೇಕು.. ಏಕೆಂದ್ರೆ ಈ ಎಲ್ಲಾ ಸಿನಿಮಾಗಳು ಹೀರೋ ಓರಿಯೆಂಟೆಡ್ ಸಿನಿಮಾಗಳು. ಹಾಗೆ ಪುಷ್ಪ-2 ಸಿನಿಮಾ ಸಹ ಐಕಾನ್ ಸ್ಟಾರ್ ಅಲ್ಲು ಅರ್ಜುನ್ ಅವ್ರಿಂದಲೇ ಗೆದ್ದ ಸಿನಿಮಾ ಅಂದ್ರೆ ತಪ್ಪಾಗದು. ಇನ್ನು ಛಾವ ಸಿನಿಮಾ ಸಹ ಹೀರೋ ಡಾಮಿನೆನ್ಸ್ ಇದ್ದ ಸಿನಿಮಾ.. ಈ ಸಿನಿಮಾ ಹೇಳಿ ಕೇಳಿ ಶಿವಾಜಿಯ ಪುತ್ರ ಸಾಂಭಾಜಿ ಮಹಾರಾಜರ ಸಾಹಸಗಾತೆಯನ್ನ ಹೇಳುವ ಸಿನಿಮಾ. ಇಲ್ಲಿ ರಶ್ಮಿಕಾ ಯೇಸುಬಾಯಿ ಪಾತ್ರದಲ್ಲಿ ಕಾಣಿಸಿಕೊಂಡಿದ್ರು ಒಳ್ಳೆಯ ಪರ್ಫಾಮ್ ಮಾಡಿದ್ರೂ ಸಹ ಅವ್ರಿಗೆ ಸಿಕ್ಕ ಸ್ಕ್ರೀನ್ ಸ್ಪೇಸ್ ಬಹಳ ಕಡಿಮೆ. ಹಾಗಾದ್ರೆ ರಶ್ಮಿಕಾ ಸಿಂಗಲ್ ಆಗಿ ಗೆದ್ದೇ ಇಲ್ವಾ ಅನ್ನೋದಕ್ಕೆ ಈಗ ಉತ್ತರ ಸಿಕ್ಕಿದೆ. ರಶ್ಮಿಕಾ ಥಾಮ ಮೂಲಕ ಹಾರರ್ ಥ್ರಿಲ್ಲರ್ ಮೂಲಕ ಧೂಳ್ ಧಮಾಕ ಎಬ್ಬಿಸಿದ್ದಾರೆ. ದೀಪಾವಳಿ ಹಬ್ಬದ ಪ್ರಯುಕ್ತ ತೆರೆಗೆ ಬಂದಿರೋ ಥಾಮ ಸಿನಿಮಾ ಮೊದಲ ನಾಲ್ಕು ದಿನಗಳಲ್ಲಿ 100 ಕೋಟಿ ಕ್ಲಬ್ ನತ್ತ ಹೆಜ್ಜೆ ಇಟ್ಟಿದೆ.


## ಫೌಜಿ ಸಿನಿಮಾದಲ್ಲಿ ಚೈತ್ರಾ ಜೆ ಆಚಾರ್



ಫೌಜಿ ಸಿನಿಮಾದಲ್ಲಿ ಚೈತ್ರಾ ಜೆ ಆಚಾರ್ ಅಭಿನಯಿಸುತ್ತಿದ್ದಾರೆ. ಪ್ರಭಾಸ್ ನಾಯಕನಾಗಿರುವ, ಹನು ರಾಘವ ಪುಡಿ ನಿರ್ದೇಶನ ಸಿನಿಮಾದಲ್ಲಿ ಕನ್ನಡತಿ ಗ್ಲೋಬಲ್ ಲೆವೆಲ್ ಸಿನಿಮಾದಲ್ಲಿ ಮಿಂಚೋ ಅವಕಾಶ ಪಡೆದಿದ್ದಾರೆ. ಫೌಜಿ ಡಾರ್ಲಿಂಗ್ ಪ್ರಭಾಸ್ ನಟನೆಯ ಸಿನಿಮಾ. ಸೀತರಾಮಂ ಖ್ಯಾತಿಯ ಹನು ರಾಘವ ಪುಡಿ ಆಕ್ಷನ್ ಕಟ್ ನಲ್ಲಿ ಈ ಸಿನಿಮಾ ಬರ್ತಾ ಇದೆ. ಸದ್ಯ ಪ್ರಭಾಸ್ ಬರ್ತಡೇಯ ಪ್ರಯುಕ್ತ ಈ ಸಿನಿಮಾ ಪೋಸ್ಟರ್ ರಿಲೀಸ್ ಆಗಿದ್ದು, ಸಖತ್ ಕುತೂಹಲ ಹುಟ್ಟಿಸಿದೆ. ವಿಶೇಷತೆ ಏನಂತಂದ್ರೆ, ನಮ್ಮ ಕನ್ನಡತಿ ಚೈತ್ರಾ ಜೆ ಆಚಾರ್ ಈ ಸಿನಿಮಾದಲ್ಲಿ ಅಭಿನಯಿಸ್ತಾ ಇರೋದು. ಸಪ್ತ ಸಾಗರದಾಚೆ ಎಲ್ಲೋ, ಟೋಬಿ ಸಿನಿಮಾಗಳ ಮೂಲಕ ತಮ್ಮ ನಟನೆಯ ತಾಕತ್ತು ಏನು ಅಂತ ತೋರಿಸಿರೋ ಚೈತ್ರಾ ಜೆ ಆಚಾರ್ ಮಾರ್ನಮಿ ಸಿನಿಮಾದಲ್ಲಿ ನಟಿಸಿದ್ದಾರೆ. ಆ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಹೀಗಿರುವಾಗಲೇ ಪ್ರಭಾಸ್ ಸಿನಿಮಾದಲ್ಲೂ ನಟಿಸೋ ಅವಕಾಶ ಸಿಕ್ಕಿರೋದು ಚೈತ್ರಾ ಖುಷಿಗೆ ಪಾರವೇ ಇಲ್ಲ ಎನ್ನುವಂತೆ ಮಾಡಿದೆ.

ಈ ಸಿನಿಮಾದ ಪಾತ್ರ ಏನು ಎಂಬುದನ್ನ ಸದ್ಯಕ್ಕೆ ಅವ್ರು ಗುಟ್ಟಾಗಿಯೇ ಇಟ್ಟಿದ್ದಾರೆ. ಆದ್ರೆ ಇದು ಗ್ಲೋಬಲ್ ಲೆವೆಲ್ ಸಿನಿಮಾ ಆಗಿರೋದ್ರಿಂದ ಸಣ್ಣ ಪಾತ್ರವಾದ್ರೂ ಸೈ ಅದು ದೊಡ್ಡ ಮಟ್ಟದಲ್ಲಿ ಎಫೆಕ್ಟ್ ಕ್ರಿಯೇಟ್ ಮಾಡೋದಂತೂ ಸತ್ಯ ಎಂಬುದು ಸಿನಿ ದುನಿಯಾದ ಟಾಕ್. ಎನಿವೇ ಬೋಲ್ಡ್ ಲುಕ್ ಗೂ ಸೈ, ಪಕ್ಕದ ಮನೆ ಹುಡುಗಿಯಂತ ಪಾತ್ರಕ್ಕೂ ಜೈ ಎನ್ನೋ ಅಪ್ಪಟ ಪ್ರತಿಭಾನ್ವಿತೆಗೆ ದೊಡ್ಡ ಮಟ್ಟದ ಮನ್ನಣೆ ಸಿಗೋದ್ರಲ್ಲಿ ಸಂದೇಹವೇ ಇಲ್ಲ.

## ಟೀಸರ್‌ನಲ್ಲೇ ಕುತೂಹಲ ಮೂಡಿಸಿದೆ ಅರ್ಜುನ್ ಯೋಗಿ ನಟನೆಯ 'ವರ್ಣ'



ಕೆಲವಾರು ಸಿನಿಮಾಗಳಲ್ಲಿ ಹಾಗೂ ಧಾರಾವಾಹಿಗಳಲ್ಲಿಯೂ ನಟಿಸಿರುವ ಅರ್ಜುನ್ ಯೋಗಿ ನಟಿಸಿರುವ ಹೊಸ ಸಿನಿಮಾ 'ವರ್ಣ' ಬಿಡುಗಡೆಗೆ ರೆಡಿಯಾಗಿದೆ. ಸಿನಿಮಾದ ಟ್ರೈಲರ್ ಇತ್ತೀಚೆಗಷ್ಟೆ ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗಿದೆ. 'ವರ್ಣ' ಸಿನಿಮಾವನ್ನು ದೇವ ಶರ್ಮ ನಿರ್ದೇಶನ ಮಾಡಿದ್ದು ಪಾವಗಡದ ಉದ್ಯಮಿ ಮಲ್ಲಿನೇನಿ ನವೀನ್ ಚೌಧರಿ ನಿರ್ಮಾಣ ಮಾಡಿದ್ದಾರೆ. ಈ ಸಿನಿಮಾ ಭಗವದ್ಗೀತೆಯ ಸಾಲೊಂದರಿಂದ ಪ್ರೇರಿತಗೊಂಡಿರುವುದು ವಿಶೇಷ. ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವ ''ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ'' ಎಂಬ ಮಾತೇ ಈ ಚಿತ್ರದ ಕಥೆಗೆ ಸ್ಫೂರ್ತಿ ಎಂದಿದ್ದಾರೆ ನಿರ್ದೇಶಕ ದೇವ ಶರ್ಮ. 'ಮೊದಲು ಇದನ್ನು ಕಿರುಚಿತ್ರ ಮಾಡಲು ಹೊರಟಿದ್ದೆವು. ಆದರೆ ಕಥೆ ಕೇಳಿದ ನಿರ್ಮಾಪಕ ಮಲ್ಲೇನೇನಿ ನವೀನ್ ಚೌಧರಿ, ಕಥೆ ಚೆನ್ನಾಗಿದೆ, ಕಿರುಚಿತ್ರ ಬೇಡ, ಎಲ್ಲಾ ಸಿನಿಮಾಗಳಂತೆಯೇ ಯಾವುದೇ ಕೊರತೆ ಬಾರದ ಹಾಗೆ ನಿರ್ಮಾಣ ಮಾಡೋಣ ಎಂದು ನಮ್ಮ ಬೆನ್ನೆಲುಬಾಗಿ ನಿಂತರು.

ಅವರಿಲ್ಲದೆ ಈ ಸಿನಿಮಾ ಸಾಧ್ಯವಾಗುತ್ತಿರಲಿಲ್ಲ' ಎಂದರು. 'ವರ್ಣ' ಸಿನಿಮಾದ ಟ್ರೈಲರ್ ಈಗಾಗಲೇ ಬಿಡುಗಡೆ ಆಗಿದ್ದು, ಆಕ್ಷನ್ ಭರಿತ ಟ್ರೈಲರ್ ಇದಾಗಿದೆ. ಸಿನಿಮಾನಲ್ಲಿ ಆಕ್ಷನ್ ಜೊತೆಗೆ ಪ್ರೇಮಕತೆ, ಅಪ್ಪ-ಮಗನ ಸೆಂಟಿಮೆಂಟ್, ಅಲ್ಲಲ್ಲಿ ಹಾಸ್ಯಗಳು ಸಹ ಇವೆ. ನಾಯಕನಾಗಿ ಅರ್ಜುನ್ ಯೋಗಿ, ನಾಯಕಿಯಾಗಿ ಭವ್ಯ ಗೌಡ, ವಿಲನ್ ಪಾತ್ರದಲ್ಲಿ ಲಂಕೇಶ್ ರಾವಣ ನಟಿಸಿದ್ದಾರೆ. ಅನೇಕ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿದೆ.

## ಅಬ್ಬರಿಸಿದ ಕರುಣ್ ನಾಯರ್




2025-26 ರ ರಣಜಿ ಟ್ರೋಫಿಯ ಎರಡನೇ ಸುತ್ತು ಅಕ್ಟೋಬರ್ 25 ರಿಂದ ಆರಂಭವಾಗಿದ್ದು, ಕರ್ನಾಟಕ ತಂಡ ಗೋವಾ ತಂಡವನ್ನು ಎದುರಿಸುತ್ತಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ಪರ33 ವರ್ಷದ ಕರುಣ್ ನಾಯರ್ ಸ್ಮರಣೀಯ ಇನ್ನಿಂಗ್ಸ್ ಆಡಿದರು. ತಂಡದ ಪರ ಅತ್ಯಧಿಕ ರನ್ ಬಾರಿಸಿದ ಕರುಣ್ 174 ರನ್ ಬಾರಿಸಿ ಅಜೇಯರಾಗಿ ಉಳಿದರು. ವಾಸ್ತವವಾಗಿ ಕೆಲವು ತಿಂಗಳ ಹಿಂದೆ ಕರುಣ್ ನಾಯರ್ ಅವರಿಗೆ ಭಾರತ ಟೆಸ್ಟ್ ತಂಡದಲ್ಲಿ ಆಡುವ ಅವಕಾಶ ಸಿಕ್ಕಿತ್ತು. ಆದರೆ ಆ ಸರಣಿಯಲ್ಲಿ ಕರುಣ್ ನಿರೀಕ್ಷಿತ ಪ್ರದರ್ಶನ ನೀಡಲಾಗಲಿಲ್ಲ. ಹೀಗಾಗಿ ಕೇವಲ ಒಂದು ಸರಣಿಯ ನಂತರ ಅವರನ್ನು ತಂಡದಿಂದ ಕೈಬಿಡಲಾಯಿತು. ಆದಾಗ್ಯೂ ಛಲ ಬಿಡದ ಕರುಣ್ ಶತಕದೊಂದಿಗೆ ಎಲ್ಲರ ಗಮನ ಸೆಳೆದಿದ್ದಾರೆ. ಗೋವಾ ವಿರುದ್ಧದ ರಣಜಿ ಪಂದ್ಯದಲ್ಲಿ ಕರುಣ್ ಕರ್ನಾಟಕ ಪರ ನಿರ್ಣಾಯಕ ಇನ್ನಿಂಗ್ಸ್ ಆಡಿದರು. ನಿರ್ಣಾಯಕ ಹಂತದಲ್ಲಿ ಶತಕ ಬಾರಿಸಿದರು. ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 65 ರನ್‌ಗಳಿಗೆ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತ್ತು, ಆದರೆ ಕರುಣ್ ನಾಯರ್ ಏಕಾಂಗಿ ಹೋರಾಟ ನಡೆಸಿ ತಂಡವನ್ನು 300 ರನ್‌ಗಳ ಗಡಿ ದಾಟಿಸಿದರು. ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡಿದ ಕರುಣ್ ನಾಯರ್ ಮೊದಲ ದಿನದಾಟದಲ್ಲಿ 138 ಎಸೆತಗಳಲ್ಲಿ 86 ರನ್ ಗಳಿಸಿ ಅಜೇಯರಾಗಿ ಉಳಿದಿದ್ದರು. ಎರಡನೇ ದಿನವೂ ತಮ್ಮ ಇನ್ನಿಂಗ್ಸ್ ಮುಂದುವರಿಸಿದ ಅವರು ಎಂಟು ಬೌಂಡರಿ ಮತ್ತು ಒಂದು ಸಿಕ್ಸರ್ ಸೇರಿದಂತೆ 163 ಎಸೆತಗಳಲ್ಲಿ ಶತಕ ಬಾರಿಸಿದರು.

## 'ಕೊನೆಯ ವಿದಾಯ'..; ಸಿಡ್ನಿಯಿಂದ ಭಾವನಾತ್ಮಕ ಪೋಸ್ಟ್ ಹಂಚಿಕೊಂಡ ರೋಹಿತ್ ಶರ್ಮಾ

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿ ಮುಕ್ತಾಯಗೊಂಡಿದೆ. ಭಾರತ ಸರಣಿಯನ್ನು 1-2 ಅಂತರದಿಂದ ಸೋತು ತನ್ನ ತವರಿಗೆ ವಾಪಸ್ಸಾಗುತ್ತಿದೆ. ಆದಾಗ್ಯೂ ಟೀಂ ಇಂಡಿಯಾದ ಇಬ್ಬರು ಅನುಭವಿ ಬ್ಯಾಟರ್‌ಗಳಾದ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿಗೆ ಇದು ಕೊನೆಯ ಆಸ್ಟ್ರೇಲಿಯಾ ಪ್ರವಾಸ ಆಗಿದ್ದ ಕಾರಣ ಈ ಸರಣಿ ಇವರಿಬ್ಬರಿಗೆ ಒಂದು ರೀತಿಯ ಭಾವನಾತ್ಮಕ ಕ್ಷಣವಾಗಿತ್ತು. ಸರಣಿ ಭಾರತದ ಕೈತಪ್ಪಿದರೂ ಕೊನೆಯ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಅದ್ಭುತ ಪ್ರದರ್ಶನ ನೀಡುವ ಮೂಲಕ ಅಭಿಮಾನಿಗಳನ್ನು ರಂಜಿಸಿದರು. ಪಂದ್ಯ ಮುಗಿದ ಬಳಿಕ ಮಾತನಾಡಿದ ಇವರಿಬ್ಬರು ಇದು ತಮ್ಮ ಕೊನೆಯ ಆಸ್ಟ್ರೇಲಿಯಾ ಪ್ರವಾಸ ಎಂಬುದನ್ನು ಖಚಿತಪಡಿಸಿದ್ದರು. ಇದೀಗ ಆಸ್ಟ್ರೇಲಿಯಾದಿಂದ ಹೊರಡುವುದಕ್ಕೂ ಮುನ್ನ ರೋಹಿತ್ ಶರ್ಮಾ ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಪೋಸ್ಟ್‌ವೊಂದನ್ನು ಹಂಚಿಕೊಳ್ಳುವ ಮೂಲಕ ಆಸ್ಟ್ರೇಲಿಯಾಕ್ಕೆ ಭಾವನಾತ್ಮಕ ವಿದಾಯ ಹೇಳಿದ್ದಾರೆ.

**ಕೊನೆಯ ಬಾರಿಗೆ ಸಿಡ್ನಿಗೆ ವಿದಾಯ:** ಆಸ್ಟ್ರೇಲಿಯಾದಿಂದ ಹೊರಡುವುದಕ್ಕೂ ಮುನ್ನ ರೋಹಿತ್ ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ವಿಮಾನ ನಿಲ್ದಾಣದಿಂದ ನಿರ್ಗಮಿಸುವ ಫೋಟೋವನ್ನು ಹಂಚಿಕೊಂಡಿದ್ದಾರೆ. ಆ ಫೋಟೋಗೆ 'ಕೊನೆಯ ಬಾರಿಗೆ ಸಿಡ್ನಿಗೆ ವಿದಾಯ' ಎಂಬ ಶೀರ್ಷಿಕೆ ಕೂಡ ನೀಡಿದ್ದಾರೆ. ರೋಹಿತ್ ಅವರ ಈ ಪೋಸ್ಟ್ ಸಾಕಷ್ಟು ವೈರಲ್ ಆಗುತ್ತಿದ್ದು, ಇದು ರೋಹಿತ್ ಅವರು ಏಕದಿನ ಕ್ರಿಕೆಟ್‌ನಿಂದ ನಿರ್ಗಮಿಸುವುದನ್ನು ಸೂಚಿಸುತ್ತಿದೆಯೇ ಅಥವಾ ಆಸ್ಟ್ರೇಲಿಯಾ ಪ್ರವಾಸದ ಹಳೆಯ ನೆನಪುಗಳನ್ನು ಮತ್ತೆ ಹುಟ್ಟುಹಾಕುತ್ತಿದೆಯೇ ಎಂದು ಅಭಿಮಾನಿಗಳು ಊಹಿಸುತ್ತಿದ್ದಾರೆ.

**ಪ್ರತಿ ಕ್ಷಣವನ್ನು ಆನಂದಿಸಿದ್ದೇನೆ:** ಕೊನೆಯ ಏಕದಿನ ಪಂದ್ಯ ಮುಗಿದ ಬಳಿಕ ಮಾತನಾಡಿದ ರೋಹಿತ್, 'ನಾವು ಕ್ರಿಕೆಟಿಗರಾಗಿ ಮತ್ತೆ ಆಸ್ಟ್ರೇಲಿಯಾಕ್ಕೆ ಬರುತ್ತೇವೆಯೇ ಅಥವಾ ಇಲ್ಲವೇ ಎಂದು ನನಗೆ ತಿಳಿದಿಲ್ಲ, ಆದರೆ ನಾನು ಪ್ರತಿ ಕ್ಷಣವನ್ನು ಆನಂದಿಸಿದ್ದೇನೆ' ಎಂದರು. 2008 ರಲ್ಲಿ ತಮ್ಮ ಮೊದಲ ಆಸ್ಟ್ರೇಲಿಯಾ ಪ್ರವಾಸವನ್ನು ನೆನಪಿಸಿಕೊಂಡ ಅವರು, SCG ಯಾವಾಗಲೂ ತಮ್ಮ ವೃತ್ತಿಜೀವನದಲ್ಲಿ ವಿಶೇಷ ಸ್ಥಾನವನ್ನು ಹೊಂದಿರುತ್ತದೆ ಎಂದ ರೋಹಿತ್ ವಿರಾಟ್ ಕೊಹ್ಲಿಗೆ ಧನ್ಯವಾದ ಅರ್ಪಿಸಿದರು. ಕಳೆದ 15 ವರ್ಷಗಳಲ್ಲಿ ಏನಾಯಿತು ಎಂಬುದನ್ನು ಮರೆತುಬಿಡಿ, ನಾನು ಯಾವಾಗಲೂ ಇಲ್ಲಿ ಆಡಲು ಇಷ್ಟಪಡುತ್ತೇನೆ ಎಂದು ರೋಹಿತ್ ಹೇಳಿದರು.



## ದಾಖಲೆಯ ಸೆಂಚುರಿ ಸಿಡಿಸಿದ ಬ್ರೂಕ್




ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಬ್ರೂಕ್ ಭರ್ಜರಿ ಶತಕ ಸಿಡಿಸಿ ಮಿಂಚಿದ್ದಾರೆ. ಮೌಂಟ್ ಮೌಂಗನುಯಿನ ಬೇ ಓವಲ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ನ್ಯೂಝಿಲೆಂಡ್ ತಂಡದ ನಾಯಕ ಮಿಚೆಲ್ ಸ್ಯಾಂಟ್ನರ್ ಬೌಲಿಂಗ್ ಆಯ್ದುಕೊಂಡಿದ್ದರು.

ಅದರಂತೆ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡವು ಉತ್ತಮ ಆರಂಭ ಪಡೆದಿರಲಿಲ್ಲ. ಕೇವಲ 33 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ಇಂಗ್ಲೆಂಡ್ ತಂಡಕ್ಕೆ ಹ್ಯಾರಿ ಬ್ರೂಕ್ ಆಸರೆಯಾಗಿ ನಿಂತರು. ಅದು ಕೂಡ ಸಿಡಿಲಬ್ಬರದ ಬ್ಯಾಟಿಂಗ್‌ನೊಂದಿಗೆ ವಿಶೇಷ. ಒಂದೆಡೆ ವಿಕೆಟ್ ಪತನಗೊಳ್ಳುತ್ತಿದ್ದರೆ, ಮತ್ತೊಂದೆಡೆ ಆಕ್ರಮಣಕಾರಿ ಬ್ಯಾಟಿಂಗ್ ಪ್ರದರ್ಶಿಸಿ ಹ್ಯಾರಿ ಬ್ರೂಕ್ ನ್ಯೂಝಿಲೆಂಡ್ ಬೌಲರ್‌ಗಳ ಬೆಂಡೆತ್ತಿದರು. ಪರಿಣಾಮ ಬ್ರೂಕ್ ಬ್ಯಾಟ್‌ನಿಂದ ಕೇವಲ 82 ಎಸೆತಗಳಲ್ಲಿ ಶತಕ ಮೂಡಿಬಂತು. ಈ ಶತಕದ ಬಳಿಕ ಕೂಡ ಆರ್ಭಟ ಮುಂದುವರೆಸಿದ ಬ್ರೂಕ್ ಇಂಗ್ಲೆಂಡ್ ತಂಡದ ಸ್ಕೋರ್ ಅನ್ನು 200ರ ಗಡಿದಾಟಿಸಿದರು.

ಕೊನೆಯ ವಿಕೆಟ್‌ವರೆಗೆ ಬ್ಯಾಟ್ ಬೀಸಿದ ಹ್ಯಾರಿ ಬ್ರೂಕ್ 101 ಎಸೆತಗಳಲ್ಲಿ 11 ಭರ್ಜರಿ ಸಿಕ್ಸ್ ಹಾಗೂ 9 ಫೋರ್‌ಗಳೊಂದಿಗೆ 135 ರನ್ ಬಾರಿಸಿದರು. ಈ ಭರ್ಜರಿ ಶತಕದ ನೆರವಿನೊಂದಿಗೆ ಇಂಗ್ಲೆಂಡ್ ತಂಡವು 35.2 ಓವರ್‌ಗಳಲ್ಲಿ 223 ರನ್‌ಗಳಿಸಿ ಆಲೌಟ್ ಆಯಿತು. ಇನ್ನು ಈ ಭರ್ಜರಿ ಶತಕದೊಂದಿಗೆ ಬ್ರೂಕ್ ಹಲವು ದಾಖಲೆಗಳನ್ನು ತಮ್ಮದಾಗಿಸಿಕೊಂಡರು.

ಅಂದರೆ ಈ ಪಂದ್ಯದಲ್ಲಿ ಇಂಗ್ಲೆಂಡ್ ಕಲೆಹಾಕಿದ್ದು 223 ರನ್‌ಗಳು. ಇದರಲ್ಲಿ ಹ್ಯಾರಿ ಬ್ರೂಕ್ ಬ್ಯಾಟ್‌ನಿಂದ ಮೂಡಿಬಂದ ಸ್ಕೋರ್ 135 ರನ್‌ಗಳು. ಈ ಮೂಲಕ ಇಂಗ್ಲೆಂಡ್ ಏಕದಿನ ಕ್ರಿಕೆಟ್ ಇತಿಹಾಸದಲ್ಲೇ ಒಟ್ಟು ಸ್ಕೋರ್‌ನ 60.53% ರನ್‌ಗಳಿಸಿದ ಮೊದಲ ನಾಯಕನೆಂಬ ದಾಖಲೆ ಬ್ರೂಕ್ ಪಾಲಾಯಿತು. ಅಷ್ಟೇ ಅಲ್ಲದೆ ನ್ಯೂಝಿಲೆಂಡ್ ವಿರುದ್ಧ ಕಿವೀಸ್ ನಾಡಿನಲ್ಲಿ ಗರಿಷ್ಠ ಸ್ಕೋರ್‌ಗಳಿಸಿದ ಆಂಗ್ಲ ನಾಯಕನೆಂಬ ಹೆಗ್ಗಳಿಕೆಯನ್ನು ತಮ್ಮದಾಗಿಸಿಕೊಂಡರು. ಇದರ ಜೊತೆಗೆ ನ್ಯೂಝಿಲೆಂಡ್ ವಿರುದ್ಧ ಏಕದಿನ ಪಂದ್ಯವೊಂದರಲ್ಲಿ 11 ಸಿಕ್ಸ್ ಸಿಡಿಸಿದ ಇಂಗ್ಲೆಂಡ್‌ನ ಮೊದಲ ಕ್ಯಾಪ್ಟನ್ ಎಂಬ ದಾಖಲೆಯನ್ನು ಕೂಡ ನಿರ್ಮಿಸಿದ್ದಾರೆ. ಒಟ್ಟಿನಲ್ಲಿ ಭರ್ಜರಿ ಸೆಂಚುರಿ ಸಿಡಿಸುವ ಮೂಲಕ ಹ್ಯಾರಿ ಬ್ರೂಕ್ ಹಲವು ದಾಖಲೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

## ಗಂಭೀರ್ ಬಲಗೈ ಬಂಟ ಕೆಕೆಆರ್ ತಂಡದ ಹೊಸ ಕೋಚ್..!



ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ಆರಂಭಕ್ಕೂ ಮುನ್ನ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ಮೇಜರ್ಸ್ ಸರ್ಜರಿ ಮಾಡುವ ಸೂಚನೆ ನೀಡಿದ್ದಾರೆ. ಅದರ ಮೊದಲ ಹೆಜ್ಜೆಯಾಗಿ ಇದೀಗ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಮುಖ್ಯ ತರಬೇತುದಾರ ಬದಲಾಗಿದ್ದಾರೆ. ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಕೋಚ್ ಸ್ಥಾನದಿಂದ ಚಂದ್ರಕಾಂತ್ ಪಂಡಿತ್ ಕೆಳಗಿಳಿದಿದ್ದು, ಅವರ ಸ್ಥಾನಕ್ಕೆ ಅಭಿಷೇಕ್ ನಾಯರ್ ಆಯ್ಕೆಯಾಗಿದ್ದಾರೆ. ಈ ಹಿಂದೆ ಅಭಿಷೇಕ್ ನಾಯರ್ ಕೆಕೆಆರ್ ತಂಡದ ಸಹಾಯಕ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದರು. ಅಷ್ಟೇ ಅಲ್ಲದೆ ಗೌತಮ್ ಗಂಭೀರ್ ಟೀಮ್ ಇಂಡಿಯಾ ತರಬೇತುದಾರರಾದ ಆರಂಭದಲ್ಲಿ ಭಾರತ ತಂಡದ ಬ್ಯಾಟಿಂಗ್ ಕೋಚ್ ಆಗಿಯೂ ಅಭಿಷೇಕ್ ನಾಯರ್ ಕಾಣಿಸಿಕೊಂಡಿದ್ದರು. ಆದರೆ ಕಳೆದ ವರ್ಷ ಅವರನ್ನು ಟೀಮ್ ಇಂಡಿಯಾದ ಬ್ಯಾಟಿಂಗ್ ಕೋಚ್ ಸ್ಥಾನದಿಂದ ವಜಾಗೊಳಿಸಲಾಗಿತ್ತು. ಇತ್ತ ಟೀಮ್ ಇಂಡಿಯಾ ಬ್ಯಾಟಿಂಗ್ ಕೋಚ್ ಸ್ಥಾನ ಕೈ ತಪ್ಪುತ್ತಿದ್ದಂತೆ ಅಭಿಷೇಕ್ ನಾಯರ್ ಐಪಿಎಲ್ ಮಧ್ಯ ಭಾಗದಲ್ಲಿ ಕೆಕೆಆರ್ ತಂಡಕ್ಕೆ ಮರಳಿದ್ದರು. ಇದಾಗ್ಯೂ ಕಳೆದ ಸೀಸನ್‌ನಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡ ಕಳಪೆ ಪ್ರದರ್ಶನವನ್ನು ಬದಲಿಸಲು ಸಾಧ್ಯವಾಗಿರಲಿಲ್ಲ. ಇದೀಗ ಕೆಕೆಆರ್ ಮುಖ್ಯ ಕೋಚ್ ಸ್ಥಾನದಿಂದ ಚಂದ್ರಕಾಂತ್ ಪಂಡಿತ್ ಕೆಳಗಿಳಿದಿದ್ದು, ಇದರ ಬೆನ್ನಲ್ಲೇ ಅಭಿಷೇಕ್ ನಾಯರ್ ಅವರಿಗೆ ಮುಖ್ಯ ಕೋಚ್ ಆಗಿ ನೇಮಿಸಲಾಗಿದೆ. ಇತ್ತ ಅಭಿಷೇಕ್ ನಾಯರ್ ಕೆಕೆಆರ್ ತಂಡ ಕೋಚ್ ಆಗುತ್ತಿದ್ದಂತೆ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದಲ್ಲಿ ಮಹತ್ವದ ಬದಲಾವಣೆ ಕಂಡು ಬರಲಿದೆ ಎಂಬ ಮಾತುಗಳು ಕೇಳಿ ಬರುತ್ತಿದೆ.

## ಗೆಲುವಿನ ಬೆನ್ನಲ್ಲೇ ಟೀಮ್ ಇಂಡಿಯಾಗೆ ಬಿಗ್ ಶಾಕ್: ಪ್ರಮುಖ ಆಟಗಾರ ಔಟ್







ಪ್ರಮುಖ ಆಟಗಾರ ಶ್ರೇಯಸ್ ಅಯ್ಯರ್ ಭಾರತ ತಂಡದಿಂದ ಹೊರಬಿದ್ದಿದ್ದಾರೆ. ಅದು ಸಹ ಮೂರು ವಾರಗಳ ಕಾಲ. ಸಿಡ್ನಿಯಲ್ಲಿ ನಡೆದ ಮೂರನೇ ಏಕದಿನ ಪಂದ್ಯದ ವೇಳೆ ಕ್ಯಾಚ್ ಹಿಡಿಯುವಾಗ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಅಲ್ಲದೆ ಅರ್ಧದಲ್ಲೇ ಮೈದಾನ ತೊರೆದಿದ್ದರು. ಇದೀಗ ಶ್ರೇಯಸ್ ಅಯ್ಯರ್ ಅವರ ವೈದ್ಯಕೀಯ ವರದಿಗಳು ಬಂದಿದ್ದು, ಈ ವರದಿಯಲ್ಲಿ ಹೆಚ್ಚಿನ ಚಿಕಿತ್ಸೆಯ ಅಗತ್ಯತೆಯನ್ನು ಸೂಚಿಸಲಾಗಿದೆ.

ಪ್ರಸ್ತುತ ಮಾಹಿತಿ ಪ್ರಕಾರ, ಶ್ರೇಯಸ್ ಅಯ್ಯರ್ ಅವರ ಎಡ ಪಕ್ಕೆಲುಬಿಗೆ ಗಂಭೀರ ಗಾಯವಾಗಿದೆ. ಹೀಗಾಗಿ ಮೂರು ವಾರಗಳ ಕಾಲ ಮೈದಾನದಿಂದ ಹೊರಗುಳಿಯುವಂತೆ ವೈದ್ಯರು ಸೂಚಿಸಿದ್ದಾರೆ ಎಂದು ವರದಿಯಾಗಿದೆ. ಹೀಗಾಗಿ ಶ್ರೇಯಸ್ ಅಯ್ಯರ್ ಶೀಘ್ರದಲ್ಲೇ ಚಿಕಿತ್ಸೆಗೆ ಒಳಗಾಗಲಿದ್ದಾರೆ.

ಅತ್ತ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಗೆ ಶ್ರೇಯಸ್ ಅಯ್ಯರ್ ಆಯ್ಕೆಯಾಗಿಲ್ಲ. ಇದಾಗ್ಯೂ ಈ ಸರಣಿಯ ಬಳಿಕ ಟೀಮ್ ಇಂಡಿಯಾ ಸೌತ್ ಆಫ್ರಿಕಾ ವಿರುದ್ಧ ಟೆಸ್ಟ್ ಹಾಗೂ ಏಕದಿನ ಸರಣಿ ಆಡಬೇಕಿದೆ. ಅದಕ್ಕೂ ಮುನ್ನ ಸಂಪೂರ್ಣ ಫಿಟ್‌ನೆಸ್‌ನೊಂದಿಗೆ ಶ್ರೇಯಸ್ ಅಯ್ಯರ್ ತಂಡಕ್ಕೆ ಮರಳುವುದನ್ನು ಎದುರು ನೋಡಬಹುದು.

**ಭಾರತ ಟಿ20 ತಂಡ:** ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಶುಭಮನ್ ಗಿಲ್ (ಉಪನಾಯಕ), ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ಶಿವಂ ದುಬೆ, ಅಕ್ಷರ್ ಪಟೇಲ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್, ರಿಂಕು ಸಿಂಗ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಹರ್ಷಿತ್ ರಾಣಾ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**